₹ 5/-

# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** Vol XXXI - 5 June 2013



ಬೆಂಗಳೂರಿನಲ್ಲಿ ಮೈಸೂರು ಅಸೋಸಿಯೇಶನ್ನಿನ ನಾಟಕ ತಂಡ

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

# ಬೆಂಗಳೂರಿನಲ್ಲಿ ಮೈಸೂರು ಅಸೋಸಿಯೇಶನ್ನಿನ ನಾಟಕ ತಂಡ ಮೂರು ದಿನಗಳ ಕನ್ನಡ ನಾಟಕೋತ್ಸವ


ಬೆಳ್ಳಿ ಬೈಲು ನಾಟಕದ ಒಂದು ದೃಶ್ಯ

ಮುಂಬೈನ ಮೈಸೂರು ಅಸೋಸಿ0ಯೇಷನ್ ಮತ್ತು ಬೆಂಗಳೂರಿನ ಕಲಾ ಪ್ರೇಮಿ ಫೌಂಡೇಷನ್ ಜೊತೆಗೂಡಿ ಜೂನ್ 1, 2, 3 ರಂದು ಮೂರು ದಿನಗಳ ಕನ್ನಡ ನಾಟಕೋತ್ಸವವನ್ನು ಏರ್ಪಡಿಸಿದ್ದರು. ಈ ಉತ್ಸವದಲ್ಲಿ ಮೈಸೂರು ಅಸೋಸಿ0ಯೇಷನ್ನಿನ ಲಲಿತ ಕಲಾ ವಿಭಾಗದ ಕಲಾವಿದರು ಎರಡು ನಾಟಕಗಳನ್ನು ಪ್ರದರ್ಶಿಸಿದರು. ಮುಂಬೈ ಕನ್ನಡಿಗರ ಪ್ರತಿಷ್ಠಿತ ಸಂಘವಾದ ಮೈಸೂರು ಅಸೋಸಿ0ಯೇಷನ್ ಕಳೆದ 8 ದಶಕಗಳಿಂದ ಸತತವಾಗಿ ಕನ್ನಡ ರಂಗಭೂಮಿ0ಯಲ್ಲಿ ಸಕ್ರಿ0ಯವಾಗಿ ತೊಡಗಿಸಿಕೊಂಡು ವಿವಿಧ ರೀತಿಯಲ್ಲಿ ಭಾಗವಹಿಸುತ್ತಾ ಬಂದಿದೆ. ಈ ನಾಟಕೋತ್ಸವವನ್ನು ಆಯೋಜಿಸಲು ಶ್ರೀಯುತರಾದ ಎಂ. ಎ. ಎನ್. ಪ್ರಸಾದ್, ಶ್ರೀನಿವಾಸ್ ಕಪ್ಪಣ್ಣ, ಸಿ ವಿ ನಾಗರಾಜಮೂರ್ತಿ, ಹಾಗೂ ಅಂತರಂಗ ತಂಡದ ಶ್ಯಾಮಸುಂದರ್ (ಅಂಕಲ್ ಶ್ಯಾಮ್) ಅವರು ವಿಶೇಷವಾಗಿ ಕಾರಣರಾಗಿರುತ್ತಾರೆ. ಈ ನಾಟಕಗಳ ಪ್ರಯೋಗಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಪ್ರಾಯೋಜಿಸಿತ್ತು. ಇವರೆಲ್ಲರ ಸಹಾಯವನ್ನು ಮೈಸೂರು ಅಸೋಸಿಯೇಶನ್ ಕೃತಜ್ಞತೆಯಿಂದ ಸ್ಮರಿಸುತ್ತದೆ.



ಜೂನ್ 1 ರಂದು ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ 'ಬೆಳ್ಳಿ ಬೈಲು' ಎಂಬ ನಾಟಕ ಆಡಲಾಯಿತು. ಇದು ದಿನಪತ್ರಿಕೆಗಳಲ್ಲಿ ಬಂದ ವರದಿಗಳ ತುಣುಕುಗಳನ್ನು ಹೆಣೆದು ಬರೆದ ಕಥೆ. ನಾಟಕವು ಹಣ ಮತ್ತು ಪ್ರಭಾವವಿರುವ ವ್ಯಕ್ತಿ0ಯು ಹೇಗೆ ಸಮಾಜದಲ್ಲಿ ಎಲ್ಲಾ ವ್ಯವಸ್ಥೆಗಳನ್ನು ಕಡೆಗಣಿಸಿ ತನ್ನ ಗುರಿ0ಯನ್ನು ಸಾಧಿಸಿಕೊಳ್ಳಬಹುದು ಎಂಬುದನ್ನು ಒಂದು ಕಾಫಿ ಎಸ್ಟೇಟಿನ ಒಬ್ಬ ಹರಿಜನ ಯುವ ಕಾರ್ಮಿಕನನ್ನು ಮಾಲೀಕನು ಗುಂಡಿಟ್ಟು ಕೊಂದು ಅವನ ಮೂತ್ರಪಿಂಡ ಒಂದನ್ನು ತನ್ನ ಹೆಂಡತಿಗೆ ಕಸಿಮಾಡಿಸಿ, ಆ ಕಾರ್ಮಿಕನ ಸಾವು ಒಂದು ಆಕಸ್ಮಿಕವೆಂದು ಸಾಧಿಸುವ ಹಗರಣದ ಮೂಲಕ, ಪ್ರೇಕ್ಷಕರ ಮನಮುಟ್ಟುವಂತೆ ಚಿತ್ರಿಸುತ್ತದೆ. ನ್ಯಾಯಾಲಯದಲ್ಲಿ ನಡೆಯುವ ವಿಚಾರಣಾ ದೃಶ್ಯಗಳು ಬಹಳ ಪ್ರಭಾವಿ0ಯಾಗಿ ಮೂಡಿ ಬಂದು ನಾಟಕ ಪ್ರೇಕ್ಷಕರನ್ನು ರಂಜಿಸುವುದರಲ್ಲಿ 0ಯಶಸ್ವಿ0ಯಾಗಿತ್ತು. ಕೊಲೆಯ ಹಿಂದಿನ ಉದ್ದೇಶವನ್ನು ಪದರ ಪದರವಾಗಿ ಬಿಡಿಸುವ ನಾಟಕಕಾರನ ತಂತ್ರವು ಬಹಳ ಪರಿಣಾಮಕಾರಿಯಾಗಿತ್ತು. ಇದೇ ನಾಟಕದ ಒಂದು ಪ್ರದರ್ಶನವು ಮೇ 24 ರಂದು ಮುಂಬೈಯಲ್ಲಿಯೂ ಅಸೋಶಿಯೇಶನ್ನಿನ ಸಭಾಂಗಣದಲ್ಲಿ ನೆರವೇರಿತ್ತು. ಪಾತ್ರವರ್ಗದಲ್ಲಿ ಎಲ್ಲ ನಟರ ನಿರ್ವಹಣೆ ಸಮರ್ಪಕವಾಗಿತ್ತು. ನ್ಯಾಯಾಧೀಶರಾಗಿ ಸಿ. ಎಸ್. ದಿನೇಶ್, ಐ.ಜಿ.ಪಿ. ಯಾಗಿ ಆರ್. ಎಸ್. ರಂಗನಾಥ್, ಕಾಫಿ ಎಸ್ಟೇಟ್ ಮಾಲೀಕನಾಗಿ ಕೆ. ಮಂಜುನಾಥಯ್ಯ, ಮಾಲೀಕನ ಪತ್ನಿಯಾಗಿ ಲಕ್ಷ್ಮೀ ಸೀತಾರಾಮ್, ಮಾಲೀಕನ ವೃದ್ಧ ಸೇವಕನಾಗಿ ಗಿರೀಶ್ ಶೆಟ್ಟಿ, ಹರಿಜನ ಯುವಕನ ತಾಯಿಯಾಗಿ ರಮಾ ವಸಂತ್, ತಂಗಿಯಾಗಿ ಮೈತ್ರಿ ರಾಧೇಶ್, ಪತ್ರಕರ್ತೆಯಾಗಿ ಪೂರ್ಣಿಮಾ ಗೋಪಾಲಕೃಷ್ಣ, ವಕೀಲರಾಗಿ ಶಶಿಕಾಂತ್ ಜೋಶಿ, ಎಸ್. ನಂದ, ಮತ್ತು ಗಣಪತಿ ಶಂಕರಲಿಂಗ, ಸಾಕ್ಷಿಗಳಲ್ಲಿ ಡಾ. ಮೇದಪ್ಪನಾಗಿ ಎ. ಜಿ. ವೆಂಕಟೇಶ್, ಇನ್ಸ್ಪೆಕ್ಟರ್ ಆಗಿ ಎಸ್. ಅನಂತಕೃಷ್ಣ, ನ್ಯಾಯಾಲಯದ ಮಾರ್ಶಲ್ ಆಗಿ ಸುಧಾಕರ ಪೂಜಾರಿ ಮತ್ತು ನ್ಯಾಯಾಲಯದ ಲಿಪಿಕಾರಳಾಗಿ ಶ್ಯಾಮಲಾ ರಾಧೇಶ್ ಪಾತ್ರ ನಿರ್ವಹಿದರು. ಬಾಲಕಿ ಮೈತ್ರಿಯ ಪಾತ್ರ ವಿಶೇಷವಾಗಿ ಗಮನ ಸೆಳೆಯಿತು.


ಸಾಕಾರ ನಾಟಕದ ಒಂದು ದೃಶ್ಯ

ಇದೇ ಸಮಯದಲ್ಲಿ 40 ರ ದಶಕದಿಂದ ಇಂದಿನ ವರೆಗೆ, ಕಳೆದ ಏಳು ದಶಕಗಳಲ್ಲಿ ಮೈಸೂರು ಅಸೋಸಿ0ಯೇಷನ್ನಿನ ಕಲಾತಂಡ ಅರ್ಪಿಸಿದ ನಾಟಕಗಳ ಒಂದು ಛಾ0ಯಾಚಿತ್ರ ಪ್ರದರ್ಶನವನ್ನೂ ಸಹ ಏರ್ಪಡಿಸಲಾಗಿತ್ತು. ಅನೇಕ ಹೆಸರಾಂತ ಕಲಾವಿದರನ್ನು ರಂಗಭೂಮಿಗೆ ಪರಿಚಯಿಸಿದ ಖ್ಯಾತಿ ಅಸೋಸಿಯೇಶನ್ನಿಗೆ ಸಲ್ಲುತ್ತದೆ. ಅವರಲ್ಲನೇಕರ ಛಾ0ಯಾಚಿತ್ರವನ್ನು ವೀಕ್ಷಕರು ಅಂದು ಪ್ರದರ್ಶನದಲ್ಲಿ ಕಾಣಬಹುದಾಗಿತ್ತು.

ಜೂನ್ 2 ರಂದು 'ಸಾಕಾರ' ಎಂಬ ನಾಟಕವನ್ನು ಮಲ್ಲೇಶ್ವರದ ಸೇವಾ ಸದನದ ಸಭಾಂಗಣದಲ್ಲಿ ಪ್ರದರ್ಶಿಸಲಾಯಿತು. ಇದೊಂದು ಸಂಗೀತ ನಾಟಕ. ಇದರಲ್ಲಿ ಇಬ್ಬರು ಸ್ನೇಹಿತರು ಒಬ್ಬ ಸಿರಿವಂತ ಮತ್ತೊಬ್ಬ ಬಡವ ಜೊತೆಗೂಡಿ ಪಂಢರಾಪುರಕ್ಕೆ ಹೋಗಿ ವಿಠ್ಠಲನ ದರ್ಶನ ಮಾಡಲು ಆಸೆ ಪಡುವುದೇ ಕಥೆ0ಯು



# ನೇಸರು
## ತಿಂಗಳೋಲೆ

ಸಂಪುಟ 31 ಜೂನ್ 2013 ಸಂಚಿಕೆ 6



ಗೌ. ಸಂಪಾದಕರು :

**ಡಾ. ಗಿರಿಜಾ ಶಾಸ್ತ್ರಿ**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎನ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖



ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್

393, ಭಾವು ದಾಜಿ ರಸ್ತೆ,

ಮಾಟುಂಗ,

ಮುಂಬಯಿ-400 019.

✆ 24024647 / 2403 7065

Fax : 2401 0574

Email :
mysoreassociation.mumbai@gmail.com

Website :
www.mysoreassociation.in


# ಎನ್ನ ಮನದ ದುರಾಶೆಯ ಮಾಣಿಸಾ.........

ಮುಂಬಯಿಗೆ ನಿರೀಕ್ಷೆಗಿಂತಲೂ ಮೊದಲು ಮಳೆ ಬಿದ್ದು ಎಲ್ಲರನ್ನು ಅಚ್ಚರಿಗೊಳಿಸಿತ್ತು. ಧೂಳು ತುಂಬಿದ ಎಲೆಗಳು ಶುಭ್ರವಾಗಿ ಮೈತೊಳೆದುಕೊಂಡು ಹಗುರಾಗಿ ಉಸಿರಾಡುತ್ತಿದ್ದವು. ಅವಭೃತ ಸ್ನಾನ ಮಾಡಿದಂತೆ ನಗರದ ಮುಖ ಬೆಳಕಾಗಿತ್ತು. ಆಕಾಶ ಕೂಡ ತೊಳೆದಂತಿತ್ತು. ಮಳೆಬಿದ್ದ ನೆಲದಲ್ಲಿ ಘಮ್ಮನೆ ಮಣ್ಣು! ಹಕ್ಕಿಗಳಿಗೂ ಪುಕ್ಕಬಂದು ಉತ್ಸಾಹದಿಂದ ಹಾರಾಡುತ್ತಿದ್ದವು. ಗತಿಸಿದ ಎಮ್. ಎಸ್. ಗೋಪಾಲಕೃಷ್ಣರ 'ಚಕ್ರವಾಕ' ಗಾಳಿಯ ಸೆರಗಲ್ಲಿ ಹಗುರುವಾಗಿ ಹರಿಯುತ್ತಿತ್ತು. ಹೀಗಾಗಿ ಮಳೆಬಿದ್ದ ಮರುದಿನದ ಮುಂಜಾವು ಒಂದು ದಿವ್ಯದ ಬೆಳಗನ್ನು ಸಾರುತ್ತಿತ್ತು. ಈ ದಿವ್ಯತೆ ಒದಗಿಸಿದ ಹಿನ್ನೆಲೆಯಲ್ಲಿ ಅವಳು ಕೇಳಿದಳು–

ಸತತವಾಗಿ ತಿರುಗುವ ಭೂಮಿ, ತಪ್ಪದೇ ಬರುವ ಸೂರ್ಯ, ನಿಲ್ಲದೇ ಬೀಸುವ ಗಾಳಿ ಇದೆಲ್ಲಾ ಹೇಗೆ ನಿರಂತರವಾಗಿ ನಡೆಯುತ್ತಾ ಬಂದಿದೆ. ಎಂತಹ ವಿಸ್ಮಯ ಅಲ್ಲವಾ?

ಅವನು ಹೇಳಿದ ಹೌದು, ಅಲ್ಲಿ ಅಪಘಾತಗಳು ಜರುಗುವುದಿಲ್ಲ ನೋಡು!

ಹೌದಲ್ಲವಾ ! ಯಾಕೆ? ಅಪಘಾತಗಳಾಗುವುದಿದ್ದರೂ ಅದು ನಮ್ಮ ಕಾರಣದಿಂದ.

ಯಾಕಂದರೆ ಅವು ತಮ್ಮ ಕಕ್ಷೆಯಲ್ಲೇ ತಾವು ಸುತ್ತುತ್ತವೆ. ಕಕ್ಷೆ ಮೀರಿ ಬಂದರೆ ತಾನೇ ಅಪಘಾತ?

ಹೌದು, ಕಕ್ಷೆಯನ್ನು ಮೀರಿ ಇನ್ನೊಂದರ ಒತ್ತುವರಿ ಮಾಡಿಕೊಂಡು, ತಮ್ಮ ಸಾಮ್ರಾಜ್ಯ ವಿಸ್ತರಿಸಿಕೊಳ್ಳುವ ಲಾಲಸೆ ಅವಕ್ಕಿಲ್ಲವಲ್ಲಾ!

ಅಷ್ಟೇ ಅಲ್ಲ, ಅಲ್ಲಿ ಅಪಘಾತವಾಗಲು ಮೇಲು ಕೀಳೆಂಬುದಿಲ್ಲ, ಸ್ಪರ್ಧೆಗಳಿಲ್ಲ. ಎಲ್ಲಿಯವರೆಗೆ ಇವು ನಾಶವಾಗುವುದಿಲ್ಲವೋ ಅಲ್ಲಿಯವರೆಗೆ ಅಪಘಾತ ತಪ್ಪಿದ್ದಲ್ಲ. ವಿಶ್ವದ ಚಲನೆಗೆ ತನ್ನದೇ ಆದ ವ್ಯವಸ್ಥೆಯಿದೆ. ಅದು ನಮಗೆ ಸಹಕಾರಿಯಾಗಿರಲು ನಾವು ಅದಕ್ಕೆ ಅವಕಾಶ ಕೊಡಬೇಕು.

ಪಾರ್ಕಿನಿಂದ ಹೊರಬಿದ್ದ ಆ ಇಬ್ಬರೂ ನಡೆದು ಬರುತ್ತಿದ್ದರು. ಮಳೆ ಬರುವ ಮುನ್ನ ಚರಂಡಿಗಳಿಂದ ಕಸವನ್ನು ಹೂಳೆತ್ತುವ ಕೆಲಸ ಮುಗಿದಿತ್ತು. ರವಾನೆಯಾಗದೇ ಗುಪ್ಪೆಯಾಗಿ ಕುಳಿತ ಕಸದ ರಾಶಿ ಮಾತ್ರ ಮಳೆಯ ಜೊತೆ ಮತ್ತೆ ಚರಂಡಿ ಸೇರುತ್ತಿತ್ತು. ಪ್ಲಾಸ್ಟಿಕ್ ಚೀಲಗಳ ಸಮುದ್ರ ತೇಲುತ್ತಿತ್ತು. ಗುಂಡಿ ಬಿದ್ದ ಕಡೆ ಟಾರಿನ ತೇಪೆಯನ್ನು ಹಾಕಲಾಗಿತ್ತು. ಈ ಸಲ ಮುಂಬಯಿಗೆ ಸುನಾಮಿ ಬರುತ್ತದಂತೆ ಎಂದು ಗೆಳತಿ ಹೇಳಿದ್ದಳು.

ಸುನಾಮಿ ಬರುತ್ತದಂತೆ ! ಹೌದೇ?

ಗೊತ್ತಿಲ್ಲ. ಬಂದರೇನೂ ಆಶ್ಚರ್ಯವಿಲ್ಲ.

ಇಲ್ಲ. ಅದು ಬರದಿದ್ದರೇನೇ ಆಶ್ಚರ್ಯವಾಗುತ್ತೆ.

**– ಡಾ. ಗಿರಿಜಾ ಶಾಸ್ತ್ರಿ**

---

ವಿಷ೦ು. ಈ ಹಿನ್ನೆಲೆ೦ುಲ್ಲಿ ದೇವರು ನಮ್ಮಲ್ಲಿ೦ೀ ಇದ್ದಾನೆ ಅವನನ್ನು ಸಾಕಾರ ಗೊಳಿಸಿಕೊಳ್ಳಲು ನಾವು ನಮ್ಮೊಳಗೆ ನೋಡಬೇಕು, ಹೊರಗೆಲ್ಲೂ ಹುಡುಕಬೇಕಾಗಿಲ್ಲ ಎಂಬುವ ಸಂದೇಶವನ್ನು ನಾಟಕ ೦ುಶಸ್ವಿ೦ಾಗಿ೦ೂ, ಮನಮುಟ್ಟುವ ರೀತಿ೦ುಲ್ಲೂ ತಿಳಿಸುತ್ತದೆ. ಸಂಗೀತಕ್ಕೆ ಸಮ೦ೋಚಿತವಾಗಿ ದಾಸರಪದಗಳನ್ನು ಉಪ೦ೋಗಿಸಿರುವುದು ನಾಟಕಕ್ಕೆ ಕಳೆ ಕಟ್ಟಿತು. ಸೂತ್ರಧಾರನಾಗಿ ಆರ್. ಎಸ್. ರಂಗನಾಥ್, ಶ್ರೀಮಂತನಾಗಿ ಗಣಪತಿ ಶಂಕರಲಿಂಗ, ಶ್ರೀಮಂತನ ಪತ್ನಿಯಾಗಿ ವೀಣಾ ಜೋಶಿ, ಶ್ರೀಮಂತನ ಮಗನಾಗಿ ಎ. ಜಿ. ವೆಂಕಟೇಶ್, ಬಡ ನೇಕಾರನಾಗಿ ಸಿ. ಎಸ್. ದಿನೇಶ್, ನೇಕಾರನ ಪತ್ನಿಯಾಗಿ ರಮಾ ವಸಂತ್, ವೃದ್ಧ ಭಿಕ್ಷುಕನಾಗಿ ಗಿರೀಶ್ ಶೆಟ್ಟಿ, ಬಡವೆಯಾಗಿ ಕೃಷ್ಣಕುಮಾರಿ ಶೆಟ್ಟಿ, ಮತ್ತು ಪಂಢರಾಪುರ ಯಾತ್ರಾರ್ಥಿಗಳಾಗಿ ಲಕ್ಷ್ಮಿ ಸೀತಾರಾಮ್, ಶ್ಯಾಮಲಾ ರಾಧೇಶ್, ಎಸ್. ಅನಂತಕೃಷ್ಣ, ಶಶಿಕಾಂತ್ ಜೋಶಿ, ಪೂರ್ಣಿಮಾ ಗೋಪಾಲಕೃಷ್ಣ, ಎಸ್. ನಂದ, ಸುಧಾಕರ ಪೂಜಾರಿ, ಮೈತ್ರಿ ರಾಧೇಶ್ ಮತ್ತು ಪುಟ್ಟ ಗಣಪತಿಯಾಗಿ ಮಹತಿ ರಾಧೇಶ್ ಪಾತ್ರ ನಿರ್ವಹಿಸಿದರು.

ಈ ನಾಟಕದ ನಂತರ ಖ್ಯಾತ ಹಾಸ್ಯ ಕಲಾವಿದರಾದ ಶ್ರೀ. ವೈ. ವಿ. ಗುಂಡೂರಾವ್ ಅವರಿಂದ ನವಿರಾದ ಹಾಸ್ಯ ಚಟಾಕಿಯ ಕಾ೯ರ್ುಕ್ರಮವಿತ್ತು.

ಎರಡು ನಾಟಕಗಳನ್ನೂ ಡಾ. ಬಿ. ಆರ್. ಮಂಜುನಾಥ್ ಅವರು ಬರೆದು ಆಡಿಸಿದ್ದಾರೆ. ಅವರೇ ಈ ನಾಟಕಗಳ ರಂಗ ಸಜ್ಜಿಕೆ ಮತ್ತು ಬೆಳಕಿನ ವಿನ್ಯಾಸವನ್ನೂ ಮಾಡಿದ್ದಾರೆ.

ಜೂನ್ 3 ರಂದು ಮತ್ತೊಮ್ಮೆ ಬೆಳ್ಳಿ ಬೈಲು ನಾಟಕ ಪ್ರದರ್ಶನವನ್ನು ಬೆಂಗಳೂರಿನ ಅಂತರಂಗ ಕನ್ನಡ ನಾಟಕ ತಂಡ ದವರು ಜಯನಗರದ ಎಚ್.ಎನ್.ಕಲಾಕ್ಷೇತ್ರದಲ್ಲಿ ಏರ್ಪಡಿಸಿದ್ದರು.

ಈ ಮೂರು ದಿನಗಳ ನಾಟಕೋತ್ಸವ ನಾಟಕ ಪ್ರೇಮಿಗಳನ್ನು ರಂಜಿಸಿತು. ಈ ಮೂರು ದಿನಗಳು ಬೆಂಗಳೂರಿನಲ್ಲಿ ಮಳೆಯ ಮಧ್ಯೆಯೂ ಪ್ರೇಕ್ಷಕರು ನಾಟಕವನ್ನು ನೋಡಲು ಬಂದಿದ್ದು ವಿಶೇಷವಾಗಿತ್ತು. ಬೆಂಗಳೂರಿನಲ್ಲಿ ನೆಲೆಸಿರುವ ಮೈಸೂರು ಅಸೋಸಿಯೇಶನ್ನಿನ ಎಲ್ಲಾ ಹಳೆಯ ಹೊಸ ಸದಸ್ಯಮಿತ್ರರ ಭಾಗವಹಿಸುವಿಕೆಯಿಂದ ನಾಟಕೋತ್ಸವಕ್ಕೆ ಹಬ್ಬದ ಕಳೆ ಬಂದಿತ್ತು.

# ಮಹಾರಾಷ್ಟ್ರದ ಶ್ರೀ ಅಷ್ಟವಿನಾಯಕ ದರ್ಶನ

**ವಕ್ರತುಂಡ ಮಹಾಕಾಯ ಸೂರ್ಯಕೋಟಿ ಸಮಪ್ರಭ ! ನಿರ್ವಿಘ್ನಂ ಕುರುಮೇ ದೇವಾ ಸರ್ವಕಾರ್ಯೇಶು ಸರ್ವದಾ ||**

'ಗಣ' ಅಂದರೆ ಪ್ರಮಥ ಜನಗಳು. ಗಣಗಳ ನಾಯಕನಿಗೆ ಗಣನಾಯಕ ಅಥವಾ ಗಣಪತಿ ಎಂದು ಕರೆಯುತ್ತಾರೆ. ಈಗ ಗಣಾಧಿಪತಿಗೆ ಅಗ್ರಪೂಜೆಯ ಸ್ಥಾನ ಪ್ರಾಪ್ತವಾಗಿದೆ. ಯಾವುದೇ ಕೆಲಸ ಪ್ರಾರಂಭಿಸುವ ಮುನ್ನ ಇವರ ಪೂಜೆ ಮಾಡಲ್ಪಡುತ್ತದೆ ಮತ್ತು ಇವರನ್ನು ಮಂಗಳಮೂರ್ತಿ ಎಂದೂ ಕರೆಯುತ್ತಾರೆ. ಸಾಮಾನ್ಯ ಜನತೆ ಇವರನ್ನು ಗಣಪತಿ ಬಪ್ಪ ಎಂದೂ ಸಹ ಕರೆಯುತ್ತಾರೆ.

ಶ್ರೀ ಗಣೇಶನು ಯುದ್ಧದಲ್ಲಿ ಕುಶಲ ಸೇನಾ ನಾಯಕನೂ ನೃತ್ಯ ಕಲೆಯಲ್ಲಿ ನಿಪುಣನೂ ಆಗಿದ್ದಾನೆ. ಅ.ಉ.ಮ. ಇವುಗಳ ಅರ್ಧಮಾತ್ರೆಯಿಂದ ಓಂಕಾರ ನಿರ್ಮಾಣವಾಗಿದೆ. ಈ ಓಂಕಾರ ಶಬ್ದದಿಂದಲೇ ವಿಶ್ವ ನಿರ್ಮಾಣದ ಕಲ್ಪನೆ ಮಾಡಲ್ಪಟ್ಟಿದೆ. ಅಂದರೆ ಶ್ರೀ ಗಣೇಶನು ವಿಶ್ವದೇವತೆಯಾಗಿದ್ದಾನೆ. ಸಂತ ಜ್ಞಾನೇಶ್ವರರು ಶ್ರೀ ಗಣೇಶನ ವರ್ಣನೆ ಮಾಡುತ್ತ ಹೀಗೆಂದಿದ್ದಾರೆ. ಶ್ರೀ ಗಣೇಶನ ಕೈಲಿ ಇರುವ ಪರಶು ತರ್ಕವಾಗಿದೆ ಮತ್ತು ಮೋದಕವೆಂದರೆ ಮಹಾರಸದಿಂದ ತುಂಬಿದ ವೇದಾಂತ. ಓಂಕಾರದಲ್ಲಿ ಶ್ರೀ ಗಣೇಶನ ರೂಪವನ್ನು ನೋಡಿರುವ ಸಂತ ಜ್ಞಾನೇಶ್ವರರು ಈ ರೀತಿಯ ಹೇಳಿದ್ದಾರೆ. 'ಅ' ಕಾರ ಎಂದರೆ ಶ್ರೀ ಗಣೇಶನ ಪಾದಕಮಲಗಳು 'ಉ' ಕಾರ ಶ್ರೀ ಗಣೇಶನ ಉದರವಾಗಿದೆ 'ಮ' ಎಂದರೆ ಮಹಾಮಂಡಲಾಕಾರದ ಮಸ್ತಕವಾಗಿದೆ. ಈ ರೀತಿಯ ಪ್ರಾಸಾದೀತ ವರ್ಣನೆ ಸಂತ ಜ್ಞಾನೇಶ್ವರರ ಹೊರತು ಬೇರಾರೂ ಮಾಡಲಾರರು. ಶ್ರೀ ಗಣೇಶನ ಉದರ ದೊಡ್ಡದು. ಕಣ್ಣುಗಳು ಸಣ್ಣವು. ಶ್ರೀ ಗಣೇಶನು ತನ್ನ ಉದರದಲ್ಲಿ ಭಕ್ತವೃಂದದ ಲೋಪದೋಷಗಳನ್ನು ತುಂಬಿಕೊಂಡು ಲಂಬೋದರನೆನಿಸಿದ್ದಾನೆ. ದುಷ್ಟರನ್ನು ಮರ್ದಿಸಿ 'ವಕ್ರತುಂಡ' ಎಂದು ಹೆಸರು ಗಳಿಸಿದ್ದಾನೆ. ರಾಕ್ಷಸರೊಡನೆ ಹೋರಾಡುತ್ತಿರುವಾಗ ಒಂದು ಹಲ್ಲು ಕಳೆದುಕೊಂಡ ಈತನಿಗೆ ಏಕದಂತ ಎಂಬ ಹೆಸರೂ ಬಂತು. ತನ್ನ ಭಾಲಪ್ರದೇಶದಲ್ಲಿ ಚಂದ್ರನನ್ನು ಹೊಂದಿರುವ ಈತನನ್ನು ಭಾಲಚಂದ್ರ ಎಂದೂ ಕರೆಯುತ್ತಾರೆ.

ಶ್ರೀ ಗಣೇಶನ ಸೊಂಡಿಲು ಬಲಕ್ಕೆ ವಾಲಿದ್ದರೆ, ಬಲಮುರಿ ಗಣೇಶನೆಂದೂ ಎಡಕ್ಕೆ ವಾಲಿದ್ದರೆ ಎಡಮುರಿ ಗಣೇಶನೆಂದೂ ಕರೆಯಲ್ಪಟ್ಟಿದೆ. ಶ್ರೀ ಗಣೇಶ ನಿಗೆ ಮೋದಕ, ಶಮಿ ಮತ್ತು ಮಂದಾರದ ಎಲೆಗಳ ಪೂಜೆ ಮತ್ತು ಮೋದಕದ ಪ್ರಸಾದ ಅತ್ಯಂತ ಪ್ರಿಯಕರ ಶ್ರೀ ಗಣೇಶನ ಔಪಾಸನೆಯಲ್ಲಿ ಬ್ರಹ್ಮಣಸ್ಪತಿ ಸೂಕ್ತ ಅಥವಾ ಶೀರ್ಷ ಗಣೇಶ ಮಹಿಮ, ಗಣೇಶ ಗೀತ, ಗಣೇಶ ಪುರಾಣ ಮತ್ತು ಮಂದಗಲ್ ಪುರಾಣ ಇವುಗಳ ಪಠಣಕ್ಕೆ ಬಹಳ ಮಹತ್ವ ನೀಡಿದ್ದಾರೆ. ಮೋರೆಗಾವ್‌ನಲ್ಲಿರುವ ಶ್ರಿ ಗಣೇಶ ನನ್ನು 'ಬ್ರಹ್ಮಣಸ್ಪತಿ' ಸೂಕ್ತ ಮೂಲಕ ಸ್ತುತಿಸಲಾಗುತ್ತದೆ. 'ಕಲಾ ಚಂಡಿ ವಿನಾಯಕಾ' ಎಂಬ ಒಂದು ವಚನ ವಿಖ್ಯಾತವಾಗಿದೆ. ಅಂದರೆ ಕಲಿಯುಗದಲ್ಲಿ ಚಂಡಿ ಅಥವಾ ದುರ್ಗೆ ಮತ್ತು ಶ್ರೀ ಗಣೇಶ ಇವರು ಮಾತ್ರ ಭಕ್ತ ಜನರ ಕಲ್ಯಾಣ ಮಾಡಲು ಅರ್ಹರಾಗಿದ್ದಾರೆ. ಮಹಾರಾಷ್ಟ್ರದಲ್ಲಿರುವ ಹಲವಾರು ಗಣೇಶ ಮಂದಿರಗಳಲ್ಲಿ ಕೆಲವಾರು ಅತ್ಯಂತ ಪ್ರಭಾವಶಾಲಿಗಳಾಗಿವೆ. ಇವುಗಳಲ್ಲಿ 8 ಸ್ಥಳಗಳು ಶ್ರೀ ಗಣೇಶನಿಗೆ ಅತ್ಯಂತ ಪ್ರಿಯವಾಗಿವೆ. ಇವುಗಳೇ ಅಷ್ಟ ವಿನಾಯಕ ಎಂಬ ಹೆಸರಿನಿಂದ ಪ್ರಸಿದ್ಧವಾಗಿವೆ. ಈ ಎಲ್ಲಾ ಅಷ್ಟ ವಿನಾಯಕ ಮೂರ್ತಿಗಳು ಸ್ವಯಂ ಉದ್ಭವವಾಗಿವೆ. ಇವುಗಳು ಯಾವ ರೀತಿಯಲ್ಲಿ ಉದ್ಭವಗೊಂಡವೋ ಅದೇ ರೂಪದಲ್ಲಿ ಪ್ರತಿಷ್ಠಾಪನೆ ಮಾಡಲಾಗಿದೆ. ಈ ಮೂರ್ತಿಗಳು ಮಾನವರು ಕೆತ್ತಿ ಮಾಡಿದ ಸುಂದರ ವಿಗ್ರಹಗಳಾಗದಿದ್ದರೂ ತಮ್ಮ ಸ್ವಯಂಭು ರೂಪವನ್ನು ಹೊತ್ತು ಜನರ ಆಕರ್ಷಣೆಗೆ ಒಳಗಾಗಿವೆ.

ಸ್ವಸ್ತಿಶ್ರೀ ಗಣನಾಯಕಂ ಗಜಮುಖಂ ಮೋರೇಶ್ವರಂ ಸಿದ್ದೀದಂ| ಬಲ್ಲಾಳಂ, ಮುರುಡಂ ವಿನಾಯಕ ಮಡಂ ಚಿಂತಾಮಣಿ ಕೇವರಂ || ಲೇಣ್ಯಾದ್ರಿ ಗಿರಿಜಾತ್ಮಕಂ ಸುವರ್ಧಂ, ವಿಘ್ನೇಶ್ವರ ಜರಂ | ಗ್ರಾಮೇ ರಾಂಜನ ಸಂಸ್ಥಿತೇ ಗಣಪತಿ ಕುರ್ಯಾತ್ ಸದಾ ಮಂಗಳಂ ||

ಈ ಮೇಲಿನ ಮಂಗಳಾಷ್ಟಕದಿಂದ ಯಾವುದೇ ಶುಭ ಕಾರ್ಯದಲ್ಲಿ ಅಂದರೆ ಮದುವೆ ಮುಂಜಿ ವಗೈರೆ ವ್ರತ ಬಂಧನಗಳಲ್ಲಿ ಶ್ರೀ ಗಣೇಶನನ್ನು ಆಮಂತ್ರಿಸಲಾಗುತ್ತದೆ. ಈ ಶ್ಲೋಕದ ಪ್ರಕಾರ ಅಷ್ಟವಿನಾಯಕ ಕ್ಷೇತ್ರಗಳ ದರ್ಶನ ಮಾಡುವವರು, ಪ್ರಥಮವಾಗಿ ಮೋರ್‌ಗಾವಿನಲ್ಲಿರುವ ದುಯೂರೇಶ್ವರನ ದರ್ಶನದಿಂದ ಪ್ರಾರಂಭಿಸಬೇಕು. ನಂತರ ಎರಡನೆಯ ಸ್ಥಾನದಲ್ಲಿ ಸಿದ್ಧ ಟೇಕ್‌ನಲ್ಲಿರುವ ಸಿದ್ಧಿವಿನಾಯಕ ಮತ್ತು ಮೂರನೆಯ ಸ್ಥಾನದಲ್ಲಿರುವ ಸಾಲಿಗ್ರಾಮದ ಶ್ರೀ ಬಲ್ಲಾಳೇಶ್ವರನ ದರ್ಶನ ಮಾಡಬೇಕು. ಇದಾದ ನಂತರ ನಾಲ್ಕನೆಯ ಸ್ಥಾನದಲ್ಲಿರು ಮಹಾಡ್‌ನಲ್ಲಿರುವ ಶ್ರೀ ವರದ ವಿನಾಯಕ, ಐದನೆಯ ಸ್ಥಾನದಲ್ಲಿ ತೇವೂರಿನಲ್ಲಿರುವ ಶ್ರೀ ಚಿಂತಾಮಣಿ ದರ್ಶನ ನಂತರ ಜುನ್ನಾರಿಗೆ ಸಮೀಪವಿರುವ ಲೇಣ್ಯಾದ್ರಿ ಪರ್ವತ ಮೇಲಿನ ಶ್ರೀ ಗಿರಿಜಾತ್ಮಕನ ದರ್ಶನ ಮಾಡಿ ಓಜರ್‌ನಲ್ಲಿರುವ ಶ್ರೀ ವಿಘ್ನೇಶ್ವರನ ದರ್ಶನ ಮಾಡಿದ ನಂತರ ಎರಡನೆಯ ಸ್ಥಾನದಲ್ಲಿ ರಾಂಜನ್‌ಗಾವಿನಲ್ಲಿರುವ ಮಹಾಗಣಪತಿ... ಮತ್ತೊಮ್ಮೆ ಮೋರೆಗಾವಿಗೆ ಬಂದು ಮಯೂರೇಶ್ವರನ ದರ್ಶನ ಪಡೆದು... ಶಾಸ್ತ್ರೋಕ್ತವಾಗಿ ಮೇಲಿನಂತೆ ಯಾತ್ರೆ ಮಾಡಲು ಎಲ್ಲಾ ಕ್ಷೇತ್ರಗಳೂ ಒಂದೇ... ರಾಷ್ಟ್ರದ ಒಳನಾಡುಗಳಲ್ಲಿ ಬೇರೆ ಬೇರೆ ಸ್ಥಳದಲ್ಲಿ ರುವುದರಿಂದ ಭಕ್ತರು.. ತಕ್ಕಂತೆ ಯಾತ್ರೆಯನ್ನು ಪೂರ್ಣಗೊಳಿಸಬಹುದಾಗಿದೆ. ಜೀವನದಲ್ಲಿ ಒಂದು ಬಾರಿಯಾದರೂ ಅಷ್ಟವಿನಾಯಕ ದರ್ಶನ ಮಾಡಬೇಕೆಂಬುದು ಭಕ್ತರ ಮನೋಕಾಮನೆಯಾಗಿರಬೇಕು.

### 1. ಮೋರೇಶ್ವರ - ಮೋರೆಗಾವ್

ನಿಜ ಭೂಸ್ವಾನಂದೇ ಜಡಭರತ ಭೌಮ್ಯಾ ಪರತರೆ
ತುರಿಯಾ ಸ್ಥೀರೆ ಪರಮ ಸುಖದೇತ್ವ ನಿವಸಸಿ ಮಯೂರಾಯ ನಾಥ ತ್ವವ ಮಸಿಚ
ಮಯೂರೇಶ ಭಗವಾನ್| ಅಧಾಸ್ವಾ ಸಂಧ್ಯಾಯೇ ಶಿವಹರಿಣಿ ಬ್ರಹ್ಮಜನಕಂ |

ಅರ್ಥ: ಮೋರೆಗಾವಿನ ಮಯೂರೇಶ್ವರನೇ, ನೀನು ಜಡಭರತ ಮುನಿಯ ಭೂಮಿಯಲ್ಲಿ ಕಣ್ಹಾ ನದಿಯ ತಟದಲ್ಲಿ ಸ್ಥಿತವಾಗಿರುವ ಭೂಸ್ವಾನಂದ ಎಂಬ ಹೆಸರಿನಿಂದ ಅತ್ಯಂತ ಸುಖದಾಯಕ ಕ್ಷೇತ್ರದಲ್ಲಿ ನಿವಾಸಿಸುತ್ತಿರುವೆ. ಹೇ ನಿರ್ಗುಣ,

**✍ ಸಿ.ಆರ್. ಅನ್ನಪೂರ್ಣ**

ಪ್ರಣವಾಕೃತಿ, ಸ್ವಯಂಭೂ ನೀನು ಯೋಗದ ಉಪಾಸನಾ ಸ್ಥಿತಿಯಲ್ಲಿ ಇರುವ ಕಾರಣ ಮಹಾದೇವನಿಗೆ ಬ್ರಹ್ಮಾನಂದವನ್ನು ಕೊಡುವ ಮಯೂರೇಶ್ವರಾ ಮತ್ತು ಮಯೂರ ಆಸನ ಪಡೆದಿರುವ ನಿನಗೆ ನನ್ನ ಪ್ರಣಾಮಗಳು. ಸಾಕ್ಷಾತ್ ಬ್ರಹ್ಮದೇವರು ನಿನ್ನ ಈ ಮಂದಿರವನ್ನು ಕಟ್ಟಿಸಿರುವುದಲ್ಲದೆ ನಿನ್ನ ಸಂರಕ್ಷಣೆಗಾಗಿ ದಕ್ಷಿಣದಲ್ಲಿ ಶಂಕರನನ್ನೂ ಉತ್ತರದಲ್ಲಿ ಸೂರ್ಯ ಭಗವಾನನನ್ನೂ ಸ್ಥಾಪಿಸಿದ್ದಾನೆ.

ಮಯೂರೇಶ್ವರ ದೇವಸ್ಥಾನದ ಪ್ರವೇಶದ್ವಾರದಲ್ಲಿ ಈ ಮೇಲಿನ ಶ್ಲೋಕವು ಬರೆಯಲ್ಪಟ್ಟಿದೆ. ಈ ಶ್ಲೋಕದ ಅನುಸಾರ ಮೋರೆಗಾವ್ ಕ್ಷೇತ್ರವನ್ನು ಭೂಸ್ವಾನಂದ ಭುವನವೆಂದು ಕರೆಯುತ್ತಾರೆ. ಹೀಗೆ ವಿಷ್ಣುವಿಗೆ ವೈಕುಂಠ ಲೋಕವೋ, ಶಂಕರನಿಗೆ ಕೈಲಾಸವೋ ಹಾಗೆಯೇ ಗಣೇಶನಿಗೆ ಸ್ವಾನಂದ ಲೋಕ ವಾಸಸ್ಥಳವಾಗಿದೆ.

ಅಷ್ಟ ವಿನಾಯಕ ಕ್ಷೇತ್ರಗಳಲ್ಲಿ ಮೋರ್‌ಗಾವ್‌ನ್ನು ಪ್ರಮುಖ ಸ್ಥಳವೆಂದು ಪರಿಗಣಿಸಲಾಗಿದೆ. ಶಾಸ್ತ್ರೋಕ್ತವಾಗಿ ಅಷ್ಟವಿನಾಯಕ ದರ್ಶನ ಮಾಡುವವರು ಪ್ರಾರಂಭ ಮತ್ತು ಅಂತ್ಯದಲ್ಲಿ ಮಯೂರೇಶ್ವರನ ದರ್ಶನ ತೆಗೆದುಕೊಳ್ಳಬೇಕು. ಬನ್ನಿ, ಮಯೂರೇಶ್ವರನಿಗೆ ಸಾಷ್ಟಾಂಗ ನಮಸ್ಕರಿಸಿ ಅಷ್ಟ ವಿನಾಯಕ ಕ್ಷೇತ್ರ ಸಂಪೂರ್ಣ ಮತ್ತು ಸಚಿತ್ರ ಮಾಹಿತಿ ಪಡೆಯೋಣ.

**ಭೌಗೋಳಿಕ ಸ್ಥಾನ ಮತ್ತು ಮಾರ್ಗ**

ಕಾಲ್ಲುಂಕಿನಲ್ಲಿ ಕನ್ಹಾ ನದಿಯ ತಟದಲ್ಲಿ ಭೂ ಸ್ವಾನಂದ ಭುವನ ಎಂದರೆ .... ಈ ಪುಣ್ಯ ಕ್ಷೇತ್ರದ ಆಕಾರ ನವಿಲಿನಂತಿದೆ. ಅದೂ ಅಲ್ಲದೆ ಹಿಂದೆ ಈ ಪ್ರಕಾರ .. ನವಿಲಿನ ಗುಂಪುಗಳೆ ಇತ್ತಂತೆ. ಆದುದರಿಂದಲೇ ಈ ಕ್ಷೇತ್ರದ ಹೆಸರು ಮೋರ್‌ಗಾವ್ ಆಗಿದೆ. (ನವಿಲು ಹಳ್ಳಿ) ಈ ಕ್ಷೇತ್ರಕ್ಕೆ ತಲುಪುವ ಮಾರ್ಗಗಳು ಇಂತಿವೆ.

ಪುಣೆಯ ಸ್ವಾರ್‌ಗೇಟ್ ಬಸ್‌ಸ್ಟ್ಯಾಂಡಿನಿಂದ ಎಸ್.ಟಿ.ಬಸ್‌ಗಳ ಸೌಕರ್ಯವಿದೆ.

ಮುಂದುವರಿಯುವುದು...

# ಆಚಾರ್ಯ ಧರ್ಮಾನಂದ ಕೊಸಂಬಿ

ಆಚಾರ್ಯ ಧರ್ಮಾನಂದ ಕೊಸಂಬಿ, (1876- 1947) ಕಳೆದ ಶತಮಾನದಲ್ಲಿ ಭಾರತ ಕಂಡ ಪೌರ್ವಾತ್ಯ ವಿದ್ವಾಂಸರಲ್ಲಿ ಅಗ್ರಗಣ್ಯರು. ಮರಾಠಿ ಪ್ರಾಥಮಿಕ ಶಿಕ್ಷಣ ಕೂಡ ಪೂರೈಸಲು ಸಾಧ್ಯವಾಗದ ಪರಿಸರದಲ್ಲಿ ಹುಟ್ಟಿ ಬೆಳೆದ ವ್ಯಕ್ತಿ. ಸ್ವಂತ ಪರಿಶ್ರಮದಿಂದ ತನ್ನ ಇಪ್ಪತ್ತೂರನೇ ವಯಸ್ಸಿನಲ್ಲಿ ಅಧ್ಯಯನ ಪ್ರಾರಂಭಿಸಿ ಬಳಿಕ ಹಾರ್ವರ್ಡ್ ಹಾಗೂ ಲೆನಿನ್‌ಗ್ರಾದ್‌ಗಳ ಪ್ರಸಿದ್ಧ ವಿಶ್ವವಿದ್ಯಾಲಯದಲ್ಲಿ ವಿಶೇಷ ಆಮಂತ್ರಿತ, ಸಂಶೋಧಕ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಪಾಲಿ ಭಾಷೆಯನ್ನು ಅಧ್ಯಯನ ಮಾಡಿ ಅದರ ಹುಟ್ಟು ನೆಲೆಯಾದ ಭಾರತದಲ್ಲಿ ಪುನಶ್ಚೇತನಗೊಳಿಸಿದರು. ಸಂಸ್ಕೃತ, ಪಾಲಿ, ಬ್ರಹ್ಮೀ, ಸಿಂಹಳಿ, ಸಯಾಮಿ ಭಾಷೆಗಳಲ್ಲಿದ್ದ ಅಪರಿಚಿತ ಬೌದ್ಧ ಧರ್ಮದ ಅಂಶಗಳನ್ನು ಮರಾಠಿ ಹಾಗೂ ಇಂಗ್ಲಿಷ್‌ನಲ್ಲಿ ಅನುವಾದಿಸಿ ಬೆಳಕಿಗೆ ತಂದರು. ಕೇವಲ ಪಾಶ್ಚಾತ್ಯ ದೃಷ್ಟಿಕೋನದಿಂದ ವಿಶ್ಲೇಷಣೆಗೆ ಒಳಪಟ್ಟ ಬೌದ್ಧ ಧರ್ಮದ ಅಧ್ಯಯನ, ಪ್ರೊ. ಕೊಸಂಬಿಯವರಿಂದಾಗಿ ಪೌರ್ವಾತ್ಯ (oriental) ರೂಪದ ಹೊಸ ಹೊಸ ಆಯಾಮಗಳನ್ನು ಪಡೆಯಿತು.

ಈ ವಿದ್ವತ್ತು, ಅವರ ಬಹುಮುಖ ಪ್ರತಿಭೆಯ ಒಂದು ಮುಖ್ಯ ಅಂಶವಷ್ಟೇ! ಅಮೇರಿಕೆಗೆ ಒಟ್ಟು ನಾಲ್ಕು ಬಾರಿ ಹೋಗಿ ಬಂದು ಹಾರ್ವರ್ಡ್ ವಿಶ್ವವಿದ್ಯಾಲಯ ತಮಗೆ ವಹಿಸಿದ 'ವಿಶುದ್ಧ ಮಾರ್ಗ' ದ ಸಂಪಾದನೆಯ ಕಾರ್ಯಭಾರ ಪೂರೈಸಿದರು. ಅಮೇರಿಕೆಯ ಮೊದಲ ಯಾತ್ರೆಯಲ್ಲೇ ಪಂಜಾಬದ ಕ್ರಾಂತಿಕಾರಿ ಮುಖಂಡ ಲಾಲಾ ಹರದಯಾಲರ ಆತ್ಮೀಯ ಸ್ನೇಹ ಹೊಂದಿದ್ದರು. ಸಮಾಜವಾದಕ್ಕೆ ಒಲಿದಿದ್ದರು. 1930 ರಲ್ಲಿ ರಷ್ಯಾದಿಂದ ಭಾರತಕ್ಕೆ ಮರಳಿದ ಬಳಿಕ ಮಹಾತ್ಮಾ ಗಾಂಧಿಯವರ ಪ್ರಭಾವಕ್ಕೆ ಒಳಗಾಗಿ, ಗುಜರಾತ್ ವಿಶ್ವವಿದ್ಯಾಲಯದಲ್ಲಿ ವೇತನವಿಲ್ಲದೇ ದುಡಿದರು. ಉಪ್ಪಿನ ಸತ್ಯಾಗ್ರಹದಲ್ಲಿ ಧುಮುಕಿದರು. ಕಾರಾಗೃಹ ವಾಸವನ್ನೂ ಅನುಭವಿಸಿದರು. ಬಿಡುಗಡೆಯ ಬಳಿಕ ಮುಂಬೈ ಕೂಲಿಕಾರರ ವಸತಿಯ ಮಧ್ಯದಲ್ಲಿ 'ಬಹುಜನ ವಿಹಾರ' ಎಂಬ ಆಶ್ರಮ ಕಟ್ಟಿದರು. ದೇಶ ವಿದೇಶಗಳಿಂದ ಭಾರತಕ್ಕೆ ಬರುತ್ತಿದ್ದ ಬೌದ್ಧ ಸಾಧುಗಳಿಗೆ ಅದು ತಂಗುದಾಣವಾಯಿತು.

ಗೋವೆಯಲ್ಲಿ ಜನ್ಮವೆತ್ತಿದ್ದ ಧರ್ಮಾನಂದ ಕೊಸಂಬಿ ಅವರಿಗೆ ಪೋರ್ಚುಗೀಸರ ಪಾರತಂತ್ರ್ಯ ಬಲವಾಗಿ ಪೀಡಿಸುತ್ತಿತ್ತು "ನನ್ನ ದೇಹದಾರ್ಢ್ಯ ಚೆನ್ನಾಗಿದ್ದರೆ ಗೋವೆಯ ವಿಮೋಚನಾ ಚಳವಳಿಯಲ್ಲಿ ಭಾಗವಹಿಸುತ್ತಿದ್ದೆ!" ಎಂದು ಗಾಂಧೀಜಿ, ನೌಖಾಲಿಯಲ್ಲಿ ಮಾಡುತ್ತಿದ್ದ ಕೆಲಸದ ಸಂದರ್ಭದಲ್ಲಿ ಉದ್ಗರಿಸಿದರೆಂದು ಅವರ ಸ್ನೇಹಿತ, ಕಾಕಾ ಕಾಲೇಲಕರು ನೆನಪಿಸಿಕೊಂಡಿದ್ದಾರೆ. ಬೌದ್ಧ ಧರ್ಮದಂತೆಯೇ ಜೈನ ಧರ್ಮವನ್ನೂ ಕೊಸಂಬಿಯವರು ಆಳವಾಗಿ ಅಭ್ಯಸಿಸಿದ್ದರು. ಗಾಂಧೀಜಿಯ ಸೇವಾ ಗ್ರಾಮ ಆಶ್ರಮದಲ್ಲಿ ತಮ್ಮ ಕೊನೆಯ ದಿನಗಳನ್ನು ಕಳೆದ ಅವರು ಜೈನರ ಸಲ್ಲೇಖನ ವಿಧಿಯ ಮಾದರಿಯಲ್ಲಿ ಶರೀರ ತ್ಯಾಗ ಮಾಡಲು ನಿಶ್ಚಯಿಸಿದರು. ಆ ಹಂತದಲ್ಲಿ ಗಾಂಧೀಜಿ ಅವರನ್ನು ತಡೆದರು. ಆದರೂ ಗಾಂಧೀಜಿ, ದಿಲ್ಲಿಯಲ್ಲಿದ್ದಾಗ ಸೇವಾಗ್ರಾಮದಲ್ಲಿ 'ಪ್ರಾಯೋಪವೇಶ' ವನ್ನು ಕೈಗೊಂಡು 40 ದಿನಗಳ ಉಪವಾಸ ಬಳಿಕ 1947 ಜೂನ್ 5 ನೇ ತಾರೀಕಿಗೆ ದೇಹತ್ಯಾಗ ಮಾಡಿದರು. ಸ್ವಾತಂತ್ರ್ಯ ಪ್ರಾಪ್ತಿಗೆ ಕೇವಲ ಎರಡೂವರೆ ತಿಂಗಳ ಮೊದಲು ದಿಲ್ಲಿಯಲ್ಲಿದ್ದ ಗಾಂಧೀಜಿಗೆ ಅವರ ದೇಹತ್ಯಾಗದ ಈ ಸಮಾಚಾರ ತಲುಪಿತು. ಅಂದಿನ ಸಾಯಂಕಾಲದ ಪ್ರಾರ್ಥನಾ ಸಭೆಯಲ್ಲಿ ಅವರು ಧರ್ಮಾನಂದ ಕೋಸಂಬಿಯವರಿಗೆ ಹೃದಯಂಗಮ ಶ್ರದ್ಧಾಂಜಲಿಯನ್ನು ಸಲ್ಲಿಸಿದರು. 'ರಾಜಕಾರಣದಲ್ಲಿ ಮೆರೆಯುತ್ತ ತಮ್ಮ ಕೆಲಸದ ಪ್ರಚಾರವನ್ನೇ ಮಾಡುವವರನ್ನು ನಾವು ಆದರಿಸುತ್ತೇವೆ ! ಸದ್ದಿಲ್ಲದೇ ದುಡಿಯುವವರನ್ನು ಗುರುತಿಸುವದಿಲ್ಲ. ಧರ್ಮಾನಂದರು ಇಂಥ ಅಪರೂಪದ ವ್ಯಕ್ತಿಯಾಗಿದ್ದರು' ಎಂದು ಗಾಂಧೀಜಿ ಉದ್ಗರಿಸಿದ್ದರು. 'ಧರ್ಮಾನಂದರ ಆಳವಾದ ಪಾಂಡಿತ್ಯವನ್ನು ಅರಿಯುವದು ಸಂಸ್ಕೃತ ಪಾಲಿ ಬಾರದ ನನಗೆ ಸಾಧ್ಯವಾಗಲಿಲ್ಲ....ಅವರ ಸಂಯಮದ ಸಾವು ನನಗೆ ಆದರ್ಶವಾಗಿದೆ' ಎಂದಿದ್ದರು.

ಪ್ರೊ. ಕೊಸಂಬಿ ಅವರ ಬೌದ್ಧ ಸಾಹಿತ್ಯದ ವಿಶೇಷ ಅಧ್ಯಯನದ ಎಲ್ಲಾ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು ಬೆಳಕು ಕಂಡು, ಸುಲಭ ಬೆಲೆಯಲ್ಲಿ ಲಭ್ಯವಾಗಬೇಕೆಂಬುದು ಗಾಂಧೀಜಿಯ ಮನೀಷೆಯಾಗಿತ್ತು ? ಅವರ ಬಗ್ಗೆ ಸ್ಮಾರಕವೊಂದನ್ನು ನಿರ್ಮಿಸಲೂ ಗಾಂಧೀಜಿ ಸಲಹೆ ಇತ್ತಿದ್ದರು. ಇವೆರಡು ಕೊನೆಗೂ ಈಡೇರಲಿಲ್ಲ. 'ಹಿಂದೀ ಸಂಸ್ಕೃತಿ ಮತ್ತು ಅಹಿಂಸೆ' ಕೊಸಂಬಿಯವರ ಮಹತ್ವದ ಕೃತಿಗಳಲ್ಲಿ ಒಂದು. ಸ್ವಾತಂತ್ರ್ಯ ಪ್ರಾಪ್ತಿಯಾದೊಡನೆ ದೇಶ, ಎದುರಿಸಬೇಕಾಗಿ ಬಂದ ದೇಶ ವಿಭಜನೆಯ ಹಿಂಸಾಚಾರಕ ಘೋರ ರಕ್ತಪಾತಗಳನ್ನು ಕಾಣುವಂತೆ ಆಗಿದ್ದರೆ, ಬುದ್ಧನ ತತ್ವ ಪ್ರಚಾರಕ್ಕೆ ತಮ್ಮ ಜೀವನವನ್ನು ಮುಡುಪಿಟ್ಟ ಈ ಪ್ರಾಚಾರ್ಯರು ಎಷ್ಟೊಂದು ಪರಿತಪಿಸುತ್ತಿದ್ದರೋ ಏನೋ !

**ಕೊಸಂಬಿ ಅವರ ಕೃತಿಗಳು**

ಆಚಾರ್ಯ ಧರ್ಮಾನಂದ ಕೊಸಂಬಿ ಅವರ ಪ್ರಕಟಿತ ಕೃತಿಗಳು ಹದಿನೈದು. ಅದರಲ್ಲಿ ಪಾಲಿ ಭಾಷೆಯ ಅನುವಾದ ಗ್ರಂಥಗಳೂ ಇವೆ. ಮುಖ್ಯವಾಗಿ ಅವರು ಮರಾಠಿಯಲ್ಲಿ ಬರೆದರೂ ಕೆಲವು ಹಿಂದಿ ಮತ್ತು ಇಂಗ್ಲಿಷ್‌ನಲ್ಲೂ ಇವೆ. ಅವರ 'ಭಗವಾನ್ ಬುದ್ಧ' ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಎಲ್ಲ ಭಾಷೆಗಳಲ್ಲೂ ಅನುವಾದಿತವಾಗಿದೆ. ಕನ್ನಡ ಅನುವಾದವನ್ನು ಶ್ರೀರಂಗರು ಮಾಡಿದ್ದಾರೆ.

**ಧರ್ಮಾನಂದರ ವಿದ್ವತ್ತು**

ಬೌದ್ಧ ಧರ್ಮದೊಂದಿಗೇ ಪಾಲಿಭಾಷೆ ಭಾರತದಿಂದ ಕಣ್ಮರೆಯಾದರೂ ಶ್ರೀಲಂಕಾದಲ್ಲಿ ಬದುಕಿ ಉಳಿಯಿತು. ಬೌದ್ಧ ವಾಙ್ಮಯದ ಪ್ರಮುಖ ಗ್ರಂಥ ಸಮುದಾಯಕ್ಕೆ 'ತ್ರಿಪಿಟಕ' ಎನ್ನುತ್ತಾರೆ. ಹೆಸರೇ ಸೂಚಿಸುವಂತೆ ಮೂರು ಗ್ರಂಥಗಳಿದ್ದು ಸುತ್ತ ಪಿಟಕ, ವಿನಯ ಪಿಟಕ ಹಾಗೂ ಅಭಿಧಮ್ಮ ಪಿಟಕಗಳೆನಿಸಿಕೊಳ್ಳುತ್ತವೆ. ಪಿಟಕ ಎಂದರೆ ಸಂಗ್ರಹ. ಸುತ್ತ (ಸೂತ್ರ). ಪಿಟಕದಲ್ಲಿ ಬುದ್ಧನ ಉಪದೇಶ, ವಿನಯ ಪಿಟಕದಲ್ಲಿ ಧರ್ಮಪಾಲನೆಯ ನಿಯಮಗಳು ಹಾಗೂ 'ಅಭಿಧಮ್ಮ' ದಲ್ಲಿ ಬೌದ್ಧ ಧರ್ಮ ಪ್ರತಿಪಾದನೆಯ ವಿಚಾರಗಳಿವೆ. ಸುತ್ತ ಪಿಟಕದಲ್ಲಿಯೇ ಐದು ದೊಡ್ಡ ಭಾಗಗಳಿವೆ. ಬುದ್ಧ ಬೋಧನೆಯನ್ನು ಸೂತ್ರ ಅಥವಾ 'ಸುತ್ತ' ರೂಪದಲ್ಲಿ ಕಾಯ್ದಿರಿಸುವ ಪರಂಪರೆ, ಬುದ್ಧನ ಪರಿನಿರ್ವಾಣದ ಮೊದಲ ವರ್ಷಗಳಲ್ಲೇ

✍ ಡಾ. ಜ್ಯೋತ್ಸ್ನಾ ಕಾಮತ್, ಬೆಂಗಳೂರು

ಪ್ರಾರಂಭವಾಯಿತು. ಬೌದ್ಧ ದರ್ಶನದ ಸಾರವೆಲ್ಲ 'ವಿಸುದ್ದ ಮಗ್ಗ' (ವಿಶುದ್ಧ ಮಾರ್ಗ) ಗ್ರಂಥದಲ್ಲಿದೆ. ಅದು ಪಾಲಿಯಲ್ಲಿರುವ ಬೌದ್ಧ ಸಾಹಿತ್ಯದ ಶ್ರೇಷ್ಠ ಗ್ರಂಥವೆನಿಸಿಕೊಳ್ಳುತ್ತದೆ. ಹಾರ್ವರ್ಡ್ ವಿಶ್ವವಿದ್ಯಾನಿಲಯವು 'ವಿಶುದ್ಧ ಮಾರ್ಗ' ದ ಸಂಪಾದನೆ ಹಾಗೂ ಇಂಗ್ಲಿಷ್‌ನಲ್ಲಿ ಅನುವಾದಕ್ಕಾಗಿ, ಲೆನಿನ್‌ಗ್ರಾಡ್ ವಿಶ್ವವಿದ್ಯಾಲಯ ಸಂಸ್ಕೃತ, ಪಾಲಿ ಹಾಗೂ ಪ್ರಾಚೀನ ಭಾರತದ ಕುರಿತ ಬೋಧನೆಗಾಗಿ ಪ್ರೊ. ಧರ್ಮಾನಂದ ಕೊಸಂಬಿ ಅವರನ್ನು ಆಮಂತ್ರಿಸಿದ್ದವು.

'ನಿವೇದನೆ' ಮೂಲ ಮರಾಠಿ ಭಾಷೆಯಲ್ಲಿರುವ ಅವರ ಆತ್ಮಕಥೆ, ಧರ್ಮಾನಂದ ಕೊಸಂಬಿಯವರು 'ವಿಶುದ್ಧ' ಮಾರ್ಗದ ಸಂಶೋಧನೆಗಾಗಿ ಅಮೇರಿಕಾದ ಹಾರ್ವರ್ಡ್ ವಿಶ್ವವಿದ್ಯಾನಿಲಯಕ್ಕೆ ತೆರಳುವವರೆಗಿನ ಕಥನ ಅದರಲ್ಲಿದೆ.

***

**ನಿವೇದನೆ**

ನಾನು ಜನ್ಮವೆತ್ತಿದ್ದು ಗೋವಾ ಪ್ರಾಂತದ ಸಾಷಷ್ಟಿ ವಿಭಾಗದ ಸಾಂಖವಾಳ ಗ್ರಾಮದಲ್ಲಿ. ಜನ್ಮ ತಾರೀಕು 1876 ಅಕ್ಟೋಬರ್ 9ನೇ ದಿನಾಂಕ. ನನ್ನ ತಾಯಿ ಆನಂದಿಬಾಯಿ ಹಾಗೂ ತಂದೆ ದಾಮೋದರ ಶೆಣ್ವೆ ಕೋಸಂಬಿ. ಅವರಿಗೆ ಹುಟ್ಟಿದ ಏಳು ಮಕ್ಕಳಲ್ಲಿ (ಎರಡು ಗಂಡು ಹಾಗೂ ಐದು ಹೆಣ್ಣು) ನಾನು ಕೊನೆಯವನು. ನಾನು ಹುಟ್ಟುವಾಗಲೇ ತಾಯಿಯು ಬೇನೆಯಿಂದ ನರಳುತ್ತಿದ್ದು, ದಾದಿಯ ಹಾಲಿನ ಮೇಲೆಯೇ ಬೆಳೆದೆನಂತೆ ! ಆರು ತಿಂಗಳವನಿದ್ದಾಗ, ಎಡಗಾಲು ಊದಿಕೊಂಡು ಕೀವು ತುಂಬಿಕೊಂಡದ್ದರಿಂದ ಮೊಣಕಾಲಿನ ಹತ್ತಿರ ಗಾಯ ಮಾಡಿ ಕೀವು ತೆಗೆದು ಗುಣಪಡಿಸಿದರಾದರೂ, ಎಡಗಾಲು ಶಾಶ್ವತವಾಗಿ ದುರ್ಬಲವಾಗಿಯೇ ಉಳಿಯಿತು.

ಚಿಕ್ಕಂದಿನಲ್ಲಿ ಆಗಾಗ ಮನೆಯ ಪಕ್ಕದಲ್ಲಿದ್ದ ಕಾಡಿನಿಂದ ಹುಲಿಯ ಆರ್ಭಟ ಕೇಳಿ ಬರುವದು ಸಾಮಾನ್ಯವಾಗಿತ್ತು. ಸಾಂಖಿವಾಳದಲ್ಲಿ ಬ್ರಾಹ್ಮಣರ ಮೂರು ಮನೆಗಳು. ಏಳೆಂಟು ಇತರೇ ಹಿಂದು ಜನರ ಹಾಗೂ ಆರೆಂಟು ಕ್ರಿಶ್ಚಿಯನ್ ಮತ್ತು ಶೂದ್ರರ ಮನೆಗಳು ಅಕ್ಕಪಕ್ಕದಲ್ಲಿದ್ದವು. ಇತರ ಜಾತಿಯ ಮಕ್ಕಳೊಡನೆ ಆಡುತ್ತಿದ್ದೆನಾದರೂ ಕ್ರೈಸ್ತ ಮಕ್ಕಳೊಡನೆ ಆಡಿದ ನೆನಪಿಲ್ಲ ! ಬಹುಶಃ ತಂದೆಯವರು ನಿಷೇಧಿಸಿರಲು ಸಾಕು. ಗ್ರಾಮದ ಎಲ್ಲಾ ಮಕ್ಕಳ ನಡುವೆ ನಾನು ಮಂದಮತಿಯೆಂದು ಹೆಸರಾಗಿದ್ದೆ. ಎಂಟೊಂಭತ್ತು ವರ್ಷದವರೆಗೂ ಸರಿಯಾಗಿ ಊಟ ಮಾಡಲು ಬರುತ್ತಿರಲಿಲ್ಲ. ಮಕ್ಕಳೊಡನೆ ಜಗಳಾಡಿದ, ಹೊಡೆದಾಡಿದ ದೂರು ತಂದ ದಾಖಲೆಯೇ ಇಲ್ಲವಂತೆ ! ಅಥವಾ ದೂರಿಕೊಳ್ಳಲೂ ತಿಳಿಯುತ್ತಿರಲಿಲ್ಲವೆನ್ನುವದು ಸರಿಯೇನೋ ! ಈ ಮಗು ನಿಮಗೆ ಹೊರೆಯಾದಾನು ! ಎಂದು ತಂದೆಯವರ ಸ್ನೇಹಿತರು ಹೇಳಿದ್ದಿದೆ.

ಆದರೆ ತಮ್ಮ ಸ್ನೇಹಿತರ ಅಭಿಪ್ರಾಯದಲ್ಲಿ ತಂದೆಯವರಿಗೆ ನಂಬಿಕೆ ಇದ್ದಂತಿರಲಿಲ್ಲ. ಒಬ್ಬ ಗಾಂವಠಿ ಜ್ಯೋತಿಷಿಯು ನನ್ನ ಜಾತಕ ನೋಡಿ, ನಾನು ವಿದ್ವಾಂಸನಾಗಬಹುದು. ಆದರೆ ಶ್ರೀಮಂತನಾಗಲಿಕ್ಕಿಲ್ಲವೆಂದು ಭವಿಷ್ಯ ನುಡಿದಿದ್ದ. ಹೀಗಾಗಿ ನಾನು ಏನಿಲ್ಲೆಂದರೆ ಗ್ರಾಮದ ಕುಲಕರ್ಣಿ ಆದೇನು ! ಎಂಬ ಭರವಸೆಯನ್ನು ತಂದೆಯವರು ಹೊಂದಿದ್ದರು.

ಸೂಕ್ಷ್ಮ ಪ್ರಕೃತಿಯವನಾಗಿದ್ದರಿಂದ ನನ್ನನ್ನು ಬೇರೆ ಕಡೆ ಇಟ್ಟು ಓದಿಸುವಂತೆ ಇರಲಿಲ್ಲ. ಊರಲ್ಲಿ ಶಾಲೆ ಇರಲಿಲ್ಲ. ನದಿ ದಾಟಿ ಬೇರೆ ಊರಿಗೆ ಹೋಗಬೇಕಿತ್ತು. ಮನೆಯಲ್ಲೇ ಮರಳು ಸುರಿದು ಬೆರಳಿನಿಂದ ಅಕ್ಷರಗಳನ್ನು ಮೂಡಿಸಲು ಕಲಿತೆ. ಬಳಿಕ ಅಕ್ಕನ ಮನೆಯಲ್ಲಿದ್ದು ಮಡಗಾಂವದ ಸ್ಕೂಲಲ್ಲಿ ಕೆಲ ತಿಂಗಳು ಕಲಿತೆ. ಜ್ವರ ಬಂದು ಮಲಗಿದೆ. ಮನೆಗೆ ಕರೆ ತಂದರು. ಬಳಿಕ ಶಹಾಪುರ (ಬೆಳಗಾಂವ) ದಲ್ಲಿಯ ಅಕ್ಕನ ಮನೆಯಲ್ಲಿ ಓದಲು ಒಯ್ದು 2 ನೆಯ ಇಯತ್ತೆಗೆ ಸೇರಿಸಿದರು. ಎಲ್ಲ ವಿಷಯಗಳಲ್ಲೂ ಬೇಗನೆ ಪ್ರಗತಿ ತೋರಿಸಿದ್ದರಿಂದ ಐದನೆಯ ಕ್ಲಾಸಿಗೆ ಆ ಶಾಲೆಯವರೇ (ವರ್ಗೋನ್ನತಿ) ಭಡ್ತಿ ಕೊಟ್ಟುಬಿಟ್ಟರು! ಮತ್ತೆ ಜ್ವರ ಬಂದು ಗೋವಾಕ್ಕೆ ವಾಪಸ್ಸಾದೆ. ಈಗ ಪೋರ್ಚುಗೀಸ್ ಸ್ಕೂಲು ಸೇರುವಷ್ಟು ದೊಡ್ಡವನಾಗಿದ್ದೆ. ಆದರೆ ನನಗೆ ಅದು ಇಷ್ಟವಿರಲಿಲ್ಲ. ಸಂಸ್ಕೃತ ಕಲಿಯುವ ಆಸೆಯಿತ್ತು. ಆದರೆ ಅದಕ್ಕೆ ಯಾವ ಅನುಕೂಲವೂ ಇರಲಿಲ್ಲ.

ನನ್ನ ತಂದೆಯವರು ಒಂದು ತೆಂಗಿನ ತೋಟವನ್ನು 90 ವರ್ಷಗಳವರೆಗೆ ಗುತ್ತಿಗೆಗೆ ಪಡೆದಿದ್ದರು. ಅದು ನಮ್ಮ ಮನೆಯಿಂದ ಸುಮಾರು ಎರಡು ಮೈಲು ದೂರವಿತ್ತು. ಅಲ್ಲಿ ಅವರು ದಿನಕ್ಕೆರಡು ಬಾರಿ ನಡೆದು ಹೋಗುತ್ತಿದ್ದರು. ನಾನೂ ಅವರೊಂದಿಗೆ ಹೋಗಲಾರಂಭಿಸಿದೆ. ಅಲ್ಲಿ ಮುಖ್ಯ ಕೆಲಸವೆಂದರೆ ಕಳ್ಳರಿಂದ ಮತ್ತು ಮಂಗಗಳಿಂದ ತೆಂಗಿನ ಕಾಯಿಗಳನ್ನು ಕಾಯುವದು ! ನೀರು ಹನಿಸುವ ಮೇಲ್ ವಿಚಾರಣೆ ಹಾಗೂ ಆಗಾಗ ಕುಸಿದು ಬೀಳುತ್ತಿದ್ದ ಕಾಂಪೌಂಡ್ ಗೋಡೆಯನ್ನು ಸರಿಪಡಿಸುವದು. ನಿಧಾನವಾಗಿ ತೆಂಗಿನಮರ ಹತ್ತುವದನ್ನು ಕಲಿತೆ. ತಂದೆಯವರ ಗೈರು ಹಾಜರಿಯಲ್ಲಿ ಇಡೀ ದಿನ ತೋಟದಲ್ಲಿ ಕಳೆಯುತ್ತಿದ್ದೆ. ಆದರೆ ರಾತ್ರಿ ಅಲ್ಲಿರಲು ವಿಪರೀತ ಭಯ ! ಕತ್ತಲಲ್ಲಿ ಮನೆಗೆ ಹಿಂದಿರುಗುವಾಗ ತೋಟದಲ್ಲಿ ಕೆಲಸ ಮಾಡುವ ಭಂಡಾರಿ ಕೂಲಿಕಾರರು ಜೊತೆಯಲ್ಲಿರುತ್ತಿದ್ದರು. ಅವರ ಅಶುದ್ಧ ಭಾಷೆ, ಅಶ್ಲೀಲ ಪದ ಪ್ರಯೋಗಗಳು ನನ್ನ ಮೇಲೆ ಪ್ರಭಾವ ಬೀರದಂತೆ ಎಚ್ಚರವಹಿಸಿದೆ.

1891 ರ ಹೊತ್ತಿಗೆ ನನ್ನಲ್ಲಿ ವಾಚನಾಭಿರುಚಿ ಬೆಳೆಯಿತು. ಆದರೆ ಓದಲು ಪುಸ್ತಕಗಳೆ ಸಿಗುತ್ತಿರಲಿಲ್ಲ. ಗೋವೆಯಿಂದ ಹೊರಡುತ್ತಿದ್ದ 'ಪಥ್ಯಬೋಧ' ಎಂಬ ಮರಾಠಿ ಮ್ಯಾಗಝಿನ್ ಸಿಗುತ್ತಿತ್ತು. ಸಂತ ತುಕಾರಾಮನ ಅಭಂಗಗಳ ಪುಸ್ತಕ ಸಿಕ್ಕಿತು. ಕೆಲ ಕವಿತಾ ಸಂಗ್ರಹಗಳು ಆಗೀಗ ದೊರೆಯುತ್ತಿದ್ದವು. ಓದಿ ಖುಷಿಪಡುವ ಯಾವ ಗ್ರಂಥವೂ ಸಿಗಲಿಲ್ಲ. 15 ನೇ ವಯಸ್ಸಿಗೆ ನನ್ನ ಮದುವೆಯೂ ಆಯಿತು.

ಜೀವನ ತುಂಬಾ ನೀರಸವೆನಿಸಲಾರಂಭಿಸಿತು. ಆತ್ಮಹತ್ಯೆಯ ವಿಚಾರ ಮನಸ್ಸಿನಲ್ಲಿ ಸುಳಿದು ಹೋಯಿತಾದರೂ ವಿಷ ಸೇವಿಸಿ ಸಾಯುವ ಧೈರ್ಯ ನನ್ನಲ್ಲಿರಲಿಲ್ಲ. ಆಗಾಗ ಎದೆಯಲ್ಲಿ ನೋವು ಕಾಣಿಸಿಕೊಳ್ಳುತ್ತಿತ್ತು. ನಿದ್ರಾಹೀನತೆ ಕಾಣಿಸಿಕೊಂಡಿತು. ನಾನು ಗುಡಗುಡಿ ಸೇದಲಾರಂಭಿಸಿದೆ.

ನಮ್ಮ ಕುಲದೇವರು ರಾಮನಾಥ. ಆತನ ದೇವಾಲಯದಲ್ಲಿ ಬೇತಾಳನಿಗೆ ಪೂಜೆ ಸಲ್ಲುತ್ತಿತ್ತು. ಈ ದೇವಾಲಯದಲ್ಲಿ ಬೇತಾಳ ಗೊರವ ಪೂಜಾರಿಯ ಮೈಮೇಲೆ 'ಭಾರ' ಬರುತ್ತಿತ್ತು. ನನ್ನ ಎದೆನೋವಿಗೆ, ನನ್ನ ಹಿರಿಯರು, ಈ ಬೇತಾಳ ರೂಪಿಯ ಶರಣು ಹೋದರು. ಆತ ಕೊಟ್ಟ ತೀರ್ಥ, ಭಸ್ಮ ಸೇವಿಸಿದೆ. ಕ್ರಮೇಣ ಎದೆನೋವು ನಿಂತು ಹೋದರೂ, ಗುಡಗುಡಿ ಚಟ ಮುಂದುವರಿಯಿತು !

ನನ್ನ ಬಂಧುಗಳೂ, ಆಪ್ತರೂ ಆಗಿದ್ದ ಭಿಕು ಪುಂಡಲೀಕ ನಾಯಕರಿಗೆ ನನ್ನ ಮೇಲೆ ವಿಶೇಷ ಮಮತೆ ಇತ್ತು. ತಿಂಗಳಲ್ಲಿ ಹಲವಾರು ದಿನ ಅವರಲ್ಲಿ ಕಳೆಯುತ್ತಿದ್ದೆ. ಮದ್ಯಪಾನ, ಬಾಲ್ಯ ವಿವಾಹ, ಜಾತಿ ಭೇದ ಪದ್ಧತಿ. 'ಶಿಮಗಾ' ದಲ್ಲಿ ವೇಶ್ಯೆಯರ ನರ್ತನ ಇವುಗಳನ್ನು ನಾವಿಬ್ಬರೂ ವಿರೋಧಿಸುತ್ತಿದ್ದೆವು. ಗುಡಗುಡಿ ಸೇದುವದು ಮತ್ತು ಮಧ್ಯಾಹ್ನ ಗಂಜಿಯೂಟದ ಬಳಿಕ ವಾಮಕುಕ್ಷಿಯ ಅರಡು ಚಟ ಹತ್ತಿದ್ದು, ಮಾತ್ರ ಇವರಲ್ಲಿಯೇ !

ಸೋನಬಾ ಮಂಗೇಶ ಮುಳಗಾಂವಕರ, ನನ್ನ ಸೋದರತ್ತೆಯ ಮೊಮ್ಮಗನಾಗಿದ್ದ. ನನಗಿಂತ ಎರಡು ವರ್ಷ ಚಿಕ್ಕವನು, ತುಂಬ ಬುದ್ಧಿವಂತ. ಎಳೆತನದಿಂದಲೇ ಕವಿತೆ ರಚಿಸುತ್ತಿದ್ದ. 1895ರ ಸುಮಾರಿಗೆ ನಮ್ಮ ಮನೆಯ ಪಕ್ಕ ಕಿರಾಣಿ ಅಂಗಡಿ ಇಟ್ಟ. ಈ ಕೆಲಸವೇನು ಅವನ ಅಭಿರುಚಿಯಾಗಿರಲಿಲ್ಲ. ವಾಚನಾಭಿರುಚಿ, ಒಳ್ಳೆಯ ವಿಚಾರ ವಿನಿಮಯದಿಂದ ನಮ್ಮಿಬ್ಬರ ಸ್ನೇಹ ಗಾಢವಾಯಿತು. ಕಾಣಕೋಣದ ಚಿಕ್ಕಮ್ಮನ ತೆಂಗಿನ ತೋಟದ ಜವಾಬ್ದಾರಿ ನನ್ನ ಪಾಲಿಗೆ ಬಿದ್ದಿತ್ತು. ಗಂಭೀರ ಸಾಹಿತ್ಯ ವಾಚನ ಮತ್ತು ಚಿಂತನದಲ್ಲಿ ಆಸಕ್ತಿ ಇದ್ದರೂ ಜ್ಞಾನೇಶ್ವರಿ, ಮರಾಠಿ ವೃತ್ತಪತ್ರ, ಮಾಸಿಕಗಳು, ನಿಬಂಧ, ಕತೆ ಕಾದಂಬರಿ ಜಾಹೀರಾತುಗಳೆಂದು ಕೈಗೆ ಸಿಕ್ಕಿದ್ದನ್ನು ಓದುವವರಲ್ಲಿಯೇ ತೃಪ್ತಿ ಕಾಣಬೇಕಾಯಿತು.

1896-97 ನೇ ವರ್ಷ ಮುಂಬಯಿಯಲ್ಲಿ ಪ್ಲೇಗ್ ಪಿಡುಗು ಕಾಣಿಸಿಕೊಂಡಿತು. ನನ್ನ ಪ್ರಿಯ ಸ್ನೇಹಿತ ಸೋನಬಾ, ಓದು ಮುಂದುವರಿಸಲು ಮುಂಬೈಗೆ ಹೋದವನು, ಪ್ಲೇಗಿಗೆ ಬಲಿಯಾದ. ನನ್ನ ತಂದೆಯವರೂ ಕೆಲ ಕಾಲದ ಬಳಿಕ ನಿಧನ ಹೊಂದಿದರು. ಈ ಎರಡು ಆಘಾತಗಳಿಂದ ನನ್ನಲ್ಲಿ ನಿದ್ರಾ ಹೀನತೆ, ಡಿಸ್ಪೆಪ್ಸಿಯಾ ಕಾಣಿಸಿಕೊಂಡವು. ಈ ಹೊತ್ತಿನಲ್ಲಿ ನನ್ನನ್ನು ಕಾಯ್ದಿದ್ದು ಬುದ್ಧನ ಅಮೃತವಾಣಿ.

'ಓರ್ವ ವ್ಯಕ್ತಿ ಎಲ್ಲಿಂದ ಬಂದನೆಂದು ನೀನರಿಯೆ. ಆತ ಎಲ್ಲಿ ಹೋಗಿ ಸೇರುತ್ತಾನೆಂದೂ ನೀನರಿಯೆ. ಹೀಗಿದ್ದಾಗ ಶೋಕಿಸಿ ಫಲವೇನು ? ಶೋಕದಿಂದ ಲಾಭವಾಗುತ್ತಿದ್ದರೆ, ಅರಿವು ಇದ್ದವನು, ದುಃಖ ಸಮ್ಮೂಢನಾಗಿ ದೇಹಕ್ಕೆ ಕ್ಲೇಶಕೊಟ್ಟು ಕೃಶನಾಗುತ್ತಾನೆ. ನಿಸ್ತೇಜನಾಗುತ್ತಾನೆ. ಶೋಕದಿಂದ ಮೃತರಿಗೆ ಯಾವ ರಕ್ಷಣೆಯೂ ಸಿಗುವುದಿಲ್ಲ. ಅರ್ಥಾತ್ ಶೋಕಿಸುವದರಲ್ಲಿ ಅರ್ಥವಿಲ್ಲ" ಈ ವಾಕ್ಯಗಳಿಂದ ಸಾಂತ್ವನ ಹೊಂದಲು ಯತ್ನಿಸಿದೆ.

ಜನವರಿ 1899 ರಲ್ಲಿ ಕೇರಳದ ಕೊಚ್ಚಿಯಲ್ಲಿ ಅಲ್ಲಿಯ ಸಾರಸ್ವತರಿಗೆಂದು ಒಂದು ಹೊಸ ಶಾಲೆ ಆರಂಭವಾಗಿದೆಯೆಂದು 'ಕೇರಳ ಕೋಕಿಲ' ಪತ್ರಿಕೆಯಲ್ಲಿ ಓದಿದೆ. ಅಲ್ಲಿ ಇಂಗ್ಲಿಷ್ ಕಲಿಯಲು ಸಾಧ್ಯವಾದೀತೆಂಬ ಆಸೆಯಿಂದ ಮಂಗಳೂರಿಗೆ ಹಡಗಿನ ಮೂಲಕ ತಲುಪಿ, ಕೊಚ್ಚಿಗೆ ಹೋದೆ. ಆದರೆ ನನ್ನ ಆಸೆ ಫಲಿಸದೆ 15 ದಿನಗಳಲ್ಲಿ ಮರಳಿ ಬರುವಂತಾಯಿತು.

ನನ್ನ ಭಾವ ಡಾ. ಸಖಾರಾಮ ಲಾಡ್ ಅವರು ಪೋರ್ಚುಗಲ್‌ನಲ್ಲಿ ವೈದ್ಯಕೀಯ ತರಬೇತಿ ಮುಗಿಸಿ ಹಿಂತಿರುಗಿದ್ದರು. ಮ್ಹಾಪುಸಾದಲ್ಲಿ ಅವರು ಡಾಕ್ಟರ್ ವೃತ್ತಿಯನ್ನು ಪ್ರಾರಂಭಿಸಿದರು. ಅವರ ಮನೆಯಲ್ಲಿ 1899ರಲ್ಲಿ ನನ್ನ ಹಿರೇಮಗಳು ಜನಿಸಿದಳು. ಷಷ್ಠೀ ಪೂಜನದ ದಿನ ನಾನು ಮತ್ತು ಮೂವರು ಬಾಂಧವರು ಲಾಡರಲ್ಲಿ ಭೋಜನಕ್ಕೆ ಹೋಗಿದ್ದೆವು. ಇದಕ್ಕಾಗಿ ನೆರೆಮನೆಯವರು ಸ್ಮಾರ್ತಸ್ವಾಮಿಗಳಿಗೆ ಈ ವಿಚಾರ ತಿಳಿಸಿ ಇಡೀ ಕುಟುಂಬಕ್ಕೆ ಬಹಿಷ್ಕಾರದ ಆಜ್ಞಾಪತ್ರ ಹೊರಡಿಸಿದರು. ಸಹಭೋಜನದಲ್ಲಿ ಭಾಗವಹಿಸಿದ ಇತರರು, ಪ್ರಾಯಶ್ಚಿತ್ತ ಮಾಡಿಕೊಂಡು ಕ್ಷಮಿಸಲ್ಪಟ್ಟರು.

ಮುಂದುವರಿಯುವುದು...

ಕೃಪೆ : ಆಚಾರ್ಯ ಧರ್ಮಾನಂದ ಕೊಸಂಬಿ

# ಕ್ಷಮೆ

"ಕ್ಷಮಯಾಧರಿತ್ರಿ"- ಇದು ಜನಜನಿತವಾದ ಮಾತು, ಮಾತಿನ ಅರ್ಥವನ್ನು ಆಳವಾಗಿ ಯೋಚಿಸಿ ನೋಡಿದ್ದೇ ಆದರೆ, ಈ 'ಧರೆ' ನಮ್ಮ ಸುತ್ತ- ಮುತ್ತ ಆವರಿಸಿಕೊಂಡಿರುವ ಪ್ರಕೃತಿ, ಮಾನವನ ಒಳಿತಿಗಾಗಿಯೇ ಏನೊಂದೂ ಪ್ರತಿಫಲವನ್ನು ಕೂಡ ಅಪೇಕ್ಷಿಸದೆ, ಅಗಣಿತ ಸಂಪನ್ಮೂಲಗಳನ್ನು ನೀಡಿದ್ದರೂ, ಕೃತಘ್ನನಾದ ಈ ಮಾನವ ಮಾಡಿದ್ದಾದರೂ ಏನು? ಎಲ್ಲವನ್ನೂ ಬಾಚಿಕೊಂಡು, ದೋಚಿ, 'ಭೂಮಿ'ಯನ್ನು ಬರಡು, ಬಂಜರಾಗಿಸಿದ್ದಾನೆ, ಈ 'ಧರೆ' ಕ್ಷಮಿಸುತ್ತಲೇ ಬಂದಿರುವುದರಿಂದ ಇನ್ನೂ ನಾವುಗಳು ಬದುಕಿ ಬಾಳುತ್ತಿದ್ದೇವೆ ಅಲ್ಲವೇ ?

ಅದಿರಲಿ! ನಮ್ಮ ಜೀವನದ ಹಾದಿಯಲ್ಲಿ ಕೇವಲ ಹೂವುಗಳು ಚೆಲ್ಲಿದೆಯೇ ? ಎಲ್ಲರ ಆಸೆ ಹಾಗೇ ಇರಲಿ ಎಂದಿರಬಹುದು. ಅದು ಕೇವಲ ಭ್ರಮೆ ನಮ್ಮ ಕಲ್ಪನೆ. ವಾಸ್ತವದಲ್ಲಿ ಹೆಜ್ಜೆ ಹೆಜ್ಜೆಗೂ ಮುಳ್ಳುಗಳು, ಕಲ್ಲುಗಳು ಕಾಲಿಗೆ ತೊಡರಿಕೊಳ್ಳುತ್ತವೆ. ಅಷ್ಟೇ ಏನು ? ಮನಸ್ಸಿಗೆ ಘಾಸಿ, ಗಾಯ ಮಾಡಲು ಮೂಲೆ ಮೂಲೆಯಲ್ಲಿ ಕಾದು ಕುಳಿತಿರುತ್ತಾರೆ ಮಂದಿ. ಅದಕ್ಕೆ ಇರುವುದೊಂದೇ ಪರಿಹಾರ 'ಕ್ಷಮೆ'. ಅದು ಹೇಗೆ ಸಾಧ್ಯ ? 'ನಾವ್ಯಾಕೆ ಕ್ಷಮಿಸಬೇಕು ?' ಎಂಬ ಶಂಕೆ ನಿಮ್ಮಲ್ಲಿ ಮಾಡಿದ್ದೇ ಆದರೆ ಸಹಜ. ಆದರೆ ನಿಜವಾಗಿ ಕ್ಷಣೆ ನಿಮ್ಮನ್ನು ಬಿಡುಗಯೆ ಹಾದಿಗೆ ಕೊಂಡೊಯ್ದು ಬೆಳಕಿನೆಡೆಗೆ ತಂದು ನಿಲ್ಲಿಸಿ ಶಾಂತಿ, ಸಮಾಧಾನ ನೀಡುತ್ತದೆ. ಮನಸ್ಸಿನ ಆಳದಲ್ಲಿ ಬಹಳ ಕಾಲದಿಂದ ಬೀಡು ಬಿಟ್ಟಿರುವ, ನಿಷೇಧಾತ್ಮಕ, ಭಾವನೆಗಳನ್ನು ಹೊರದೂಡಿ, ಶುದ್ಧೀಕರಿಸಿ ಜೀವನ ಜಾಗೃತಗೊಂಡು ನವ ಚೇತನ ಮೂಡುವುದರಲ್ಲಿ ಎರಡು ಮಾತಿಲ್ಲ. ಕ್ಷಮಿಸುವುದು ಅಷ್ಟು ಸುಲಭದ ಮಾತಲ್ಲ. ಇದೊಂದು ಕಲೆ. ಡಿವಿಜಿಯವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ 'ಕ್ಷಮೆ' ನಾಲ್ಕು ತಪಸ್ಸುಗಳಲ್ಲಿ ಒಂದೆಂದು ಹೇಳಿದ್ದಾರೆ. ಕ್ಷಮೆ (ದೋಷಿಗಳಲ್ಲಿ ಕೆಚ್ಚೆದೆ ವಿಧಿಯ ಬಿರುಸಿನಲಿ) ಸಮತೆ ನಿರ್ಮತ್ಸರತೆ ಸೋಲ್ಗೆಲುವುಗಳಲಿ || ಶಮವ ನೀಂಗಳಿಸಲೀ ನಾಲ್ಕು ತಪಗಳೆ ಸಾಕು| ಭ್ರಮೆಯೋ ಮಿಕ್ಕೆಲ್ಲ ತಪ ಮಂಕುತಿಮ್ಮ||) ಸ್ವ ಪ್ರಯತ್ನದಿಂದ ದೀರ್ಘಕಾಲ ಚಿಂತನ ಮನನದಿಂದ ಈ ನೈಪುಣ್ಯ ಕರಗತಮಾಡಿಕೊಳ್ಳಬಹುದು.

ಡಾ|| ಫ್ರೆಡ್ ಲಸ್ಕಿನ್ (Dr. Fred Luskin) ತನ್ನ ಪುಸ್ತಕ (A prover prescription for Health and Happiness) ದಲ್ಲಿ ಒಂದು ಸುಂದರವಾದ ಉದಾಹರಣೆಯ ಮೂಲಕ "ಕ್ಷಮೆ"ಯಿಂದ ಹೇಗೆ ನಮ್ಮ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯವನ್ನು ಸ್ಥಿರಗೊಳಿಸಬಹುದು ಎಂಬುದನ್ನು ವಿಷದಪಡಿಸಿದ್ದಾನೆ.

ಈ ಕೆಳಗಿನ ಸಂದರ್ಭವನ್ನು ಕಲ್ಪನೆ ಮಾಡಿಕೊಳ್ಳಲು ಹೇಳುತ್ತಾನೆ. ವಿಮಾನ ಸಂಚಾರಿ ನಿಯಂತ್ರಕರು (Air Traffic Controller) ತಮ್ಮ ಸುಸಜ್ಜಿತ ಕೋಣೆಯಲ್ಲಿ ಪರದೆಯ ಮುಂದೆ ಕುಳಿತಿದ್ದಾರೆ. ತಲೆ ಬಿಸಿಯಾಗಿದೆ. ಕಾರಣ, ಹತ್ತು ಹಲವಾರು ವಿಮಾನಗಳು ಮೇಲೆ ಹಾರಲು ಹವಣಿಸುತ್ತಿದ್ದರೆ, ಹಾರುತ್ತಾ ಬಂದ ಹಲವು ವಿಮಾನಗಳು ಭೂ- ಸ್ಪರ್ಶ ಮಾಡಲು ಸಿದ್ಧವಾಗುತ್ತಿವೆ. ಪ್ರಯಾಣ ಮಾಡುತ್ತಿರುವ ಜೀವಿಗಳ ಜೀವ, ವಿಮಾನಗಳ ಹಾರಾಟ, ನಿಯಂತ್ರಕರ ಕೈನಲ್ಲಿದೆ. ಜವಾಬ್ದಾರಿಯುತ ಕಾರ್ಯನಿರ್ವಹಣೆ ಮಾಡಲೇಬೇಕಾಗಿದೆ. ಇಳಿಯುತ್ತಿರುವ ವಿಮಾನಗಳಿಗೆ ಸ್ಥಳ ಇಕ್ಕಟ್ಟು- ಈ ಬಿಕ್ಕಟ್ಟು ಅವ್ಯವಸ್ಥೆ ನಿಯಂತ್ರಕರ ತಲೆಯಲ್ಲಿ ಸುಳಿ- ಸುಳಿಯಾಗಿ ಸುತ್ತುತ್ತಿದೆ. ಅದೇ ರೀತಿ ನಮ್ಮ ಮನಸ್ಸಿನ ಪರದೆ ಮೇಲೆ ಪರಿಹಾರ ಕಾಣದ ದೂರುಗಳು, ಕುಂದು- ಕೊರತೆಗಳು ಆಗಿಂದಾಗ್ಗೆ ಮುತ್ತಿಕೊಂಡು ವಾರಗಳ, ತಿಂಗಳುಗಳು, ವರ್ಷಗಳು, ಸುತ್ತುತ್ತಲೇ ಇರುತ್ತವೆ. ಹೀಗಾದರೆ ನಮ್ಮ ಮಾನಸಿಕ ಆರೋಗ್ಯ, ಅದರ ಪರಿಣಾಮವಾಗಿ ದೈಹಿಕ ಆರೋಗ್ಯ ಬಿಗಡಾಯಿಸಿದ್ದೇ ಆದರೆ ಆಶ್ಚರ್ಯವೇನು ? ನಮಗೆ ಎಂದೋ, ಯಾರೋ ಉಂಟು ಮಾಡಿದ ನೋವು, ಅದಕ್ಕಿಂತ ಮಿಗಿಲಾಗಿ ಅದರ ನೆನಪನ್ನು, ಮತ್ತೆ- ಮತ್ತೆ ಜ್ಞಾಪಕ ಮಾಡಿಕೊಂಡು ಮಾಡಿದವನನ್ನು ದೂರುತ್ತಾ, ಅದರ ಸುತ್ತ ಒಂದು ಕಥೆಯನ್ನು ಹೆಣೆದುಕೊಳ್ಳುತ್ತೇವೆ. ಮತ್ತಿತರರು ಈ ರೀತಿಯ ಕಥೆ ನಮ್ಮೊಡನೆ ಹಂಚಿಕೊಂಡಾಗ, ಅದಕ್ಕೂ, ಇದಕ್ಕೂ ಕೊಂಡಿ ಬೆಸೆದು (ಕಳಚಿಕೊಳ್ಳಲಾಗದಂತಹ) ಮನಸ್ಸಿನಲ್ಲಿ ಒಂದು "ಸೆರೆಮನೆ" ಕಟ್ಟಿಕೊಂಡು ಬಿಡುತ್ತೇವೆ.

ಡಿ.ವಿ.ಜಿ. ತಮ್ಮ ಕಗ್ಗದಲ್ಲಿ ಅದನ್ನೇ ಹೇಳುವುದು-

ತರಚುಗಾಯವ ಕೆರೆದು ಹುಣ್ಣಾಗಿಪುದು ಕಪಿ |<br>
ಕೊರತೆಯೊಂದನು ನೀನು ನೆನೆದು ಕೆರಳಿ ||<br>
ಧರೆಯೆಲ್ಲವನ್ನು ಶಪಿಸಿ, ಮನದಿ ನರಕವ ನಿಲಿಸಿ |<br>
ನರಳುವುದು ಬದುಕೇನೋ ?

ಹಾಗಾದರೆ ಇದರ ಬಿಡುಗಡೆ ಹೇಗೆ ? ಕ್ಷಮೆ- ಎಲ್ಲಾ ಗೊಂದಲಗಳ ಸರಪಣಿಯನ್ನು ಕಳಚಿ, ಬಿಸಾಡಿ ಸುತ್ತು ತಿರುವ, ವಿಮಾನಗಳನ್ನೂ ಬಿಕ್ಕಟ್ಟಿನಿಂದ ಬಿಡಿಸಿ ಭೂ ಸ್ಪರ್ಶ ಮಾಡಿಸಬೇಕು. ಆಗಲೇ ಮನಸ್ಸಿಗೆ ಬಿಡುವು- ಶಾಂತಿ- ಸಮಾಧಾನ, ಅದು ಸರಿ! 'ನೋವು, ಅದರ ಕಥೆ ಸೃಷ್ಟಿಯಾಗಿ ಬಿಟ್ಟಿದೆ. ಅಲ್ಲಿ, ಇಲ್ಲಿ ಆಡಿದ ಕೇಳಿದ ಮಾತುಗಳು, ಮತ್ತಿತರ ದೂರುಗಳು ಸೇರಿ ಪುಷ್ಠಿಗೊಂಡಿದ ನೋವು' 'ಗಾಯ' ಮಾಯುವುದಕ್ಕೆ ಬದಲಾಗಿ ಜೀವಿತಗೊಂಡು, ಕ್ಷಮೆ ಸಾಧ್ಯವೇ ಇಲ್ಲ ನಮ್ಮಿಂದ ಎಂಬ ಸ್ಥಿತಿ ತಲುಪುತ್ತೇವೆ. ಆದರೆ ಉಪಾಯವೇನೆಂದರೆ, ಕ್ಷಮಿಸುವ ಕುಶಲತೆ, ಕೌಶಲ್ಯ, ನೈಪುಣ್ಯತೆ ಪ್ರಯತ್ನ ಪೂರ್ವಕವಾಗಿ ಪಡೆಯಲೇಬೇಕು.

*✍ ವನಜಾ ರಾಜನ್*

ಡಾ| ಫ್ರೆಡ್ ಲಸ್ಕಿನ್ ಹೇಳುವುದೇನೆಂದರೆ, 'ಕ್ಷಮೆ' ನಿಮಗಾಗಿಯೇ ಹೊರತು ನಿಮಗೆ ನೋವುಂಡಿಸಿದವರಿಗಲ್ಲ. ಯೋಚಿಸಿ ನೋಡಿ.

(2) ನೀವು ಕಳೆದುಕೊಂಡಿರುವ ಶಾಂತಿ, ಸಮಾಧಾನ ಎಲ್ಲಕ್ಕಿಂತ ಮುಖ್ಯವಾದ ಶಕ್ತಿ ಸಂಚಯನಕ್ಕೆ ಕ್ಷಮೆ ಅವಶ್ಯಕ.<br>
(3) ನಿಮ್ಮ ಮಾನಸಿಕ ಹಿಡಿತ ಮರಳಿ ಪಡೆಯಲು ಕ್ಷಮೆ ಹಾಗೂ<br>
(4) ಘಾಯ ಮರೆಯುವುದಕ್ಕೆ ಸ್ವಾಸ್ಥ್ಯ ಗಳಿಸುವುದಕ್ಕೆ ಕ್ಷಮೆ ಅತ್ಯವಶ್ಯಕ.<br>
(5) ನಿಮ್ಮ ಮನಸ್ಸಿನ ಭಾವನೆಗಳ ಹಿಡಿತ ಸಾಧಿಸಿದ ನಂತರ ಕ್ಷಮೆ ನಿಮ್ಮನ್ನು ಬಲಿಪಶುವಿಗೆ ಬದಲಾಗಿ ನಾಯಕನಾಗಿಸುವುದು.

ನೀವೇನಾಗಬೇಕೋ ಅದು ನಿಮ್ಮ ಆಯ್ಕೆ ಅಷ್ಟೇ !

ಹಾಗಾದರೆ "ಕ್ಷಮೆ" ಎಂದರೇನು ?

(1) ದಯಾಹೀನತೆ, ಕ್ರೂರತೆಯನ್ನು ಮನ್ನಿಸಿ ಮಾಫಿ ಮಾಡುವುದಲ್ಲ<br>
(2) ತೀಕ್ಷ್ಣವಾದ ನೋವನ್ನು ಮರೆಯುವುದು ಕ್ಷಮೆ ಅಲ್ಲ<br>
(3) ಪಾಪ- ಪುಣ್ಯವೆಂದೋ ಅಥವಾ ಯಾವುದೇ ಧಾರ್ಮಿಕ ಕಾರಣಗಳಿಗಾಗಿ ಕ್ಷಮಿಸಬೇಕಾಗಿಲ್ಲ.<br>
(4) ಕ್ಷಮಿಸಲು ಭಾವನಾರಹಿತ ವ್ಯಕ್ತಿತ್ವದವರಾಗಿರಬೇಕಾಗಿಲ್ಲ.<br>
(5) ಮುಖ್ಯವಾಗಿ "ಕ್ಷಮಿಸಿದ್ದೇನೆ" ಎಂದು ನಿಮ್ಮನ್ನು ನೋಯಿಸಿ, ಕಾಡಿಸಿದವನೊಡನೆ ಸ್ನೇಹ ಬೆಳೆಸಬೇಕಾಗಿಲ್ಲ.

ದೀರ್ಘಕಾಲಿಕ ನೋವು, ಕುಂದು ಕೊರತೆಗಳ ಸೃಷ್ಟಿಯಲ್ಲಿ ಮೂರು ಅಂತರ್ನಿಹಿಕ ಅಂಶಗಳು ಅಡಗಿವೆ:-

(1) ಸ್ವಾಭಿಮಾನ ಅಥವಾ ಅಭಿಮಾನ (Ego) ಕ್ಕೆ ಪೆಟ್ಟು ಹೊಡೆತವೆಂದು ಭಾವಿಸಿ ಅದನ್ನೇ ಉತ್ಪ್ರೇಕ್ಷೆ ಮಾಡುವುದು.<br>
(2) ನಿಮ್ಮ ಮನಸ್ಸನ್ನು ನೋಯಿಸಿಬಿಟ್ಟನೆಂದು ಸತತವಾಗಿ ಅವನ ಮೇಲೆ ಅಪವಾದ ಹೊರೆಸಿ ಮೂದಲಿಸುತ್ತಾ ಕಾಲ ಕಳೆಯುವುದು.<br>
(3) ಅದಕ್ಕೆ ಸೇರಿದಂತೆ ಕಥೆಯ ಸೃಷ್ಟಿ ಮಾಡುವುದು. ಅದಕ್ಕೆ ಪುಷ್ಠೀಕರಿಸುತ್ತಾ- ...

ರಿಸುತ್ತಾ ಮನಸ್ಸಿನ ಆಳದಲ್ಲಿ ಅಂಟಿಕೊಂಡು ಬಿಡುತ್ತವೆ. ಈ ಹಂತ ತಲುಪಿದರೆ, 'ಕ್ಷಮೆ' ನಮ್ಮಿಂದ ಸಾಧ್ಯವೇ ? ಬಿಡುಗಡೆ ಎಂದು ?

(4) ಈ ಮೇಲೆ ಹೇಳಿದ ಭಾವನೆಗಳಿಗೆ, ನಿಮ್ಮ ಮನಸ್ಸಿನಲ್ಲಿ ಹೆಚ್ಚು ಸ್ಥಳ ಕಾದಿರಿಸಿದರೆ, ಕತ್ತಲೆ ಕಳೆದು ಬೆಳಕು ಮೂಡುವುದಾದರೂ ಹೇಗೆ ? ಒಂದು ಸಂದರ್ಭ ನೆನಪಿಗೆ ಬರುತ್ತದೆ. ನಮ್ಮ ಮೊಬೈಲ್ ಫೋನ್‌ನಲ್ಲಿ ಸಂದೇಶಗಳು ತುಂಬಿಬಿಟ್ಟರೆ, ಬೇಡದುದನ್ನು ಅಳಿಸದಿದ್ದರೆ (Erase) ಹೊಸ ಸಂದೇಶಗಳನ್ನು ಕಳುಹಿಸಲು ಸಾಧ್ಯವೇ?

(5) ಮತ್ತೆ ಮತ್ತೆ ಮನಸ್ಸಿನಲ್ಲಿ ನೋವು, ಆದ ಗಾಯದ ಬಗ್ಗೆ ಯೋಚನೆಗಳು ಮುಕ್ಕಿಕೊಂಡು ಬರುತ್ತದೆಯೇ ? ಸವಿ ನೆನಪುಗಳನ್ನು ನೆನೆಸಿಕೊಳ್ಳದಿರುವುದು, ಭಿನ್ನತೆಗೆ ದೂಡಬಹುದು. ನಿಮಗೆ ಪ್ರಾಪ್ತವಾದ, ಲಭ್ಯವಾದ, ಸೌಖ್ಯ- ಸೌಲಭ್ಯಗಳನ್ನು ಕೃತಜ್ಞತಾಪೂರ್ವಕವಾಗಿ ನೆನಪಿಸಿಕೊಂಡರೆ, ಜೀವನದ ಹಾದಿ ಸುಗಮವಾಗುವುದರಲ್ಲಿ ಸಂದೇಹವೇ ಇಲ್ಲ. ಅದೇ (ಪರಮಾತ್ಮನ) ಅನುಗ್ರಹವೆಂಬ ಭಾವನೆ ಬೆಳೆಸಿಕೊಳ್ಳಬೇಕು. (Count Your Blessings)

(6) ಯಾರು ಏನೇ ಹೇಳಿದರೂ, ಎಲ್ಲವನ್ನೂ ವೈಯಕ್ತಿಕವಾಗಿ ತೆಗೆದುಕೊಳ್ಳುವುದು (Taking things too personally) ಜ್ವರದ ತಾಪದಲ್ಲಿ ಅಥವಾ ಮಾನಸಿಕ ಸಮತೋಲನ ಕಳೆದುಕೊಂಡಿರುವ ರೋಗಿ ಅಸಂಬದ್ಧ ಪ್ರಲಾಪ ಮಾಡಿದರೆ, ವೈದ್ಯನೊಬ್ಬ ತನ್ನನ್ನೇ ಕುರಿತಾಗಿ ಹೇಳುತ್ತಿದ್ದಾನೆ ಎಂದು ಭಾವಿಸುವನೇ ?

ಬುದ್ಧನ ಹತ್ತಿರ ಒಬ್ಬ ಕುತರ್ಕ ಮಾಡುವವನನು ಒಮ್ಮೆ ಎದಿರು ನಿಂತು ವಾಚಾಮಗೋಚರ ಮೂದಲಿಸಿದನು. "ನಿನ್ನ ಸಿದ್ಧಾಂತನಿನ್ನ ಧರ್ಮ ಸರಿಯಿಲ್ಲ ಇತ್ಯಾದಿ...", ಬುದ್ಧ ಪ್ರಸನ್ನ ಚಿತ್ತನಾಗಿಯೇ ನಿಂತಿದ್ದನು. ಬಡಬಡಿಸಿ ಮುಗಿಸಿದ ನಂತರ ಬುದ್ಧನ ಮುಖದಲ್ಲಿ ಏನೇನೂ ಬದಲಾವಣೆ ಕಾಣದಾಗ ಅವನಿಗೆ ಆಶ್ಚರ್ಯವಾಯಿತು ! ಅದಕ್ಕೆ ಬುದ್ಧ ಕೊಟ್ಟ ಉತ್ತರವೇನೆಂದರೆ, "ನೀನು ಕೊಟ್ಟಿರುವುದನ್ನು ನಾನು ಸ್ವೀಕರಿಸಲಿಲ್ಲ. ಸ್ವೀಕರಿಸುವುದು, ಬಿಡುವುದು ನನ್ನ ಕೈಯಲ್ಲಿದೆ, ನೀನೇ ಎಲ್ಲವನ್ನೂ ತೆಗೆದುಕೊಂಡು ಹೋಗಬಹುದು" (ಬಯ್ಗುಳು, ಮೂದಲಿಕೆಗಳು) ಎಲ್ಲಾ ನಮ್ಮ ಆಯ್ಕೆ !

ಜೀಸಸ್ ಶಿಲುಬೆಗೇರಿದಾಗ ಅಂತಹ ನರಕಯಾತನೆಯಲ್ಲಿ ಕೂಡ, "ಅವರೇನು ಮಾಡುತ್ತಿದ್ದಾರೆಂದು ಅವರಿಗೇ ಗೊತ್ತಿಲ್ಲ. ಕ್ಷಮಿಸು ಅವರನ್ನು ತಂದೆಯೆ" (They don’t know no what they are doing) ಎಂದು ಪಾತಕಿಯನ್ನು ಕ್ಷಮಿಸಿದನು. "ಹೇ ರಾಮ್" ಎಂದು ಮಹಾತ್ಮಾ ಗಾಂಧಿ ಕೊನೆಯುಸಿರು ಎಳೆದರು. ನಾವು ಹುಲು ಮಾನವರು 'ಜೀಸಸ್', 'ಬುದ್ಧ' ಅಥವಾ 'ಗಾಂಧಿ' ಯಾಗಲು ಕಷ್ಟ ಸಾಧ್ಯ! ಆದರೆ ನಾವು (ಆರೋಗ್ಯವಾಗಿ) ದೈಹಿಕವಾಗಿ, ಮಾನಸಿಕವಾಗಿ ಸ್ವಾಸ್ಥ್ಯದಿಂದ ಬಾಳಿ ಬದುಕಬೇಕಾದರೆ 'ಕ್ಷಮೆ', 'ಕೃತಜ್ಞತೆ' ಮುಂತಾದ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕು. ಅದೇ ನಮ್ಮ ಬದುಕಿನ ಗುರಿಯಾಗಬೇಕು.

(ಆಧಾರ)

# ಅಕ್ಷಯ ತೃತೀಯಾ – ಮಹಾಗಣಪತಿ ಪೂಜಾಚರಣೆ





ಪ್ರತಿ ವರ್ಷದಂತೆ ಈ ವರ್ಷವೂ ಮೇ 13 ಅಕ್ಷಯ ತೃತೀಯದಂದು ಮಹಾಗಣಪತಿ ಸ್ಥಾಪನಾದಿನವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಶ್ರೀ. ಆರ್. ಎಸ್. ರಂಗನಾಥ ಮತ್ತು ಶ್ರೀಮತಿ ಗಾಯತ್ರಿ ರಂಗನಾಥ ಅವರು ಪೂಜಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಮಹಾಗಣಪತಿ ಪೂಜೆ, ನವಗ್ರಹ ಪೂಜೆ, ಗಣಪತಿ ಹೋಮ, ಗಣಪತಿ ಸಹಸ್ರ ನಾಮಾರ್ಚನೆ, ಪೂರ್ಣ ಫಲ ಅಹುತಿಯ ನಂತರ ಮಹಾ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ಮಾಡಲಾಯಿತು. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದು ಪೂಜೆಯಲ್ಲಿ ಭಾಗವಹಿಸಿದರು.

# ಸುಳಿವ ಜಾಡು: ಭೋಜನಶಾಲಾ ಮತ್ತು ವೈಭವೀಕರಣ

ಕರ್ನಾಟಕದ ಗತವನ್ನು ವೈಭವೀಕರಿಸುವ ಪ್ರಕ್ರಿಯೆಯೊಂದು ಕರ್ನಾಟಕದ ಏಕೀಕರಣ ಚಳವಳಿಯಲ್ಲಿ ಭಾವನಾತ್ಮಕ ಪೂರ್ವಭಾವಿ ನೆಲೆಯನ್ನು ಒದಗಿಸಿದ್ದು ಇಂದು ಇತಿಹಾಸದ ಭಾಗವಾಗಿದೆ. ಭಾರತೀಯ ಪುನರುತ್ಥಾನ ಕಾಲದಲ್ಲಿ ಭಾರತೀಯರು ಅನಾಗರಿಕರು, ಆಳ್ವಿಕೆಗೆ ಒಳಪಡಲು ಅರ್ಹರು ಎಂಬ ವಸಾಹತುಶಾಹಿ ಹುಟ್ಟಿ ಹಾಕಿದ ವಾದಕ್ಕೆ ಪ್ರತಿಯಾಗಿ ಅನ್ಯ ಸಂಸ್ಕೃತಿಗಳ ದಾಳಿಗಳ ಪೂರ್ವದಲ್ಲಿ ಭಾರತ ಉನ್ನತ ಸಂಸ್ಕೃತಿಯನ್ನು ಹೊಂದಿತ್ತು ಎಂದು ಪ್ರತಿಪಾದಿಸಲು ಪೂರ್ವವನ್ನು ವೈಭವೀಕರಿಸಿ ಮರುಕಟ್ಟಿದ ರೀತಿ ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಮಾದರಿಯಾಗಿ ಕಾರ್ಯನಿರ್ವಹಿಸಿರುವಂತೆ ತೋರುತ್ತದೆ. ಭಾರತೀಯ ಸಂದರ್ಭದಲ್ಲಿ 'ವೈಭವೀಕರಣ' ಅನ್ಯ ಸಂಸ್ಕೃತಿಗೆ ಸೆಡ್ಡು ಹೊಡೆಯಲು ಬಳಕೆಯಾಗಿದ್ದರೆ, ಕರ್ನಾಟಕದ ಸಂದರ್ಭದಲ್ಲಿ ಬೇರೆ ಬೇರೆ ಪ್ರಾಂತಗಳ ಆಡಳಿತಗಳಡಿ ಹರಿದು ಹಂಚಿಹೋಗಿದ್ದ ಕನ್ನಡದ ಜನ ಮತ್ತು ಪ್ರದೇಶಗಳನ್ನು ಕನ್ನಡ ಹಿತಾಸಕ್ತಿಯ(?) ಆಡಳಿತದ ಅಡಿಯಲ್ಲಿ ಒಗ್ಗೂಡಿಸುವ ಚಳವಳಿಗೆ ವೈಚಾರಿಕ ನೆಲೆ ಒದಗಿಸುವ ಪರಿಕರವಾಗಿ ಬಳಕೆಯಾಗಿರುವಂತಿದೆ. ಆದರೂ ಈ ಎರಡೂ ಸಂದರ್ಭದಲ್ಲಿ ವೈ ದೋರಿದ ಸಾಂಸ್ಕೃತಿಕ ರಾಜಕಾರಣ ಒಂದೇ ಬಗೆಯದಾಗಿ ಇರುವಂತೆ ಕಂಡುಬರುತ್ತದೆಯೇ? ಬಹು ಸಮುದಾಯಗಳ ಸಮಾಜದಲ್ಲಿ ನಿರ್ದಿಷ್ಟ ಸಮುದಾಯವೊಂದು ತನ್ನ ಹಿತಾಸಕ್ತಿ ಕೇಂದ್ರಿತ ತತ್ವ ಧೋರಣೆಯನ್ನು ಪ್ರತಿಪಾದಿಸಲು ಮತ್ತು ಈ ಧೋರಣೆಯ ನಕಾರಾತ್ಮಕ ಪರಿಣಾಮಗಳನ್ನು ಸಕಾರಾತ್ಮಕವಾಗಿ ಬಿಂಬಿಸಲು ವೈಭವೀಕರಣ ಚಿಂತನಾಕ್ರಮವನ್ನು ಬಳಕೆಗೆ ತಂದಿತೆ? ಇದು ಅಧ್ಯಯನಗಳಿಂದ ಸ್ಪಷ್ಟವಾಗಬೇಕಾದ ಅಂಶವಾಗಿದೆ.

**ವೈಭವೀಕರಣ:**

ಈ ಚಿಂತನಾ ಕ್ರಮ ಭಾರತ ಮತ್ತು ಕರ್ನಾಟಕದ ಸಂದರ್ಭದಲ್ಲಿ ಮೈ ಪಡೆದುಕೊಂಡಿದ್ದಾದರೂ ಹೇಗೆ ಎಂಬುದನ್ನು ಸೂಚಿಸಲು ಮೇಲಿನ ಆರಂಭಿಕ ಮಾತಗಳನ್ನು ಆಡಬೇಕಾಯಿತು. ಏಕೆಂದರೆ ವಿಜಯನಗರಕ್ಕೆ ಸಂಬಂಧಪಟ್ಟ ಇತಿಹಾಸ ಮತ್ತು ಸ್ಮಾರಕಗಳಿಗೂ 'ವೈಭವೀಕರಣ' ಚಿಂತನೆಯ ಪರಿಕರ ಬಳಕೆಯಾಗಿರುವಂತಿದೆ. ವಿಜಯನಗರ ಸಾಮ್ರಾಜ್ಯದ ಅಧಿಕಾರ ಕೇಂದ್ರವಿದ್ದ ಅಂದಿನ ಪ್ರದೇಶವಿಂದು 'ಹಾಳು ಹಂಪೆ' ಎಂದು ಪ್ರಸಿದ್ಧಿ ಪಡೆದಿದೆ. ಈ ಜೋಡಿಪದಗಳು ಪ್ರಸ್ತುತ ಸ್ಥಿತಿ ಕುರಿತು ಕೊರಗನ್ನೂ ಅದರ ಪೂರ್ವದ ಸ್ಥಿತಿಕುರಿತು ವೈಭವೀಕೃತ ಹೆಮ್ಮೆಯ ಕಲ್ಪನೆಯನ್ನೂ ಕಟ್ಟಿಕೊಡುತ್ತವೆ. ಇತಿಹಾಸದ ಪುಟಗಳು ಕೂಡ 'ವೈಭವ'ದ ಕನ್ನಡಿಯ ಮೂಲಕವೇ ಹಿಂದಿನ ಸ್ಥಿತಿಗತಿಗಳನ್ನು ಕಾಣಿಸಲು ಮತ್ತು ತಕ್ಕ ಸಾಕ್ಷ್ಯಾಧಾರಗಳನ್ನು ಕಟ್ಟಿಕೊಡಲು ಸಕಲ ಪ್ರಯತ್ನಪಟ್ಟಿರುವಂತೆ ಕಾಣುತ್ತದೆ. ಸಾಮ್ರಾಜ್ಯದ ನಿರ್ದಿಷ್ಟ ಅವಧಿಯಲ್ಲಿ ಅರಮನೆ ಹೊಂದಿದ್ದ ಸಂಸತ್ತಿನ ವೈಭವವನ್ನು ಇಡೀ ಸಾಮ್ರಾಜ್ಯದ ಸುಖ ಸಂಪತ್ತಿನ ವೈಭವವಾಗಿ ಭಾವಿಸುವಂತೆ ಕಾಣಿಸಲಾಗುತ್ತದೆ. ಹಿಂದೂ ಧರ್ಮದ ಶೈವ ಮತ್ತು ವೈಷ್ಣವ ಶಾಖೆಗಳ ಹಿರಿಮೆಯನ್ನು ವಿಜಯನಗರ ಸಾಮ್ರಾಜ್ಯದೊಂದಿಗೆ ಸಮೀಕರಿಸುವ ಇತಿಹಾಸದ ನಿರೂಪಣೆಗಳು. ಸಂಗಮ ವಂಶದ ಎರಡನೆಯ ವಿರೂಪಾಕ್ಷ 1470 ರಲ್ಲಿ ತುಂಗಭದ್ರೆಯ ವರೆಗೂ ತನ್ನನ್ನು ಹಿಮ್ಮೆಟ್ಟಿಸಿಕೊಂಡು ಬಂದ ಬಹಮನಿ ಸುಲ್ತಾನ ಮೂರನೆಯ ಮಹಮದ್ ಶಾ ಲಷ್ಕರ್ ನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಟ್ಟು ರಾಜಿ ಮೂಲಕ ತನ್ನ ರ್‍ರಾಜ್ಯ ಭದ್ರ ಮಾಡಿಕೊಂಡ ಸಂಗತಿಯನ್ನು ಮುಂಚೂಣಿಗೆ ತರುವುದೆ ಇಲ್ಲ. ತಾಳೀಕೋಟೆ ಯುದ್ಧದಲ್ಲಿ ಎಡಪಾರ್ಶ್ವದಲ್ಲಿ ತಿರುಮಲನೂ ಮಧ್ಯದಲ್ಲಿ ರಾಮರಾಯನೂ ಬಲಪಾರ್ಶ್ವದಲ್ಲಿ ವೆಂಕಟಾದ್ರಿಯೂ ವಿಜಯನಗರ ಸೈನ್ಯದ ದಂಡನಾಯಕರಾಗಿದ್ದು (ಸಿವೆಲ್ ಪು.209) ವೈರಿಪಡೆಗಳು ರಾಮರಾಯನ ತಲೆ ಕಡಿದ ನಂತರ ಉಳಿದಿಬ್ಬರು ದಂಡನಾಯಕರು ಸೈನ್ಯವನ್ನು ಮುನ್ನಡೆಸದೆ ವಿಜಯನಗರಕ್ಕೆ ಒಂದೇ ಉಸಿರಲ್ಲಿ ಓಡಿಬಂದು ಅರಮನೆಯ ಚರ ಸಂಪತ್ತನ್ನು ಪೆನುಗೊಂಡೆಗೆ ಲೂಟಿ ಮಾಡಿಕೊಂಡು ಹೋದ ಬಗ್ಗೆಯಾಗಲೀ ಈ ಮೂಲಕ ವೈರಿಪಡೆಗಳಿಂದ ಒಳಗೊಂಡು ಹಲವು ಬಗೆಗಳಲ್ಲಿ ಲೂಟಿ-ದರೋಡೆ ಪ್ರಕ್ರಿಯೆಗೆ ಮತ್ತು ವಿಜಯನಗರದ ಅರಾಜಕತೆಗೆ ನಾಂದಿ ಹಾಡಿದ ಬಗ್ಗೆಯಗಲೀ ಚಕಾರವೆತ್ತದೆ ವಿಜಯನಗರದ ನಾಶವನ್ನು ಬಹಮನಿ ಸೈನಿಕರ ತಲೆಗೆ ಕಟ್ಟಿಬಿಡಲಾಗಿದೆ. ಇಂಥ ಎಲ್ಲ ಸಂಗತಿಗಳ ಹಿಂದೆ 'ವೈಭವೀಕರಣ'ದ ಪರಿಕವರೆ ಕಾರ್ಯ ನಿರ್ವಹಿಸಿದೆ ಎನ್ನಬೇಕು. ಐತಿಹಾಸಿಕ ಅಂಶಗಳ ಸೂಕ್ಷ್ಮ ಹಾಗೂ ಸಮಗ್ರ ಪರಿಶೀಲನೆಯಿಂದ ವಿಜಯನಗರದ ಇತಿಹಾಸಕ್ಕೂ 'ವೈಭವೀಕರಣ' ಚಿಂತನೆಗೂ ನಂಟಿರುವುದು ತಿಳಿಯಬಹುದು. ಅಷ್ಟೇ ಅಲ್ಲ ಇಂದಿನ ಹಂಪಿಯಲ್ಲಿರುವ ಸ್ಮಾರಕಗಳೂ ಅವಶೇಷಗಳೂ ಈ ಪ್ರಕ್ರಿಯೆಯಿಂದ ಹೊರತಾಗಿರುವಂತೆ ಕಾಣುವುದಿಲ್ಲ.

**ಉಗ್ರ ನರಸಿಂಹ:**

ವಿಜಯನಗರದ ಅವನತಿಯ ಕಾಲಾವಧಿಯಲ್ಲಿ ಉಗ್ರ ನರಸಿಂಹ ವಿಗ್ರಹ ಹಾಳಾಯಿತೆಂದು ಹೇಳಲಾಗುತ್ತದೆ. ಇದರ ಅವಶೇಷಗಳ ಜೋಡಣೆ ಮತ್ತು ಸಂರಕ್ಷಣೆ ಕುರಿತ ಪ್ರಕರಣವನ್ನೆ 'ವೈಭವೀಕರಣ' ಚಿಂತನೆಗೆ ನಿದರ್ಶನಾರ್ಥವಾಗಿ ನೋಡಬಹುದು. ಹಂಪಿ ಬೇರೆ ಬೇರೆ ಕಾಲಘಟ್ಟಗಳಲ್ಲಿ ಬೌದ್ಧ, ಜೈನ, ಶೈವ, ವೈಷ್ಣವ ಮತಧರ್ಮಗಳ ಕೇಂದ್ರ ಮಾತ್ರವಾಗಿರದೆ ಎಲ್ಲ ಕಾಲಗಳಲ್ಲಿ ಸ್ತ್ರೀ ದೈವಾರಾಧನೆಯ ಕೇಂದ್ರವೂ ಆಗಿತ್ತು. ರಾಜ್ಯ ಮತ್ತು ಕೇಂದ್ರ ಸರಕಾರಗಳ ಸಂಬಂಧಪಟ್ಟ ಇಲಾಖೆಗಳಲ್ಲಿ ಅಧಿಕಾರಿಗಳು ತಮ್ಮ ನಿರ್ದಿಷ್ಟ ಮತ ಧರ್ಮದ ದೈವವನ್ನು ಹಂಪಿಯ ಪ್ರಾತಿನಿಧಿಕ ದೈವವನ್ನಾಗಿ ಮುಂಚೂಣಿಗೆ ತರುವ ಅವಸರದಲ್ಲಿ, ಒಡೆದು ಹೋಗಿದ್ದ ನರಸಿಂಹ ವಿಗ್ರಹದ ಸಂರಕ್ಷಣಾ ಕಾರ್ಯವನ್ನು ಮೊದಲ ಆದ್ಯತೆಯ ಮೇಲೆ ಕೈಗೆತ್ತಿಕೊಂಡರು, ಮುರಿದ ಕಾಲುಗಳನ್ನು ಅಡ್ಡಪಟ್ಟಿ ಕೊಟ್ಟು ನಿಲ್ಲಿಸಿ ಉಗ್ರ ನರಸಿಂಹನೆಂದು ಹೆಸರಿಸಿದರು, ಹಂಪಿಯೆಂದರೆ ಉಗ್ರ ನರಸಿಂಹ ಮತ್ತು ಕಲ್ಲಿನ ರಥ ಎನ್ನುವಷ್ಟರ ಮಟ್ಟಿಗೆ ಅವನ್ನು ಪ್ರಸಿದ್ಧಿ ಪಡಿಸಿದರು. ಕಾಲಾನಂತರದಲ್ಲಿ ಶಿವರಾಮ ಕಾರಂತರು ಹಂಪಿಗೆ ಭೇಟಿ ನೀಡಿ ಉಗ್ರ ನರಸಿಂಹನ ಕುರಿತು ತಮ್ಮ ತಕರಾರು ತೆಗೆದರು. ಸೌಂದರ್ಯ ಪ್ರಜ್ಞೆ ಮತ್ತು ವಿವೇಚನೆ ಇಲ್ಲದೆ ಶಾಂತ ಮುಖಮುದ್ರೆಯ ಲಕ್ಷ್ಮೀನರಸಿಂಹ ವಿಗ್ರಹಕ್ಕೆ ಅಡ್ಡಪಟ್ಟಿ ಕೊಟ್ಟು ಸಂರಕ್ಷಣೆಯ ಹೆಸರಿನಲ್ಲಿ ವಿಕಾರಗೊಳಿಸಿರುವುದಲ್ಲದೆ ಉಗ್ರ ನರಸಿಂಹನೆಂದು ಪ್ರಚುರಪಡಿಸಿದ ಇಲಾಖೆಯನ್ನು ತರಾಟೆಗೆ ತೆಗೆದುಕೊಂಡರು. ಕಾರಂತರ ವಾದಕ್ಕೆ ಪೂರಕವಾಗಿ ನರಸಿಂಹ ವಿಗ್ರಹದ ಎಡತೊಡೆಯ ಮೇಲೆ ಆಸೀನಳಾಗಿದ್ದ ಲಕ್ಷ್ಮೀ ವಿಗ್ರಹದ ಕೈಯೊಂದು ಬೆನ್ನ ಹಿಂಭಾಗಕ್ಕೆ ಆಸರೆಗಾಗಿ ಚಾಚಿಕೊಂಡಿದ್ದು, ಮುರಿದುಹೋದ ಅದರ ಮುಂದಿನ ಭಾಗ ಇಂದಿಗೂ ಹಾಗೆಯೇ ಉಳಿದಿದೆ. ಕಾರಂತರ ಅಭಿಪ್ರಾಯ ವ್ಯಾಪಕ ಮನ್ನಣೆಗೆ ಪಾತ್ರವಾಯಿತು. ಇಲಾಖೆಯ ವಿಕೃತರೂಪ ಶಾಶ್ವತವಾಗಿ ಉಳಿದುಹೋಯಿತು. ಈ ಎಲ್ಲ ಅವಾಂತರಗಳಿಗೆ ಮೂಲಬೀಜ ಸ್ವಮತ ಕುರಿತ ಅಂಧಾಭಿಮಾನ ಮತ್ತು ಸ್ವಮತದ ದೈವವನ್ನು ಪ್ರಸ್ತುತ ಸಮಾಜದಲ್ಲಿ ಪ್ರಭಾವಿಯನ್ನಾಗಿಯೂ ಉನ್ನತ ಸ್ಥಿತಿಯಲ್ಲಿಯೂ ಇರಿಸಬೇಕೆನ್ನುವ ಹುಚ್ಚು ಸಾಹಸ ಮಾತ್ರ. ಇಲ್ಲಿ ಇತಿಹಾಸ ನಿಷ್ಠೆಯಾಗಲೀ ಆ ಮೂಲಕ ಒಂದು ಕಾಲಘಟ್ಟದ ಸಾಂಸ್ಕೃತಿಕ ಸ್ಥಿತಿಗತಿಯ ಸಂರಕ್ಷಣೆಯಾಗಲೀ ಎಲ್ಲವೂ ಶೂನ್ಯಸ್ಥಿತಿ ತಲುಪಿತ್ತು ಎಂಬುದು ಬೇರೆ ಮಾತು. ಪ್ರಾಚ್ಯ ವಸ್ತುಗಳ ಸಂರಕ್ಷಣೆಯ ಸಂದರ್ಭದಲ್ಲಿ ವೈಭವೀಕರಣ ಪ್ರಕ್ರಿಯೆ ಕಾರ್ಯಗತಗೊಂಡ ಸ್ವರೂಪಕ್ಕೆ ಇದೊಂದು ಉತ್ತಮ ಪ್ರಕರಣವಾಗಿದ್ದು, ಭೋಜನಶಾಲಾ ಸ್ಮಾರಕವನ್ನು ಕೂಡ ಇದೇ ಹಿನ್ನೆಲೆಯಲ್ಲಿ ಪರಿಶೀಲಿಸಬಹುದು.

✍ ಶ್ರೀಧರ ಪಿಸ್ಸೆ

**ಭೋಜನಶಾಲಾ**

ಕಮಲಾಪುರದಿಂದ ಹಂಪಿಗೆ ಹೋಗುವ ರಸ್ತೆಯಲ್ಲಿ ಕೋಟೆಗೋಡೆ, ರಾಣಿ ಸ್ನಾನಗೃಹ ದಾಟಿ ಮುಂದೆ ಹೋದಲ್ಲಿ ಅಂದರೆ ಕಮಲಾಪುರದಿಂದ ಒಂದು ಕಿ.ಮೀ. ನಂತರದಲ್ಲಿ ರಸ್ತೆಯ ಎಡಗಡೆಗೆ ಭೋಜನಶಾಲಾ ಎಂಬ ಬೋರ್ಡ್ (ಕಳೆದ ಶತಮಾನದ ತೊಂಬತ್ತರ ದಶಕದಲ್ಲಿ) ಇತ್ತು. (ಈಗ ಬೋರ್ಡ್ ಹಾಕಲು ಹೊಸ ಕಂಬ ನೆಡಲಾಗಿದೆ. ಬೋರ್ಡ್ ಇಲ್ಲ.) ಅದರ ಪಕ್ಕದಲ್ಲಿ ರಸ್ತೆಯಲ್ಲಿ ಸುಮಾರು ನೂರಿಪ್ಪತ್ತು ನೂರನಲವತ್ತು ಅಡಿಗಳ ದೂರದವರೆಗೆ ಗ್ರಾನೈಟ್ ಕಲ್ಲಿನಿಂದ ಕಟ್ಟಿದ, ಇಬ್ಬರು ಓಡಾಡಬಹುದಾದಷ್ಟು ಅಗಲವಿರುವ ನಾಲೆಯೊಂದು ಚಾಚಿಕೊಂಡಿದೆ. ಕೆಳಗೂ ಗ್ರಾನೈಟ್ ಕಲ್ಲು ಹಾಸಿರುವುದನ್ನು ಗುರುತಿಸಬಹುದು. ನಾಲೆಯ ಎರಡೂ ಬದಿಯ ಕಲ್ಲು ದಂಡೆಯ ಮೇಲೆ ಜೋಡಿಸಿದ್ದ ಕಪ್ಪು ಕಲ್ಲು ಚಪ್ಪಡಿಗಳ ಮೇಲೆ ಕೆತ್ತಿದ ಬಾಳೆ ಎಲೆ ಹಾಗೂ ಗುಂಡಗಿನ ಊಟದ ತಟ್ಟೆ ಮತ್ತು ಅದರ ಸುತ್ತ ಸಣ್ಣ ಬಟ್ಟಲುಗಳ ಆಕಾರಗಳು ಪ್ರವಾಸಿಗರ ಕುತೂಹಲವನ್ನು ಸೆಳೆಯುತ್ತವೆ. ರಸ್ತೆಯಂಚಿನ ಆರಂಭದಲ್ಲಿ ಅಂಥ ಕಪ್ಪು ಚಪ್ಪಡಿ ಕಲ್ಲುಗಳನ್ನು ಮಕಾಡೆ ಹಾಕಿದಂತಿದ್ದು ಅದರ ಮೇಲೆ ಯಾವುದೇ ಕೆತ್ತನೆಯ ಚಿತ್ತಾರ ಕಂಡುಬರುವುದಿಲ್ಲ. ಸುಮಾರು ಎರಡೂವರೆ ಅಡಿ ಅಗಲ ಮತ್ತು ಏಳೆಂಟು ಅಡಿ ಉದ್ದದ ಅಂಥ ಒರಟು ಚಪ್ಪಡಿ ಕಪ್ಪು ಕಲ್ಲುಗಳು ಎರಡೂ ದಂಡೆಯ ಮೇಲೆ ಸುಮಾರು ಎರಡು ಮೂರು ಇರಬಹುದು. ರಸ್ತೆಯಿಂದ ಸುಮಾರು ಮೂವತ್ತು ನಲವತ್ತು ಅಡಿಗಳಲ್ಲಿ ನಾಲೆ ಸುಮಾರು 70 ಡಿಗ್ರಿಗಳಲ್ಲಿ ಎಡಕ್ಕೆ ತಿರುಗುತ್ತದೆ. ಹಾಗೆಯೇ ಮುಂದೆ ಹೋದಲ್ಲಿ ಊಟದ ತಟ್ಟೆಗಳು ಕೆತ್ತಿದ ಕಪ್ಪು ಕಲ್ಲಿನ ಚಪ್ಪಡಿಗಳು ಇಲ್ಲವಾಗಿ, ಕೇವಲ ಗ್ರಾನೈಟ್ ಕಲ್ಲಿನ ನಾಲೆ ಮುಂದುವರೆಯುತ್ತದೆ. ಈ ಗ್ರಾನೈಟ್ ಕಲ್ಲುಗಳ ಮೇಲೂ ಅಲ್ಲಲ್ಲಿ ಕೆತ್ತನೆ ಮಾಡಿದ್ದು ಆಕಾರಗಳು ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಕೆಲವು ಕಡೆ ಊಟದ ತಟ್ಟೆಯಾಕಾರ ಕೆತ್ತಿರುವ ಗ್ರಾನೈಟ್ ಕಲ್ಲುಗಳನ್ನು ನಾಲೆ ದಂಡೆಯ ಕಟ್ಟಡಕ್ಕೆ ಬಳಸಿರುವುದು ಕಂಡುಬರುತ್ತದೆ. ಈ ನಾಲೆ ಮುಗಿಯುವಲ್ಲಿ ಸಿ ಜುಗಲ್ಲುಗಳ ರಾಸಿ ಬಿದ್ದಿದೆ. ನಾಲೆಯ ಎರಡೂ ದಂಡೆಗಳಿಂದ ಆದರ ಹಿಂಭಾಗಕ್ಕೆ ಹತ್ತು ಅಡಿಗಳವರೆಗೆ ಕಲ್ಲು ಕಟ್ಟೆ ವೇದಿಕೆಯಂತೆ ಎತ್ತರಿಸಲಾಗಿದೆ. ಬಟ್ಟ ಬಯಲಲ್ಲಿ, ನಾಲೆಯ ಮೇಲಿರುವ ಕಲ್ಲು ತಟ್ಟೆಗಳು ಯಾವ ಬಗೆಯ ಭೋಜನ ಶಾಲೆ ಆಗಿರಬಹುದು ಎಂಬ ಅನುಮಾನ ಈ ಸ್ಮಾರಕವನ್ನು ನೋಡುತ್ತಿರುವಂತೆ ಯಾವ ಪ್ರವಾಸಿಗನಿಗೂ ಕಾಡದೆ ಇರದು. ಊಟದ ಕಲ್ಲಿನ ತಟ್ಟೆಗಳಿರುವ ನಾಲೆ ರಸ್ತೆಯಂಚಿನಲ್ಲಿ ಇದ್ದಕ್ಕಿದ್ದಂತೆ ಕೊನೆಗೊಂಡಂತೆ ಭಾಸವಾಗುತ್ತದೆ. ಸ್ವಲ್ಪ ಎಚ್ಚರದಿಂದ ಗಮನಿಸಿದರೆ ಬ್ರಿಟಿಷರು ಕಮಲಾಪುರದಿಂದ ಹಂಪಿಗೆ ಹೊಸ ರಸ್ತೆ ಮಾಡುವ ಸಂದರ್ಭದಲ್ಲಿ ಇಂದಿನ ರಸ್ತೆಯ ಭಾಗದಲ್ಲಿ ಮುಂದುವರೆದಿದ್ದ ಕಲ್ಲಿನ ಊಟದ ತಟ್ಟೆಗಳ ನಾಲೆಯನ್ನು ಅಗೆದು ನಾಶಪಡಿಸಿರಬಹುದಾದ ಸಾಧ್ಯತೆ ಗೋಚರಿಸುತ್ತದೆ. ಬಟ್ಟ ಬಯಲಿನಲ್ಲಿ ಊಟ ಮಾಡುತಿದ್ದ ಜನವರ್ಗ ಯಾವುದು? ಭೋಜನ ಶಾಲೆಯ ನುಡಿಗಟ್ಟು ನೀಡುವ ಭವ್ಯ ಮತ್ತು ವೈಭವದ ಕಲ್ಪನೆ ಮತ್ತು ಬೋಳು ಬೋಳಾದ ಕಲ್ಲಿನ ಊಟದ ತಟ್ಟೆಗಳ ನಾಲೆ ಇರುವ ಸ್ಥಿತಿಯ ವೈರುಧ್ಯದ ನಡುವೆ ಇದ್ದಿರಬಹುದಾದ ವಾಸ್ತವ ಯಾವುದು? ಮೂಲ ಸ್ಥಿತಿ ಮತ್ತು ಕಾಲಾಂತರದಲ್ಲಿ ಬದಲಾದ ಸ್ಥಿತಿ–ಇವುಗಳ ನಡುವಿನ ಸಂಬಂಧ ಮತ್ತು ಸ್ವರೂಪಗಳು ಯಾವ ಬಗೆಯವು?

ರಸ್ತೆಯ ಆಚೆಗೆ ಅಂದರೆ ಸ್ವಲ್ಪ ಮುಂದಕ್ಕೆ ಮಂಟಪದ ಆಕಾರವುಳ್ಳ ಒಂದು ಕಟ್ಟಡ ಇಂದಿಗೂ ಸುಭದ್ರವಾಗಿದೆ. ಕಲ್ಲಿನ ತೊಟ್ಟಿ/ಗಚ್ಚು ಇರುವ ಅದನ್ನು ನೀರಿನ ಅರವಂಟಿಗೆ ಎಂದು ಹೇಳಲಾಗುತ್ತದೆ ಈ ಕಟ್ಟಡ ಕಟ್ಟಿದ ಕಾಲಕ್ಕೆ ಸುಂದರವಾಗಿದ್ದಿಬಹುದು. ಆದರೆ ಅದನ್ನು ನೀರಿನ ಅರವಂಟಿಗೆಗಾಗಿಯೆ ಕಟ್ಟಿಸಲಾಗಿತ್ತು ಎನ್ನುವುದಾದರೆ ಈಗಲೂ ಭವ್ಯವಾಗಿ ಕಾಣುತ್ತದೆ. ಅರಮನೆಗೆ ಹೋಗಿಬರಲು ಸಣ್ಣ ಬಾಗಿಲೊಂದು ಸ್ವಲ್ಪ ದೂರದಲ್ಲೆ ಇದ್ದು ಅರಮನೆಗೆ ಅಂಟಿ ಕೊಂಡಂತಿರುವ, ಅರಮನೆಯ ಅಕ್ಕಪಕ್ಕದ ಈ ಜಾಗ ಸಾಮಾನ್ಯ ಜನರಿಗೆ ನಿರ್ಬಂಧಿತ ಪ್ರದೇಶವಾಗಿರುವಂತೆ ಕಾಣುತ್ತದೆ. ಇನ್ನೂ ಹೊರನಾಡ ಆಗುಂತುಕ ಪ್ರವಾಸಿಗರಿಗಂತೂ ಇಲ್ಲಿಗೆ ಖಂಡಿತ ಪ್ರವೇಶವಿರಲಾರದು. ಹಾಗಿದ್ದಲ್ಲಿ ಇಲ್ಲಿನ ನೀರಿನ ಅರವಂಟಿಗೆ ಯಾರಿಗಾಗಿ ಕಟ್ಟಿಸಿದ್ದಿರಬಹುದು ಎಂಬ ಪ್ರಶ್ನೆ ಎದುರಾಗುತ್ತದೆ. ಇಟ್ಟಿಗೆ ಗೋಡೆಯದು ಇದ್ದಿರಬಹುದಾದ ಐದಾರು ಕಂಬಗಳನ್ನೊಳಗೊಂಡು ಹಲವು ಕಮಾನುಗಳುಳ್ಳ ಈ ಕಟ್ಟಡವನ್ನು ದಾಟಿ ಬೇಲಿಯ ಒಳಗೆ ಹೋದರೆ ಕಲ್ಲು ಮಣ್ಣಿನ ಸಣ್ಣ ಪುಟ್ಟ ಗುಡ್ಡೆಗಳು, ಕಲ್ಲು ಮುಳ್ಳು, ಮುಳ್ಳುಗಿಡಗಳನ್ನು ಒಳಗೊಂಡು ಇತರ ಎಲ್ಲ ಬಗೆಯ ಸಣ್ಣ ಪುಟ್ಟ ಗಿಡಗಳು ವ್ಯಾಪಿಸಿಕೊಂಡಿವೆ. ಸ್ಥಳ ಮೂಲ ಬಲ್ಲವರೊಂದಿಗೆ ಮುಂದೆ ಹೋದಲ್ಲಿ ಅಕ್ಕಪಕ್ಕದಲ್ಲೇ ಅಳವಡಿಸಿದ್ದ ಐದಾರು ಇಂಚು ಅಗಲದ ಸುಟ್ಟ ಮಣ್ಣಿನ ಪೈಪುಗಳ ಮುಂಭಾಗದ ಅವಶೇಷ ಅಲ್ಲಿ ಕಂಡುಬರುತ್ತದೆ. ಹಾಗೆಯೇ ರಸ್ತೆಗೆ ಪರ್ಯಾಯವಾಗಿ ಮುಂದುವರೆದಲ್ಲಿ ಗಾರೆಯಿಂದ ಮಾಡಿದ ದೊಡ್ಡ ತೊಟ್ಟಿಯೊಂದು ಕಣ್ಣಿಗೆ ಬೀಳುತ್ತದೆ. ಅದಕ್ಕೆ ಕಮಲಾಪುರದ ದಿಕ್ಕಿನಲ್ಲಿ ಮೇಲೆ ಹೇಳಿದಂತೆ ಎರಡು ಪೈಪುಗಳು ಅಳವಡಿಕೆಯಾಗಿದ್ದು ಅದರ ವಿರುದ್ಧ ದಿಕ್ಕಿನಲ್ಲಿ ಸಮಾನ ಅಂತರದ ನಡುವೆ ಇರುವ ನಾಲ್ಕು ಪೈಪುಗಳ ಬಾಯಿಗಳಿವೆ. ಬಹುಶಃ ಇದೊಂದು ಅರಮನೆಗೆ ನೀರು ವ್ಯವಸ್ಥೆ ಮಾಡುವ ನಿಯಂತ್ರಿತ ಕೊಠಡಿಯಾಗಿದ್ದಿರಬಹುದೆಂಬ ಊಹೆ ತಜ್ಞ ಸ್ನೇಹಿತರದ್ದಾಗಿದೆ. ಪಯಸ್ ಸೂಚಿಸಿರುವಂತೆ ಹಣ್ಣಿನ ತೋಟಕ್ಕೆ ನೀರು ಒದಗಿಸುವ ಹಾಗೂ ಅರಮನೆಗೆ ನೀರು ಒದಗಿಸುವ ನೀರು ನಿಯಂತ್ರಕ ವ್ಯವಸ್ಥೆಯ ಭಾಗವಾಗಿ ಅರವಂಟಿಗೆ ಕಟ್ಟಡ ಮತ್ತು ಊಟದ ಕಲ್ಲಿನ ತಟ್ಟೆಗಳು ಕೆತ್ತಿರುವ ನಾಲೆ ಸೇರಿರಬಹುದೆ ಎಂಬ ಪ್ರಶ್ನೆ ಕೇಳಿಕೊಳ್ಳುವಂತೆ ಇದೆ. ಈ ಮೂರೂ ಅವಶೇಷಗಳು ಒಂದು ವ್ಯವಸ್ಥೆಗೆ ಸೇರಿದ್ದೊ ಅಥವಾ ಬೇರೆ ಬೇರೆ ವ್ಯವಸ್ಥೆಗಳು ನೆಲೆಗೊಂಡ ಏಕ ಪ್ರದೇಶವಾಗಿತ್ತೋ ನಿರ್ದಿಷ್ಟವಾಗಿ ಏನೂ ಹೇಳಲಾಗದು.

ಈ ಕುರಿತು ಸಂಬಂಧಪಟ್ಟ ಇಲಾಖೆಯಲ್ಲಿ ಕೆಲಸ ಮಾಡುವರನ್ನು ವಿಚಾರಿಸಬಹುದು. ಅವರ ಪ್ರಕಾರ ಭೋಜನಶಾಲೆಯೆಂದು ಸೂಚಿಸಿರುವ ನಾಲೆ ಕಮಲಾಪುರದ ಕರೆಯಿಂದ ನೀರು ಹರಿಯುವ ನಾಲೆಯಾಗಿತ್ತು. ಊಟದ ತಟ್ಟೆ ಕೆತ್ತಿರುವ ಕಪ್ಪು ಕಲ್ಲಿನ ಚಪ್ಪಡಿಗಳು ಆನೆಗೊಂದಿ ಮತ್ತು ಹಂಪಿಯ ಅರಮನೆ ಆವರಣದ ಸುತ್ತಲ ಇತರ ಸ್ಥಳಗಳಲ್ಲಿ ಕೂಡ ಕಂಡುಬರುತ್ತವೆ. ಗ್ರಾನೈಟ್ ಕಲ್ಲಿನಿಂದ ಕಟ್ಟಿದ ನಾಲೆ ಮೇಲಿರುವ ಊಟದ ತಟ್ಟೆಯ ಕಲ್ಲುಗಳು ಮೊದಲಿಗೆ ಅದೇ ಪ್ರದೇಶದಲ್ಲಿ ಇತರ ಕಡೆಗಳಲ್ಲಿದ್ದು ಅವನ್ನು ತಂದು ಇಲ್ಲಿ ಸಣ್ಣ ಕಲ್ಲುಕೊಟ್ಟು ಜೋಡಿಸಲಾಗಿದೆ. ಸಾಮ್ರಾಜ್ಯದ ಕಾಲದಲ್ಲಿ ಗಣ್ಯ ಅತಿಥಿಗಳನ್ನು ಉಪಚರಿಸಲು ಭೋಜನಶಾಲೆ ಎಂಬ ಪ್ರತ್ಯೇಕ ಕಟ್ಟಡವೊಂದು ಅರಮನೆಯ ಆವರಣದೊಳಗೂ ಹೊರಗೂ ಇದ್ದಿರಬಹುದಾಗಿದ್ದು ಅದು ಎಲ್ಲಿತ್ತೆಂಬ ಸುಳಿವು ಈಗ ಯಾರಿಗೂ ತಿಳಿಯದಾಗಿದೆ.

ಈ ವಿವರಗಳು ವಾಸ್ತವ ಸ್ಥಿತಿಗತಿಗಳಿಗೆ ಹತ್ತಿರವೆಂದು ತಿಳಿಯುವುದಾದಲ್ಲಿ, ಭೋಜನ ಶಾಲೆಗೂ ಊಟದ ತಟ್ಟೆ ಕೆತ್ತಿರುವ ಕಪ್ಪು ಕಲ್ಲಿನ ಚಪ್ಪಡಿಗಳಿಗೂ ಅವು ಇರುವ ಗ್ರಾನೈಟ್ ಕಲ್ಲಿನಿಂದ ಕಟ್ಟಿದ ನಾಲೆಗೂ ಪರಸ್ಪರ ಯಾವ ಸಂಬಂಧವೂ ಇಲ್ಲ ಎನ್ನುವ ಸಂಗತಿ ತಿಳಿದುಬರುತ್ತದೆ. ಅಲ್ಲದೆ ನಾಲೆಗೂ ಅರವಂಟಿಗೆ ಮಂಟಪಕ್ಕೂ ಈಗ ಅವಶೇಷವಾಗಿರುವ ಮತ್ತು ನೀರು ವಿತರಣ ವ್ಯವಸ್ಥೆಯ ನಿಯಂತ್ರಕ ಕಟ್ಟಡವಿದ್ದಿರಬಹುದಾದ ಅದರ ಹತ್ತಿರದ ಕಟ್ಟಡಕ್ಕೂ ಪರಸ್ಪರ ಸಂಬಂಧವಿರುವ ಸಾಧ್ಯತೆಗಳು ಗೋಚರಿಸುತ್ತದೆ. ಹಾಗಿದ್ದಲ್ಲಿ ಕಲ್ಲಿನ ಊಟದ ತಟ್ಟೆಗಳ ಸಾಲಿಗೆ ಭೋಜನ ಶಾಲೆ ಎಂದು ಹೆಸರು ಬಂದದ್ದಾದರೂ ಹೇಗೆ?

ಕುತೂಹಲದ ಅಂಶವೆಂದರೆ, ಅಲ್ಲಿಂದ ಸುಮಾರು ನೂರು ಇನ್ನೂರು ಅಡಿ ಮುಂದೆ ರಸ್ತೆಯಲ್ಲಿ ಹೋದರೆ ಮಾವಿನ ಮರಗಳಿಂದ ಆವೃತ್ತವಾದ ಪ್ರವೇಶ ದ್ವಾರವೊಂದು ಕಣ್ಣಿಗೆ ಬೀಳುತ್ತದೆ. ಈ ಕಲ್ಲಿನ ಕಟ್ಟಡ ಸಾಮ್ರಾಜ್ಯವೊಂದರ ಯಾವುದೇ ಸಾಮಾನ್ಯ ಪ್ರವೇಶ ದ್ವಾರದಂತೆ ಇದ್ದಿರಬಹುದಾದರೂ ಇಂದಿಗೆ ದೊಡ್ಡದಾಗಿಯೆ ಕಾಣುತ್ತದೆ. ಅರಮನೆ ಆವರಣದ ಕೋಟೆ ಗೋಡೆಯ

ಎದುರಿಗೆ ಇಂಥ ಪ್ರವೇಶ ದ್ವಾರದ ನಿರ್ಮಾಣ ಯಾವ ಉದ್ದೇಶಕ್ಕಾಗಿ ನಡೆದಿದೆ ಎಂಬುದು ಕೌತುಕವೂ ನಿಗೂಢವೂ ಆಗಿ ಕಾಣುತ್ತದೆ. ಇಲ್ಲಿಂದ ಎಲ್ಲಿಗೆ ದಾರಿಯಿತ್ತೊ ತಿಳಿಯದು. ಈಗಂತೂ ಈ ಜಾಗ ದೊಡ್ಡ ಮಾವಿನ ಮರಗಳಿಂದ ಆವೃತ್ತವಾಗಿದ್ದು, ಹೂವಿನ ದ್ವಾರವೆಂದು ಕರೆಯುತ್ತಾರೆ. ಆ ದ್ವಾರದ ಕಾವಲು ಮನೆಗಂಟಿ ಕೊಂಡಂತೆ ಇರುವ ದೇವರಗೂಡಿನಲ್ಲಿ ಅಂದಾಜು ಒಂದಡಿ ಅಗಲ ಮತ್ತು ಎರಡೂವರಡಿ ಎತ್ತರದ ಕಲ್ಲೊಂದಿದ್ದು, ಹರಿಷಿಣ ಕುಂಕುಮಗಳಿಂದ ಸಾರಿಸಿದಂತೆ ಅದರ ಮೇಲೆ ಕೇಸರಿ ಮತ್ತು ಹಳದಿ ಬಣ್ಣಗಳು ತುಂಬಿಹೋಗಿದೆ. ಅದರ ಆಕಾರ ಏನೂ ಸರಿಯಾಗಿ ಕಾಣದಂತಿದೆ. ಈ ಕುರಿತು ಸ್ಥಳೀಯರನ್ನು ಕೇಳಿದಲ್ಲಿ ಅವರಿದನ್ನು ಹೂವಿನಪ್ಪ ಎಂದೆನ್ನುತ್ತಾರೆ. ಈ ದೈವದ ಮೂಲ ಹೆಸರು ಏನೆಂದು ಕೇಳಿದರೆ ಗೊತ್ತಿಲ್ಲವೆನ್ನುತ್ತಾರೆ. ಗೆಳೆಯರಿಂದ ತಿಳಿದುಬಂದ ವಿಷಯವೆಂದರೆ, ಈ ಜಾಗ ಈಗಲೂ ಹೂಗಾರರಿಗೆ ಸೇರಿದುದಾಗಿದೆ.

ಈ ಎಲ್ಲ ಗೊಂದಲ, ಅಸ್ಪಷ್ಟತೆ ಮತ್ತು ನಿರ್ದಿಷ್ಟ ಸಂಬಂಧಗಳಿಲ್ಲದ ಮಾಹಿತಿಗಳ ನಡುವೆ ನಾನೊಮ್ಮೆ ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ ಸದಾನಂದ ಕನವಳ್ಳಿ ಅನುವಾದಿತ ರಾಬರ್ಟ್ ಸಿವೆಲ್ ನ ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ (2010 ಆವೃತ್ತಿ) ಓದುತ್ತಿದ್ದೆ. ಬಹುಶಃ ಕ್ರಿ.ಶ.1520–21ರಲ್ಲಿ ಬರೆದುದೆಂದು ಹೇಳಲಾದ ಡೊಮಿಂಗೊ ಪಯಸ್‌ನ ಕಥನದಲ್ಲಿ ಕೆಲವು ವಿವರಗಳನ್ನು ಪುಟ 262 ರಲ್ಲಿ ಓದಿ ಅಚ್ಚರಿಪಟ್ಟೆ. ಅದು ಹೀಗಿದೆ:

ರಾಜ ತನ್ನ ಅರಮನೆಯ ಹತ್ತಿರವೇ ತೆಂಗಿನ ತೋಫು ಮತ್ತು ಇತರ ಸಂಪದ್ಭರಿತ ಹಣ್ಣಿನ ಗಿಡಗಳನ್ನು ಹೊಂದಿದ್ದಾನೆ. ಮೂರರ ವಾಸಸ್ಥಾನದ ಕೆಳಗಡೆ ಒಂದು ಚಿಕ್ಕನದಿಯಿದೆ. ಅದರ ಈ ಬದಿಗೆ ಅನೇಕ ಹಣ್ಣಿನ ತೋಟಗಳು ಮತ್ತು ಅನೇಕ ಹಣ್ಣಿನ ಗಿಡಗಳುಳ್ಳ ತೋಟಗಳು ಇವೆ. ಅವುಗಳಲ್ಲಿ ಬಹುಮಟ್ಟಿಗೆ ಇರುವುದು ಮಾವು, ಅಡಿಕೆ, ಹಲಸು ಮತ್ತು ಅನೇಕ ಹಣ್ಣಿನ ನಿಂಬೆ, ಕಿತ್ತಲೆ ಗಿಡಗಳು, ಅವುಗಳೋ ಒಂದಕ್ಕೊಂದು ಎಷ್ಟು ಗುತ್ತಾಗಿ ಬೆಳೆದಿವೆಯೆಂದರೆ ಅದು ದಟ್ಟ ಅರಣ್ಯದಂತೆ ತೋರುತ್ತದೆ. ಅಲ್ಲಿ ಬಿಳಿದ್ರಾಕ್ಷಿಗಳೂ ಉಂಟು. ನಗರದಲ್ಲಿರುವ ನೀರೆಲ್ಲ ಪ್ರಥಮ ಸುತ್ತಿನ ಗೋಡೆಯ ಹೊರಗೆ ಇರುವ ನಾನು ಹೇಳಿದ ಎರಡು ಕೆರೆಗಳಿಂದ ಬರುತ್ತದೆ.

ಇದರಿಂದ ಕೃಷ್ಣದೇವರಾಯನ ಕಾಲದಲ್ಲಿ ಅರಮನೆಯ ಅಗತ್ಯಗಳಿಗಾಗಿ ಅರಮನೆಗೆ ಹೊಂದಿಕೊಂಡಂತೆ ಮತ್ತು ಚಿಕ್ಕ ನದಿಯ ನಡುವೆ ದೊಡ್ಡದೊಂದು ಹಣ್ಣಿನ ತೋಟವೊಂದಿತ್ತು. ಚಿಕ್ಕ ನದಿಯ ಕೆಳಗೆ ಮೂರರ ವಾಸಸ್ಥಾನವಿತ್ತು ಎಂಬ ವಿಷಯಗಳು ತಿಳಿದುಬರುತ್ತದೆ. ಇದರ ಬಗ್ಗೆ ಕುತೂಹಲ ಹುಟ್ಟಿ ಈ ಪ್ರದೇಶ ಎಲ್ಲಿ ಬರಬಹುದೆಂದು ಹುಡುಕಲು ಪ್ರಯತ್ನಪಟ್ಟೆ. ಕಮಲಾಪುರ–ಹಂಪಿ ರಸ್ತೆಯಲ್ಲಿ ಮೊದಲಿಗೆ ಸಿಗುವ ಕೋಟೆ ಆಂಜನೇಯ ಗುಡಿ ಎಡಗಡೆಗೆ ಗದ್ದೆಗಳಿಗೆ ಹೋಗುವ ರಸ್ತೆಯಿದೆ. ಅದರ ಬೆನ್ನು ಹತ್ತಿ ಹೋದಾಗ ಸುಮಾರು ಒಂದು ಕಿ.ಮೀ. ನಂತರ ರಸ್ತೆ ಬಲಗಡೆಗೆ ತಿರುಗುತ್ತದೆ. ಅನಂತರ ಸುಮಾರು ಒಂದೂವರೆ ಕಿ.ಮೀ. ಕ್ರಮಿಸಿದ ನಂತರ ಮತ್ತೆ ಬಲಗಡೆಗೆ ತಿರುವು ಪಡೆದು ಸ್ವಲ್ಪ ಮುಂದೆ ಹೋಗಿ, ಎಡಕ್ಕೆ ತಿರುಗಿ ನಡೆದು, ಬಲಕ್ಕೆ ಮುಂದುವರೆದರೆ ಹಳ್ಳವೊಂದು ಸಿಗುತ್ತದೆ. ಅದನ್ನು ದಾಟಿ ಕಾಲುಹಾದಿಯಲ್ಲಿ ಸುಮಾರು ದೂರ ಸಾಗಿದರೆ ಅದು ಅಕ್ಕ ತಂಗಿ ಗುಂಡುಕಲ್ಲಿನಿಂದ ಕಡ್ಡಿರಾಂಪುರಕ್ಕೆ ಹೋಗುವ ರಸ್ತೆಗೆ ತಲುಪುತ್ತದೆ. ನಾನು ಕ್ರಮಿಸಿದ ಹಾದಿಯನ್ನು ಗಮನಿಸಿದಾಗ ಆಂಜನೇಯ ಗುಡಿಯಿಂದ ಗದ್ದೆ ರಸ್ತೆ, ಹಳ್ಳ, ಕಡ್ಡಿರಾಂಪುರ ರಸ್ತೆ ಮೂಲಕ ಅಕ್ಕ ತಂಗಿ ಗುಂಡುಕಲ್ಲು ಮತ್ತು ಅಲ್ಲಿಂದ ಆಂಜನೇಯ ಗುಡಿಗೆ ಸುಮಾರು 7–8 ಕಿ.ಮೀ. ವ್ಯಾಪ್ತಿಯ ಪ್ರದೇಶ ಡೊಮಿಂಗೊ ಪಯಸ್ ಸೂಚಿಸಿರುವ ಅರಮನೆ ಹಣ್ಣಿನ ತೋಟವೆಂದು ಕಾಣುತ್ತದೆ. ಹಳ್ಳವೇ ಆತ ಸೂಚಿಸುವ ಚಿಕ್ಕ ನದಿ ಇರಬಹುದು. ಯೂರೋಪಿಯನ್ ಸಮಾಜದಲ್ಲಿ ಕರಿಯ ಗುಮಾಮರಾಗಿದ್ದ ಮೂರರು ಎಂಬರ್ಥದಲ್ಲಿ ಇಂಡಿಯಾದ ಸಾಮಾಜಿಕ ಶ್ರೇಣೀಕರಣದಲ್ಲಿ ಅಂದು ಊರ ಹೊರಗೆ ವಾಸಿಸುತ್ತಿದ್ದ ಪಂಚಮರು, ಅಂದರೆ ಇಂದಿನ ಅಸ್ಪೃಶ್ಯರನ್ನು ಪಯಸ್ ಸೂಚಿಸಿದ್ದಾನೆಂದು ತೋರುತ್ತದೆ.

ಇಂದು ಹೂವಿನ ದ್ವಾರವೆಂದು ಕರೆಯುವ ಅರಮನೆಯ ಕೋಟೆ ಗೋಡೆಗೆ ಎದುರಿರುವ ಪ್ರವೇಶ ದ್ವಾರ ಬಹುಶಃ ಅಂದಿನ ಹಣ್ಣಿನ ತೋಟಕ್ಕೆ ಅರಮನೆಯ ಮಂದಿ ಹೋಗಿ ಬರುವ ಬಾಗಿಲಾಗಿರಬಹುದು. ಈ ದ್ವಾರ ಮತ್ತು ಅರಮನೆಗೆ ಹಿಂಭಾಗದಲ್ಲಿರುವ ಅರಮನೆಯಿಂದ ತೋಟದ ಕಡೆಗೆ ಹೊರ ಬರುವ ಸಣ್ಣ ಬಾಗಿಲು ಪರಸ್ಪರ ಸಂಬಂಧವಿರುವ ಮಾರ್ಗಗಳಾಗಿರ ಬಹುದು. ಈ ಎಲ್ಲ ಸಾಧ್ಯತೆಗಳನ್ನು ಒಪ್ಪಬಹುದಾದಲ್ಲಿ 'ಭೋಜನಶಾಲೆ' ಗೊಂದಲ ಮತ್ತು ಅಸ್ಪಷ್ಟತೆ ಕಡೆಗೆ ಹೊರಳಬಹುದು.


ಇಲಾಖೆಯ ಸಿಬ್ಬಂದಿ ಸಾಮಾನ್ಯವಾಗಿ ಭಾವಿಸುವಂತೆ ಭೋಜನಶಾಲೆ ಅರಮನೆ ಆವರಣದಲ್ಲಿ ಇದ್ದಿತೊ ಇಲ್ಲವೊ ಯಾವುದನ್ನು ಸಾಧಿಸಲು ಆಧಾರಗಳಿಲ್ಲ. ಆದರೆ ಗ್ರಾನೈಟ್ ಕಲ್ಲಿನ ನಾಲೆ, ಅರವಂಟಿಗೆ ಮತ್ತು ನೀರು ವ್ಯವಸ್ಥೆ ನಿಯಂತ್ರಕ ಕಟ್ಟಡ– ಇವೆಲ್ಲ ಕಮಲಾಪುರದಿಂದ ಹರಿಯುತ್ತಿದ್ದ ನೀರಿನ ನಾಲೆಗೆ ಸಂಬಂಧಿಸಿದ್ದಿರಬಹುದು ಹೊರತು ಗ್ರಾನೈಟ್ ಕಲ್ಲಿನ ನಾಲೆ ಮೇಲೆ ಜೋಡಿಸಿಟ್ಟ ಊಟದ ತಟ್ಟೆಗಳನ್ನು ಕೆತ್ತಿದ ಚಪ್ಪಡಿ ಕಲ್ಲುಗಳಿಗಲ್ಲ ಎಂಬುದು ಸ್ಪಷ್ಟ. ಹಾಗಿದ್ದರೆ ಏನಿದು ಈ ಭೋಜನಶಾಲೆ?

ಇಲಾಖೆಯ ಸಿಬ್ಬಂದಿ ಸಾಮಾನ್ಯವಾಗಿ ಸೂಚಿಸುವಂತೆ, ಊಟದ ತಟ್ಟೆಯ ಕಲ್ಲುಗಳು ಹಂಪಿಯ ಆ ಪ್ರದೇಶದ ವಿವಿಧೆಡೆಗಳಲ್ಲಿ ಮತ್ತು ಆನೆಗೊಂದಿಯಲ್ಲಿ ಇರಬಹುದು. ಅವು ದೊರೆತ ಅಂಥ ಇನ್ನೊಂದು ಜಾಗ ಅರಮನೆಯ ಹಣ್ಣಿನ ತೋಟವೂ ಆಗಿದ್ದಿರಬಹುದು. ಡೊಮಿಂಗೊ ಪಯಸ್ ಹೇಳಿರುವ ಭಾರತೀಯ ಮೂರರು ತಮ್ಮ ಕೂಲಿ ಕೆಲಸಗಳಿಗಾಗಿ ಹೊರಹೋದ ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಸಮತಟ್ಟಾದ ಕಲ್ಲನ್ನು ತೊಳೆದು ಅದರ ಮೇಲೆ ಊಟ ಮಡುವುದನ್ನು ಇಂದಿಗೂ ಅಪರೂಪಕ್ಕಾದರೂ ಉಳಿಸಿಕೊಂಡಿರು ವುದು ಸುಳ್ಳಲ್ಲ. ಬಾಳೆ ಎಲೆಗಳನ್ನು ಸಮಾಜದ ಮೇಲು ವರ್ಗಗಳು ಊಟಕ್ಕೆ ಬಳಸುತ್ತಿರುವುದು ಉನ್ನತ ಸಂಸ್ಕೃತಿಯ ಹೆಮ್ಮೆಯ ಭಾಗವಾಗಿರುವ ಹಾಗೆಯೆ ಶೋಷಿತ ಸಮುದಾಯಗಳು ತಾರತಮ್ಯ ನೀತಿಗೆ ಒಳಗಾಗಿ ಬಾಳೆ ಎಲೆಗೂ ಎರವಾಗಿ ಬರಿಯ ಕಲ್ಲಿನ ಮೇಲೆ ಊಟ ಮಾಡುವಂಥ ಹೀನಸ್ಥಿತಿ ತಲುಪಿದ್ದಕ್ಕೆ ಭಾರತೀಯ ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆ ಎಂದು ಸೂಚಿಸುವಲ್ಲಿ ಯಾವುದೇ ವಿಶೇಷತೆ ಇಲ್ಲ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಪಂಚಮರಾಗಿ ಊರ ಹೊರಗಿದ್ದ ಅಸ್ಪೃಶ್ಯರನ್ನು ಅರಮನೆ ವ್ಯವಸ್ಥೆ ತನ್ನ ಹಣ್ಣಿನ ತೋಟದಲ್ಲಿ ಕೆಲಸ ಮಾಡಲು ಅವಕಾಶ ಕಲ್ಪಿಸಿದ್ದಿರಬೇಕು. ಅದನ್ನು ಪಯಸ್ ಚಿಕ್ಕ ನದಿಯ ಆಚೆಗೆ ವಾಸಿಸುತ್ತಿದ್ದ ಮೂರರು ಎಂದು ಹೇಳುವ ಮೂಲಕ ಸೂಚನೆ ನೀಡಿದ್ದಾನೆ. ಕಲ್ಲಿನ ಮೇಲೆ ಊಟ ಬಡಿಸುವ ಅಂದಿನ ಅರಮನೆ ವ್ಯವಸ್ಥೆ ಅವರಿಗೆ ಕಲ್ಲು ತಟ್ಟೆಗಳನ್ನು ಕೆತ್ತನೆ ಮಾಡಿಸಿದ್ದಿರಬೇಕು. ಶೋಷಣೆಯ ವ್ಯವಸ್ಥೆಯಲ್ಲೂ ಕಲೆಯ ಚಿತ್ತಾರ ಮೂಡಿಸಲು ಪ್ರಯತ್ನ ನಡೆದಿದ್ದಿರಬೇಕು. ಅದರ ಫಲವಾಗಿ ಊಟದ ತಟ್ಟೆಯ ಕಪ್ಪು ಕಲ್ಲಿನ ಚಪ್ಪಡಿಗಳು ನಮಗಿಂದು ದೊರಕುತ್ತಿರಬಹುದು.

ಹಂಪಿಯ ವಿವಿಧ ಕಡೆಗಳಲ್ಲಿದ್ದ ಇಂಥ ಊಟದ ಕಲ್ಲಿನ ಚಪ್ಪಡಿಗಳನ್ನು ಆಂಧ್ರ ಮೂಲದ ಸಂರಕ್ಷಣಾದಿಕಾರಿಯೊಬ್ಬರು ಗ್ರಾನೈಟ್ಸ್ ಕಲ್ಲಿನ ಕಟ್ಟಡದ ನಾಲೆಯ ಮೇಲೆ ಜೋಡಿಸಿಟ್ಟು ಸಂರಕ್ಷಿಸಿರಬಹುದು. ಅದರ ವಿಶೇಷತೆಯ ಕಡೆಗೆ ಜನರ ಗಮನ ಸೆಳೆಯಲು ಮತ್ತು ಈ ಮೂಲಕ ವಿಜಯನಗರದ ಕಲಾ ವೈಭವವನ್ನು ಮೆರೆಸಲು ನಾಲೆಯನ್ನು ಒಂದು ವೇದಿಕೆಯನ್ನಾಗಿ ರೂಪಿಸಿಕೊಂಡಿರಬಹುದು. ಅಲ್ಲದೆ ತಮ್ಮದೆ ಭಾಷಾ ಶೈಲಿಯಲ್ಲಿ ಆ ಸ್ಮಾರಕಗಳನ್ನು 'ಭೋಜನ ಶಾಲಾ' ಎಂದು ಕರೆದಿರಬಹುದು. ನೇರವಾಗಿಯೋ ಪರೋಕ್ಷವಾಗಿಯೋ ಇದು ಭಾರತೀಯ ಸಾಮಾಜಿಕ ಶ್ರೇಣಿ ವ್ಯವಸ್ಥೆಯ ನಕಾರಾತ್ಮಕ ಅಂಶಗಳನ್ನು ಸಕಾರಾತ್ಮಕವಾಗಿ ಬಿಂಬಿಸುವ ಕಾರ್ಯವಾಗಿದೆ. ಇದನ್ನು ಯಶಸ್ವಿಯಾಗಿ ನಿರ್ವಹಿಸಿದ ಪ್ರತೀಕವಾಗಿ 'ಭೋಜನಶಾಲೆ' ಯ ಅವಶೇಷ / ಸ್ಮಾರಕ ಇಂದಿಗೂ ಉಳಿದುಬಂದಿದೆ.]

■

# ಆಮುಖ



**ಕೃತಿ : ಆಮುಖ**
**ಲೇ: ಡಾ. ಕಮಲಾ ಹಂಪನಾ**
**ಪ್ರಕಾಶಕರು: ಸಿದ್ಧಲಿಂಗೇಶ್ವರ, ಪ್ರಕಾಶನ, ಗುಲ್ಬರ್ಗ**
**ಪುಟಗಳು : ೧೮೪**
**ಬೆಲೆ : ರೂ. ೧೧೫**

ನಾಡೋಜ ಕಮಲಾ ಹಂಪನಾ ಅವರು ಮೈಸೂರಿನಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ಬೆಂಗಳೂರಿಗೆ ಅಧ್ಯಾಪಕಿಯಾಗಿ ಬಂದು ಸೇರಿದಾಗ (1960), ಅಲ್ಲಿದ್ದ ಕನ್ನಡ ಸಾಹಿತಿಗಳನ್ನು ಒಬ್ಬೊಬ್ಬರನ್ನಾಗಿ ಪರಿಚಯಿಸಿ ಕೊಳ್ಳತೊಡಗಿದರು. ಅವರು ಕನ್ನಡ ಉಪನ್ಯಾಸಕಿಯಾದ್ದರಿಂದ ಅವರ ಲಕ್ಷ್ಯ ಕನ್ನಡ ಸಾಹಿತಿಗಳ ಕಡೆಗೇ ಹೊರಳಿದ್ದರಲ್ಲಿ ಆಶ್ಚರ್ಯವಿಲ್ಲ. ಆದರೆ ಅವರು ಕೇವಲ ಅಧ್ಯಾಪಕಿ ಮಾತ್ರವಲ್ಲದೆ ಒಬ್ಬ ಪ್ರಜ್ಞಾವಂತ ಮಹಿಳೆಯೂ ಆದ್ದರಿಂದ ಅವರಿಗೆ ಆ ಸಾಹಿತಿಗಳ ಜೀವನದಲ್ಲಿ ಅವರ ಅರ್ಧಾಂಗಿಯರ ಪಾತ್ರಗಳನ್ನು ತಿಳಿದುಕೊಳ್ಳುವ ಕುತೂಹಲ ಮೂಡಿತು. ಅದರ ಪರಿಣಾಮವಾಗಿ ಅವರ ಪರಿಚಯವನ್ನು ಮಾಡಿಕೊಂಡಿದ್ದಲ್ಲದೇ, ಸಾಹಿತಿಗಳ ಸಾಹಿತ್ಯ ರಚನೆಯಲ್ಲಿ ಅವರ ಪಾತ್ರವನ್ನೂ ಅರಿತುಕೊಂಡರು. ಅಲ್ಲದೇ ಅವರ ಇತರ ಸೃಜನಶೀಲ ಚಟುವಟಿಕೆಗಳ ಕಡೆಗೂ ಅವರ ಗಮನ ಹರಿಯಿತು. ಅವರ ವ್ಯಕ್ತಿತ್ವಗಳಿಗೆ ಅದರಿಂದ ಒದಗಿಬಂದಿರುವ ಅನನ್ಯತೆಯನ್ನು ಕಂಡಿರಿಸುವ ಪ್ರಯತ್ನದ ಫಲವೇ ಆಮುಖ ಬರಹಗಳ ಸಂಕಲನವಾಗಿದೆ.

ಆ ಕಾಲದಲ್ಲಿ ಸಾಹಿತ್ಯ ಲೋಕದ ತಾರೆಯರಂತಿದ್ದ ಮಾಸ್ತಿ, ಕುವೆಂಪು, ಡಿ.ಎಲ್.ಎನ್, ಗೋಕಾಕ್, ಡಿ. ಪುಟ್ಟಸ್ವಾಮಯ್ಯ, ಮಿರ್ಜಿ ಅಣ್ಣಾರಾಯರು, ಸಂಶೋಧಕರಾದ ಶಂ.ಭಾ. ಜೋಶಿ, ಕನ್ನಡದ ಕಟ್ಟಾಳು ದೇ.ಜೇ.ಗೌ., ಎಸ್. ವಿ. ರಂಗಣ್ಣ, ಅ.ನ.ಕೃ. ಮುಂತಾದವರ ಸಾಹಿತ್ಯಕ ಸಾಧನೆಗಳನ್ನು ಅಲ್ಲಿಯವರೆಗೆ ಪ್ರಕಟವಾಗಿದ್ದ ಅವರ ಕೃತಿಗಳನ್ನು ಅವರ ಅಪೇಕ್ಷೆಯ ಮೇರೆಗೆ ಆಮುಖ ದ ಅನುಬಂಧದಲ್ಲಿ ಕೊಡಲಾಗಿದೆ.

ಆದರೆ ನಮಗೆ ಇಲ್ಲಿ ಮುಖ್ಯವಾಗುವುದು ಮೇಲೆ ಕಾಣಿಸಿದ ಬರಹಗಾರರ ಬದುಕಿನಲ್ಲಿ ಅವರ ಅಧಾಂಗಿಯರು ವಹಿಸಿದ ಪಾತ್ರ. ಇವುಗಳನ್ನು ಮೂರು ಬಗೆಯಲ್ಲಿ ವಿಂಗಡಿಸಬಹುದು. ಮೊದಲನೆಯದು, ಸ್ವತಃ ಲೇಖಕಿಯರಾಗಿ ರೂಪುಗೊಳ್ಳುತ್ತಿದ್ದ ಶಾರದಾ ಗೋಕಾಕ್ ಮತ್ತು ಶಾಂತಾದೇವಿ ಮಾಳವಾಡ, ವಸಂತಾ ದೇವಿ ಅ.ನ.ಕೃ. ಇವರು ಪರಸ್ಪರ ತಮ್ಮ ಕೃತಿ ರಚನೆಯಲ್ಲಿ ಪಡೆದುಕೊಂಡ ಪ್ರೋತ್ಸಾಹ ಅಂದು ಬೀಜರೂಪವಾಗಿದ್ದುದು ಮುಂದೆ ಹೆಮ್ಮರವಾಗಿ ಬೆಳೆಯಲು ಕಾರಣವಾದುದು.

ಎರಡನೆಯದಾಗಿ, ಲೇಖಕರ ಪ್ರಥಮ ಓದುಗರಾಗಿ ಅವರ ಎಲ್ಲಾ ಕೃತಿಗಳಿಗೂ ಪ್ರಥಮ ಸ್ಪಂದನೆಯನ್ನು ದಾಖಲಿಸಿದ ಶ್ರೇಯಸ್ಸು ಇವರಿಗೆ ಸಲ್ಲಬೇಕು.

ಮೂರನೆಯದಾಗಿ, ಮನೆಯ ಅಲಂಕರಣ ಕಸೂತಿ ಇತ್ಯಾದಿಗಳ ಮೂಲಕ ಪ್ರಕಟವಾಗುತ್ತಿದ್ದ ಅವರ ಸೃಜನಶೀಲತೆ.

ಇವುಗಳಿಂದಾಗಿ ಅಂದು ಲೇಖಕರ ಬದುಕಿನಲ್ಲಿ ಅವರು ವಹಿಸಿದ ಪಾತ್ರದೊಂದಿಗೇ ಅವರ ಸ್ವತಂತ್ರ ವ್ಯಕ್ತಿತ್ವವೂ ಪ್ರಕಟವಾಗುತ್ತದೆ. ಹೀಗೆ ತಮ್ಮ ಸಾಹಿತ್ಯವನ್ನು ಲೇಖಕರ ಅರ್ಧಾಂಗಿಯರ ಬಗ್ಗೆ ಲೇಖಕರ ಅಭಿಪ್ರಾಯವೂ ಮನಮುಟ್ಟುವಂತೆ ಈ ಕೃತಿಯಲ್ಲಿ ದಾಖಲಾಗಿದೆ. ಉದಾಹರಣೆಗೆ, ಕುವೆಂಪು ಅವರು ತಮ್ಮನ್ನು 'ಹೇಮಿಯ ಗಂಡ'ನೆಂದು ಗುರುತಿಸಿಕೊಂಡಾಗ ಮಾತ್ರ ಸ್ವರ್ಗಕ್ಕೆ ಪ್ರವೇಶ ದೊರಕಿತೆಂದು ತಮ್ಮ ಕವಿತೆಯ ಮೂಲಕ ಸಾರಿಕೊಂಡಿದ್ದಾರೆ. ವಸಂತಾ ದೇವಿಯವರನ್ನು ಕುರಿತು ಬರೆದ ಲೇಖನವು 'ಪ್ರಜಾಮತ' ಪತ್ರಿಕೆಯಲ್ಲಿ ಪ್ರಕಟವಾದನಂತರ ಅದರ ಪ್ರತಿಯನ್ನು ಅ.ನ.ಕೃ ಅವರಿಗೆ ಮುಟ್ಟಿಸಿದಾಗ ಅವರು ಸಾರ್ವಜನಿಕವಾಗಿ ತಮ್ಮ ಪತ್ನಿಗೆ ಕೃತಜ್ಞತೆಯನ್ನು ಅರ್ಪಿಸುವ ಅವಕಾಶ ದೊರೆತದ್ದಕ್ಕೆ ಧನ್ಯತೆಯನ್ನು ಅನುಭವಿಸುತ್ತಾರೆ. ಎಸ್.ವಿ. ರಂಗಣ್ಣನವರಾದರೋ ತಮ್ಮ ಪತ್ನಿ ತಮಗಾಗಿ ಹೆಣೆದಿದ್ದ ಸ್ವೆಟರ್‌ಅನ್ನು ಅದು ಹರಿದಾಗಲೂ ಬಿಡದೇ ತೊಟ್ಟುಕೊಳ್ಳುವುದರ ಮೂಲಕ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುತ್ತಾರೆ.

**✍ ಡಾ. ಕೆ. ರಘುನಾಥ್**

ಮೇಲಿನ ನಿದರ್ಶನಗಳು ಅವರ ನಡುವೆ ಇದ್ದ ಅನ್ಯೋನ್ಯತೆ ಮತ್ತು ಸಾಮರಸ್ಯಗಳಿಗೆ ಕನ್ನಡಿ ಹಿಡಿಯುತ್ತವೆ. ಕಳೆದ ಶತಮಾನದ ಅರವತ್ತರ ದಶಕದಲ್ಲಿ ಮೂಡಿಬಂದ ಈ ಕೃತಿಗೆ ಒಂದು ಐತಿಹಾಸಿಕ ಮಹತ್ವವಿದೆ. ಅದೆಂದರೆ ಅಲ್ಲಿಯವರೆಗೆ ಯಾರೂ ಲೇಖಕರ ಪತ್ನಿಯರ ಕಡೆಗೆ ಕಣ್ಣೆತ್ತಿಯೂ ನೋಡಿರಲಿಲ್ಲ. ಅಂತಹ ಸಂದರ್ಭದಲ್ಲಿ ಅವರ ಸಂದರ್ಶನ ಮಾಡಿ, ಅವರ ವ್ಯಕ್ತಿತ್ವದ ಅನಾವರಣ ಮಾಡುವುದರ ಮೂಲಕ ಅವರ ವ್ಯಕ್ತಿ ಮತ್ವವನ್ನು ಕನ್ನಡದ ಜಗತ್ತಿಗೆ ಪರಿಚಯಿಸಿದ್ದು ನವ್ಯದ ಸಂದರ್ಭದಲ್ಲಿ ಬಹುತೇಕ ಮಹಿಳೆಯರನ್ನು ಭೋಗದ ಸಾಮಗ್ರಿಗಳಂತೆ ಚಿತ್ರಿಸುತ್ತಿದ್ದಾಗ ಅದಕ್ಕೆ ವೈದೃಶ್ಯವೋ ಎನ್ನುವಂತೆ ರಕ್ತಮಾಂಸಗಳಿಂದ ಕೂಡಿದ ಜೀವಂತ ವ್ಯಕ್ತಿಗಳಿಗೆ ನಮ್ಮ ಕಣ್ಣನ್ನು ತೆರೆಸಿದ್ದು ಇದರ ವೈಶಿಷ್ಟ್ಯವಾಗಿದೆ.

## ಮಹಾರಾಷ್ಟ್ರ ಬೋರ್ಡ್ ಎಸ್.ಎಸ್.ಸಿ. ಪರೀಕ್ಷಾ ಫಲಿತಾಂಶ

ಈ ವರ್ಷದ ಮಹಾರಾಷ್ಟ್ರ ಬೋರ್ಡ್ ಎಸ್.ಎಸ್.ಸಿ. ಪರೀಕ್ಷೆಯಲ್ಲಿ ಅಸೋಸಿಯೇಶನ್ ೬ ಸದಸ್ಯರ ಮಕ್ಕಳು – ಕೃತ್ತಿಕ ಉಪಾಧ್ಯಾಯ(ICSE), ಪ್ರಥಮ್ ರಂಗನಾಥ್, ಪ್ರಜ್ವಲ್ ಜಯಂತ್, ಪೃಥ್ವಿ ಪೂಜಾರಿ, ಅಂಕಿತಾ ವಿಜಯಕುಮಾರ್, ಶ್ರೇಯಸ್ ಆತ್ರೇಯ ವೆಂಕಟೇಶ್ – ಉತ್ತಮ ಗುಣಗಳನ್ನು ಪಡೆದು ಡಿಸ್ಟಿಂಗ್ಷನ್ ವರ್ಗದಲ್ಲಿ ಉತ್ತೀರ್ಣರಾಗಿರುತ್ತಾರೆ. ಇವರೆಲ್ಲರಿಗೂ ಉತ್ತಮ ಭವಿಷ್ಯವನ್ನು ಕೋರಿ ನೇಸರು ಹಾರ್ದಿಕವಾಗಿ ಅಭಿನಂದಿಸುತ್ತದೆ.

ಹಾಗೆಯೇ ಈ ಸಲವೂ ಸಹ ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ೧೦೦% ಉತ್ತೀರ್ಣತೆಯನ್ನು ಸಾಧಿಸಿದ ವಡಾಲಾದ ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿಯ ಪ್ರೌಢಶಾಲೆಗೂ ಹಾರ್ದಿಕ ಅಭಿನಂದನೆಗಳು ಸಲ್ಲುತ್ತವೆ.

# ಶ್ರೀಮತಿ ಪಂಕಜಮ್ಮ ಮಾಸ್ತಿ ವೆಂಕಟೇಶಯ್ಯಂಗಾರ್

**ಮೊದಲ ಉತ್ತರ ಮುಗುಳ್ನಗೆ**

ಸಂಜೆ ಐದು ಗಂಟೆಯಾದ ಮೇಲೆ ಮಾಸ್ತಿಯವರ ಮನೆಗೆ ಹೋಗಿ ಶ್ರೀಮತಿ "ಮಾಸ್ತಿಯವರು ಮನೆಯಲ್ಲಿ ಇದ್ದಾರೆಯೇ ?" ಎಂದು ಕೇಳಿದರೆ ಅದಕ್ಕೆ ಮೊದಲ ಉತ್ತರ ಮುಗುಳ್ನಗೆ. ಅನಂತರ ಆ ನಗುವಿನಷ್ಟೆ ಮೃದುವಾದ ಮಾತುಗಳು. "ಅವರು ಈ ವೇಳೆಯಲ್ಲಿ ಮನೆಯಲ್ಲಿ ಇರುವುದಿಲ್ಲ ಎನ್ನುವುದು ನಿಮಗೆ ತಿಳಿಯದೆ ? ಅವರನ್ನು ನೀವು ಮನೆಯಲ್ಲಿ ಕಾಣಬೇಕಾದರೆ ಸಂಜೆ ಐದು ಗಂಟೆಗೆ ಮೊದಲೇ ಬರಬೇಕು. ಈಗ ಅವರು ಕ್ಲಬ್ಬಿನಲ್ಲಿ ಇರುತ್ತಾರೆ"

ಈ ಕೆಲವು ಮಾತುಗಳಿಂದ ತಮ್ಮನ್ನು ಕಾಣಬಂದವರನ್ನು ಮೊದಲನೆಯ ಪರಿಚಯದಲ್ಲಿಯೇ ಗೆದ್ದುಬಿಡುವವರು ಶ್ರೀಮತಿ ಮಾಸ್ತಿಯವರು. ಅವರನ್ನು ಕಾಣುತ್ತಿದ್ದ ಹಾಗೆಯೇ ಮಾಸ್ತಿಯವರನ್ನು ಕಂಡಾಗ ಉಂಟಾಗುವ ಒಂದು ಗೌರವಭಾವನೆ ನಮ್ಮ ಮನಸ್ಸಿನಲ್ಲಿ ಉಂಟಾದರೆ ಆಶ್ಚರ್ಯವಲ್ಲ. ಗುಂಗುರು ಕೂದಲು, ದುಂಡುಮುಖ, ತೇಜಸ್ಸಿನಿಂದ ಹೊಳೆಯುವ ಕಣ್ಣುಗಳು, ಎತ್ತರವೂ ಅಲ್ಲ- ಕುಳ್ಳೂ ಅಲ್ಲದ ಮಧ್ಯಮಟ್ಟದ ದೇಹ, ಅದಕ್ಕೆ ಶೋಭೆಯನ್ನು ತರಲು ಸುತ್ತಿ ಉಟ್ಟಿರುವ ಐಯ್ಯಂಗಾರ್ ಮಾದರಿಯ ಸೀರೆ, ಇವೆಲ್ಲಕ್ಕೂ ಒಪ್ಪವಿಟ್ಟಂತೆ ಮೈಯ ಹೊಂಬಣ್ಣ- ಇದು ಹೊರನೋಟಕ್ಕೆ ಕಾಣುವ ಶ್ರೀಮತಿ ಮಾಸ್ತಿಯವರ ಚಿತ್ರ.

ಶ್ರೀಮತಿ ಸೌಭಾಗ್ಯವತಿ ಮಾಸ್ತಿಯವರ ಹೆಸರು ಪಂಕಜಮ್ಮ. ಆ ಹೆಸರು ಅವರಿಗೆ ಅನ್ವರ್ಥವಾಗಿದೆಯೆಂದೇ ಹೇಳಬಹುದು. ಅಂಬಿಲ್ ಕೃಷ್ಣಸ್ವಾಮಿ ಆಯಂಗಾರರು ಇವರ ತಂದೆ. ತಾಯಿಯ ಹೆಸರು ರಾಘವಮ್ಮ. ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದಿ ಬಿ.ಎ. ಪರೀಕ್ಷೆಗೆ ಕುಳಿತವರಲ್ಲಿ ಕೃಷ್ಣಸ್ವಾಮಿ ಐಯಂಗಾರರು ಆ ಪ್ರಾಂತಕ್ಕೆ ಪ್ರಪ್ರಥಮರು. ತೇರ್ಗಡೆಯಾದವರಲ್ಲಿಯೂ ಪ್ರಪ್ರಥಮರು. ಮೈಸೂರು ಸರ್ಕಾರದ ಹುದ್ದೆಯಲ್ಲಿ ಅಸಿಸ್ಟಂಟ್ ಕಮಿಷನರಾಗಿ ನಿವೃತ್ತರಾದರು. ಇಂತಹ ವಿದ್ಯಾವಂತ ತಂದೆಯ ಮಗಳು ಪಂಕಜಮ್ಮ.

**ತಾಯಿಯ ಕಡೆಯಿಂದ**

ಇವರ ತಾಯಿ ರಾಘವಮ್ಮನವರು ಮೈಸೂರಿನ ಪ್ರಸಿದ್ಧ ವಕೀಲರಾದ ಜೋಡಿದಾರ್ ವೆಂಕಟಾಪುರದ ರಾಘವಾಚಾರ್ಯರ ಮಗಳು. ಮೈಸೂರಿನ ಮಹಾರಾಣಿ ಗರ್ಲ್ಸ್ ಹೈಸ್ಕೂಲಿನಲ್ಲಿ ಓದಿದವರು. ಇನ್ನೂ ವಿದ್ಯಾರ್ಥಿನಿ ಆಗಿದ್ದಾಗಲೆ ಮೈಸೂರು ಮಹಾರಾಣಿಯವರ ಸನ್ನಿಧಾನದಲ್ಲಿ ವೀಣೆ ನುಡಿಸಿ ಮಹಾರಾಣಿಯವರಿಂದ ಒಂದು ವೀಣೆಯನ್ನು ಬಹುಮಾನವಾಗಿ ಪಡೆದಿದ್ದರು. ಅಷ್ಟೆ ಅಲ್ಲದೆ ಪಿಟೀಲು ನುಡಿಸುವುದು, ಪಿಯಾನೋದಲ್ಲಿ ಪಾಶ್ಚಾತ್ಯ ಸಂಗೀತ ನುಡಿಸುವುದು ರಾಘವಮ್ಮನವರಿಗೆ ಬರುತ್ತಿತ್ತು. ಇವರ ಬುದ್ಧಿವಂತಿಕೆ, ಪ್ರತಿಭೆ ಬಹುಮುಖವಾದದ್ದು. ಹೆಣ್ಣು ಮಕ್ಕಳಿಗೆ ಸಹಜವಾಗಿಯೇ ಬರುವ ಪಾಕಶಾಸ್ತ್ರ, ಹೊಲಿಗೆ ಮತ್ತು ಕಸೂತಿ ಕೆಲಸಗಳಲ್ಲಿ ಅತ್ಯಂತ ಜಾಣ್ಮೆ ತೋರಿ, ತರಗತಿಯಲ್ಲೆ ಮೊದಲಿಗರೆಂದೆನಿಸಿ ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದಿದ್ದರು. ಅದನ್ನು ಈಗಲೂ ಅವರ ಮಗಳಾದ ಪಂಕಜಮ್ಮನವರು ಭದ್ರವಾಗಿ ಇಟ್ಟಿದ್ದಾರೆ. ಅತ್ಯಂತ ಸೂಕ್ಷ್ಮ ರೀತಿಯ ಕಸೂಲಿ ಕೆಲಸಗಳಲ್ಲಿಯೂ ಪಾರಂಗತರಾದ ಈ ತೀಕ್ಷ್ಣಮತಿ ಪಂಕಜಮ್ಮನವರ ತಾಯಿ.

**ಪತಿಯ ಮನೆಗೆ**

ಶ್ರೀಮತಿ ಮಾಸ್ತಿಯವರ ಒಡ ಹುಟ್ಟಿದವರು ಇಬ್ಬರು ತಮ್ಮಂದಿರು. ಕೇವಲ ಹನ್ನೆರಡು ವರುಷಗಳಾಗಿದ್ದಾಗ ಪಂಕಜಮ್ಮನವರಿಗೆ ಮಾಸ್ತಿಯವರೊಡನೆ ವಿವಾಹವಾಯಿತು. ಈ ಶುಭ ಮುಹೂರ್ತ ನಡೆದುದು 1910 ನೆಯ ಇಸವಿ ಜುಲೈ ತಿಂಗಳಲ್ಲಿ. ಆಗ ಮಾಸ್ತಿಯವರು ಬಿ.ಎ. ತರಗತಿಯಲ್ಲಿ ಓದುತ್ತಿದ್ದರು. ಇದಾದ ಎರಡು ವರ್ಷದಲ್ಲಿ- ಎಂದರೆ ಪಂಕಜಮ್ಮನವರಿಗೆ ಕೇವಲ ಹದಿನಾಲ್ಕು ವರ್ಷ ವಯಸ್ಸಾಗಿದ್ದಾಗ- ತಾಯಿಯ ವಿಯೋಗವಾಯಿತು.

ಮದುವೆಯಾದ ಮೂರುವರೆ ವರುಷಗಳ ನಂತರ ಶ್ರೀಮತಿ ಪಂಕಜಮ್ಮನವರು ಪತಿಗೃಹವನ್ನು ಸೇರಿದರು. ಪತಿಯ ಮನೆಯಲ್ಲಿ ಅತ್ತೆ ಮತ್ತು ಇಬ್ಬರು ಮೈದುನರೊಡನೆ ಹೊಂದಿಕೊಂಡು ಸುಖಮಯವಾದ ಸಂಸಾರವನ್ನು ನಡೆಸಿಕೊಂಡು ಬಂದರು. ಮನೆಯಲ್ಲಿ ಓದುವ ಇಬ್ಬರು ಹುಡುಗರು ಇದ್ದರು. ಪಂಕಜಮ್ಮನವರಿಗೆ ತಮ್ಮ ಅತ್ತೆಯವರ ಬಗ್ಗೆ ಅಪಾರ ಭಕ್ತಿ. ಅತ್ತೆಯವರ ಮಮತೆಯ ಮಾರ್ಗದರ್ಶನದಲ್ಲಿ ತಮ್ಮ ಬಾಳು ಅರಳಿತೆಂದು ಹೇಳುತ್ತಾರೆ. ಹೆಣ್ಣು ಮಕ್ಕಳನ್ನು ಹಡೆಯದ ಅವರ ಅತ್ತೆಯವರೂ ಸಹ ತಮ್ಮ ಈ ಸೊಸೆಯನ್ನೇ ಸ್ವಂತ ಮಗಳಂತೆ ಕಂಡರು. ಅತ್ತೆಯ ಅಧಿಕಾರವನ್ನು ಎಂದೂ ಚಲಾಯಿಸಿದವರಲ್ಲ. ಸೊಸೆಯ ಮೇಲೆ ದಬ್ಬಾಳಿಕೆ ನಡೆಸಿದವರಲ್ಲ. ಮನೆಯ ಅನೇಕ ವಿಷಯಗಳಲ್ಲಿ ತಮ್ಮದೇ ನಿರ್ಣಯವನ್ನು ಎಂದೂ ಕೊಟ್ಟವರಲ್ಲ. "ಮನೆಯಲ್ಲಿ ನಮ್ಮ ಹುಡುಗಿ ಇದ್ದಾಳೆ, ವಿಚಾರಿಸಬೇಕು" ಎಂದು ಹೇಳಿ ಸೊಸೆಗೆ ವಿಷಯವನ್ನು ತಿಳಿಸಿ, ಜೊತೆಯಲ್ಲೇ ಆಲೋಚಿಸಿ, ಅನಂತರ ತಮ್ಮ ಒಪ್ಪಿಗೆ ಕೊಡುತ್ತಿದ್ದರು.

ಹಬ್ಬ ಹರಿದಿನಗಳೆಂದರೆ ಪಂಕಜಮ್ಮನವರಿಗೆ ಬಹು ಶ್ರದ್ಧೆ. ಶ್ರದ್ಧೆವಹಿಸಿ ಸಂಪ್ರದಾಯದಂತೆ ಎಲ್ಲವನ್ನೂ ಬಿಡದೆ ಆಚರಿಸುತ್ತಾರೆ. ಗುರು ಹಿರಿಯರ ಬಗ್ಗೆ ಅಪಾರ ಭಕ್ತಿ, ಗೌರವ. "ಅವರ ಎದುರು ನಾವೆಲ್ಲ ಎಷ್ಟರವರು" ಎಂದು ತಮ್ಮ ವಿನಯವನ್ನು ವ್ಯಕ್ತಪಡಿಸುತ್ತಾರೆ. ಸಂಗೀತ, ಲಲಿತಕಲೆಗಳಲ್ಲಿ ವಿಶೇಷ ಆಸಕ್ತಿ. ಪಂಕಜಮ್ಮನವರು ಗುರುತಿಸಬಹುದು. ಮನೆಯಲ್ಲಿ ಹಾಕಿರುವ ಚಿತ್ರ- ವಿಚಿತ್ರವಾದ ರಂಗವಲ್ಲಿಗಳನ್ನು ಕಂಡಾಗ ಅವರ ಕುಶಲತೆಯನ್ನು ಅವು ಎತ್ತಿ ತೋರಿಸುತ್ತವೆ. ನೆಲದಿಂದ ಗೋಡೆಯ ಕಡೆಗೆ ಕಣ್ಣು ಹಾಯಿಸಿದರೆ ಚಿತ್ರಕಲೆಯಲ್ಲಿ ಇರುವ ಅವರ ಪಾಂಡಿತ್ಯ, ಅಭಿರುಚಿ, ಶ್ರದ್ಧೆಯನ್ನು ಅಲ್ಲಿಯ ಚಿತ್ರಪಟಗಳು ನಮಗೆ ಪರಿಚಯಮಾಡಿಕೊಡುತ್ತವೆ.

ನಾಡೋಜ ಕಮಲಾ ಹಂಪನಾ

**ದೇಶಭಕ್ತಿ**

ಎರಡನೆಯ ಮಹಾಯುದ್ಧದ ಕಾಲದಲ್ಲಿ ಮೈಸೂರಿನ ಪ್ರಸಿದ್ಧ ಲೇಡಿ ಡಾಕ್ಟರ್ ಅಲ್ಬುಕರ್ಕ್ ಅವರ ಪರಿಚಯವಾಯಿತು. ಆಕೆ ರೆಡ್‌ಕ್ರಾಸ್ ಸಂಸ್ಥೆಯ ಪ್ರೆಸಿಡೆಂಟರೂ ಆಗಿದ್ದರು. ಈ ಗೆಳೆತನದಲ್ಲಿ ಪಂಕಜಮ್ಮನವರಿಗೆ ರಾಷ್ಟ್ರಸೇವೆ ಸಲ್ಲಿಸುವ ಸುಯೋಗ ಒದಗಿಬಂತು. ಯುದ್ಧನಿರತರಾದ ನಮ್ಮ ಸೈನಿಕರಿಗೆ ಕುಲಾವಿ, ಕಾಲುಚೀಲ, ಸ್ವೆಟರುಗಳು ಮುಂತಾದುವನ್ನು ನೂರು ಗಟ್ಟಲೆ ಹಾಕಿ ತನ್ಮೂಲಕ ರಾಷ್ಟ್ರಸೇವೆ ಸಲ್ಲಿಸಿದರು. ತಮ್ಮ ಕುಶಲತೆಯ ಸಹಾಯದಿಂದ ಮನೆಯಲ್ಲಿಯೇ ಇದ್ದುಕೊಂಡು ದೇಶಸೇವೆ ಸಲ್ಲಿಸಿದ ರಾಷ್ಟ್ರಪ್ರೇಮಿ ಮಹಿಳೆ ಶ್ರೀಮತಿ ಪಂಕಜಮ್ಮ.

**ಸಾಹಿತ್ಯಕ್ಕೆ ಕಾಣಿಕೆ**

ತಮಿಳಿನ ಮಗಳು- ಕನ್ನಡ ಸೊಸೆಯಾಗಿ ಬಂದು ಕನ್ನಡವನ್ನು ಬೆಳೆಸಿ ಕನ್ನಡಕ್ಕೂ ತಮ್ಮ ಕೈಲಾದ ಸೇವೆ ಸಲ್ಲಿಸಿದ್ದಾರೆ. ಹಿರಿಯ ಸಾಹಿತಿಯ ಮಡದಿ ಮಾತ್ರವಾಗದೆ ಸಾಹಿತ್ಯಕ್ಕೂ ತಮ್ಮ ಸ್ವಂತ ಕಾಣಿಕೆಯನ್ನು ಅರ್ಪಿಸಿದ್ದಾರೆ. 'ಬಸವನಗುಡಿ ಕಡಲೆಕಾಯಿ ಪರಿಷೆ', 'ಪಂಚಲಿಂಗದರ್ಶನ'- ಇವುಗಳನ್ನು ಕುರಿತು ಸಣ್ಣ ಕತೆಗಳನ್ನು ಬರೆದಿದ್ದಾರೆ. ಅಲ್ಲದೆ ವೇದಾಂತ ದೇಶಿಕರ ಸಂಸ್ಕೃತಗ್ರಂಥ 'ಪಾದುಕಾ ಸಹಸ್ರ' ವನ್ನು ಕನ್ನಡಿಸಿ, ಅರ್ಥ-ತಾತ್ಪರ್ಯವನ್ನು ರಚಿಸಿದ್ದಾರೆ. 'ಜೀವನ' ಪತ್ರಿಕೆಯನ್ನು ಮಾಸ್ತಿಯವರು ಇಪ್ಪತ್ತೆರಡು ವರ್ಷಕಾಲ ನಡೆಸಿ, ಬೇರೆ ಒಂದು ಸಂಪಾದಕ ಮಂಡಳಿಗೆ ಒಪ್ಪಿಸಿದಾಗ 'ಜೀವಣ್ಣ'ನ ಬೀಳ್ಕೊಡುಗೆಯನ್ನು 'ಹೋಗಿಬಾ, ಜೀವಣ್ಣ, ಸುಖವಾಗಲಿ' ಎಂಬ ಶೀರ್ಷಿಕೆಯಲ್ಲಿ ರಚಿಸಿ, ಅಂದು ನಡೆದ ಸಣ್ಣ ಸಮಾರಂಭದಲ್ಲಿ ಓದಿದರು. ಅವರ ಸಣ್ಣ ಕತೆಗಳೆರಡೂ ಮದ್ರಾಸು ಆಕಾಶವಾಣಿಯ ಕನ್ನಡ ಕಾರ್ಯಕ್ರಮದಲ್ಲಿ ಪ್ರಸಾರವಾಗಿವೆ. ಇವೆಲ್ಲ ಕತೆಯ ಹಿರಿಮೆಯನ್ನು ಸಾರುವುದರ ಜೊತೆಗೆ ಅವರ ಸಾಹಿತ್ಯಾಭಿರುಚಿಯನ್ನು ಜನತೆಗೆ ಪರಿಚಯ ಮಾಡಿಕೊಟ್ಟಿದೆ. ಕನ್ನಡ, ಇಂಗ್ಲಿಷ್, ಸಂಸ್ಕೃತ, ತಮಿಳಿನ ಅಭ್ಯಾಸ ಚೆನ್ನಾಗಿ ಇದ್ದು, ಚತುರ್ಭಾಷೆಗಳ ಪರಿಚಯವಿದೆ.

ಇಂಡಿಯನ್ ಪಿ.ಇ.ಎನ್. ಸಂಸ್ಥೆಯ ಮೇಡಾಮ್ ಸೋಫಿಯಾ ವಾಡಿಯಾ ಮುಂತಾದವರು ಮನೆಗೆ ಬಂದಾಗ ಅವರ ಜತೆಯಲ್ಲಿ ಇಂಗ್ಲಿಷಿನಲ್ಲಿ ನಿರರ್ಗಳವಾಗಿ ಮಾತನಾಡುತ್ತಾರೆ. ಅವರಿಗೆ ಇಂಗ್ಲಿಷ್ ಭಾಷೆಯ ಮೇಲೆ ಇರುವ ಪ್ರಭುತ್ವವನ್ನು ಅದು ಸ್ಪಷ್ಟಪಡಿಸುತ್ತದೆ. ಶ್ರೀಯುತರುಗಳಾದ ದ.ರಾ.ಬೇಂದ್ರೆ, ಗೋಕಾಕ್, ಮುಗಳಿ- ಇವರೆಲ್ಲ ತಮ್ಮ ಮನೆಯ ಅಣ್ಣ- ತಮ್ಮಂದಿರಂತೆ ಎನ್ನುತ್ತಾರೆ ಪಂಕಜಮ್ಮನವರು.

ಶ್ರೀಮತಿ ಪಂಕಜಮ್ಮನವರೂ ತಮ್ಮ ತಾಯಿಯವರಂತೆ ಮೈಸೂರು ಮಹಾರಾಣಿ

ಹೈಸ್ಕೂಲಿನಲ್ಲಿಯೇ ಓದಿದರು. ಸಂಗೀತಾಭ್ಯಾಸ ಎಂದರೆ ವೀಣೆ ನುಡಿಸುವುದನ್ನು ತಮ್ಮ ತಾಯಿಯವರಿಂದಲೇ ಕಲಿತರು. ತಮ್ಮ ಪತಿಗೃಹದಲ್ಲಿ ಎಲ್ಲ ಕೆಲಸ ಕಾರ್ಯಗಳ ಮಧ್ಯದಲ್ಲಿಯೂ ಈ ಕಲೆಯನ್ನು ಮರೆಯದೆ, ತಮ್ಮ ಮಕ್ಕಳ ಓದುಬರಹಕ್ಕೆ, ಸಂಗೀತ ಪಾಠಕ್ಕೆ ಅಸ್ತಿಭಾರ ಹಾಕಿದವರು ಅವರೇ. ಸಂಸಾರ ಬೆಳೆಯುತ್ತಾ ಬೆಳೆಯುತ್ತಾ ತಮ್ಮ ಮೊಮ್ಮಕ್ಕಳಿಗೂ ಇವರೇ, ಅಜ್ಜಿಯೂ, ಗುರುವೂ ಆದರು. ಈ ಪುಟ್ಟ ಮಕ್ಕಳಿಗೆ, ಓನಾಮ ತಿದ್ದಿದರು. ಲಂಡನ್, ಜರ್ಮನಿ ಮುಂತಾದ ಪರದೇಶಗಳಿಗೆ ಹೋಗಿ ವ್ಯಾಸಂಗ ಮಾಡಿ ಪ್ರತಿಭಾವಂತರಾಗಿ ವಿಶೇಷ ಮೇಲ್ಮೆಯನ್ನು ಸಂಪಾದಿಸಿ, ತಾಯ್ನಾಡಿಗೆ ಹೆಸರು ತರುವಂತೆ ಪ್ರೋತ್ಸಾಹ ನೀಡಿದವರೂ ಈ ತಾಯಿಯೇ.

**ಆದರ್ಶ ಕುಟುಂಬ**

ಇವರಿಗೆ ಆರು ಜನ ಹೆಣ್ಣುಮಕ್ಕಳು, ಹದಿನಾಲ್ಕು ಜನ ಮೊಮ್ಮಕ್ಕಳು. ಈ ಮೊಮ್ಮಕ್ಕಳಲ್ಲಿ ಒಬ್ಬರು ಈಗಲೂ ಮದರಾಸು ಆಕಾಶವಾಣಿಯಿಂದ ಆಗಾಗ್ಗೆ ಸಂಗೀತ ಹಾಡುತ್ತಾರೆ. ಇನ್ನಿಬ್ಬರು ಹುಡುಗಿಯರು ತಮಿಳು ಸಾಹಿತ್ಯದಿಂದ ಕನ್ನಡಕ್ಕೆ ಅನೇಕ ಕತೆಗಳನ್ನು ಪರಿವರ್ತಿಸಿ ಕಾಣಿಕೆಯನ್ನು ಇತ್ತಿದ್ದಾರೆ. ಮೊಮ್ಮಗಳು ತನ್ನ ಚಿತ್ರಕಲಾ ಪ್ರೌಢಿಮೆಯಿಂದ ದಸರಾ ಮುಂತಾದ ವಸ್ತು ಪ್ರದರ್ಶನಗಳಲ್ಲಿ ಬಹುಮಾನ ಪಡೆದಿದ್ದಾರೆ. ಮೊಮ್ಮಗ ಒಬ್ಬನಿಗೆ ತಾಳವಾದ್ಯದಲ್ಲಿ ಅಭಿರುಚಿ ಇರುವುದು ಕಂಡು ಅವನಿಗೆ ತಮ್ಮ ಮನೆಯಲ್ಲೇ ಮೊದಲ ಪಾಠ ಹೇಳಿಸಿದರು. ಅವನು ಮೃದಂಗವಾದನದಲ್ಲಿ ಗಟ್ಟಿಗನಾಗಿದ್ದಾನೆ. ಇವರ ಮೊಮ್ಮಕ್ಕಳಿಗೆಲ್ಲಾ ಇವರೆಂದರೆ ದೇವರಸಮಾನ, ಬಹು ಅಚ್ಚುಮೆಚ್ಚು. ಯಾರೂ ಇವರ ಮಾತಿಗೆ ಎಂದೂ ಎದುರಾಡಿದವರಲ್ಲ. ಮನೆಯತಾಯಿ ಈಕೆಯೇ. ತಂತಮ್ಮ ತಾಯಂದಿರನ್ನು ಮೊಮ್ಮಕ್ಕಳೆಲ್ಲ ಹೆಸರು ಹಿಡಿದೇ ಕರೆಯುತ್ತಾರೆ. "ಅಮ್ಮ" ಎನ್ನುವ ಕಲೆ ಇವರಿಗೆ ಮಾತ್ರ ಮೀಸಲು.

ಗವೀಪುರದಲ್ಲಿರುವ ಮಾಸ್ತಿ ದಂಪತಿಗಳ ಈ ಮನೆಗೆ ಹುಡುಗರೆಲ್ಲಾ ಸೇರಿ, "ಹೆಡ್ ಕ್ವಾರ್ಟರ್ಸ್- ಎಚ್.ಕ್ಯು." ಎಂದು ಹೆಸರಿಟ್ಟಿದ್ದಾರೆ. ಪತ್ರ ವ್ಯವಹಾರಗಳಲ್ಲಿ ಈ ಮನೆ ಎಚ್.ಕ್ಯು. ಇವೆಲ್ಲ ಸ್ಫೂರ್ತಿಯನ್ನು ಪಡೆದುದು ಶ್ರೀಮತಿ ಮಾಸ್ತಿ ಅವರಿಂದಲೇ.

ಬ್ಯೂನೋ ಐರ್‌ನಿಂದ ಶ್ರೀ ರಾಮಕೃಷ್ಣ ಆಶ್ರಮದ ಶಿಷ್ಯವರ್ಗದವರಾದ ಮೇಡಾಮ್ ಆಡಿಲನಾ ಗುರಾಲ್ಡಿಸ್ ಎಂಬುವರು ಪಂಕಜಮ್ಮನವರ ಆಪ್ತಮಿತ್ರರು. ಇವರ ಪತಿ ರಿಡಾರ್ಕೋ, ಗುರಾಲ್ಡಿಸ್ ಆ ಸೀಮೆಯ ಪ್ರಸಿದ್ಧ ಬರಹಗಾರರಲ್ಲಿ ಒಬ್ಬರು. ಮೇಡಾಮ್ ಅವರು ಭಾರತದ ಬಗೆಗೆ ಹೆಚ್ಚು ಆಸಕ್ತಿ ಉಳ್ಳವರು. ತಾವೇ ಎಲ್ಲವನ್ನೂ ಕಣ್ಣಾರೆ ಕಾಣಬೇಕು ಎಂಬ ಹಂಬಲದಿಂದ ಭಾರತಕ್ಕೆ ಬಂದು, ಬೆಂಗಳೂರಿನಲ್ಲಿ ಗವೀಪುರದ ವಿಸ್ತೀರ್ಣದಲ್ಲಿ ಇವರ ಮನೆ ಸಮೀಪದಲ್ಲಿ ವಾಸ ಮಾಡುತ್ತಿದ್ದರು. ದಿನವೂ ಮಾಸ್ತಿ ಅವರ ಮನೆಗೆ ಬರುವುದು ವಾಡಿಕೆ. ದಿನದಿನವೂ ಹಿಂದೂ ಮನೆತನವೊಂದರ ಹಬ್ಬ, ಹುಣ್ಣಿಮೆ, ಮದುವೆ ಮುಂತಾದುವನ್ನು ನೋಡಬೇಕೆಂಬಾಸೆ. ಮಾಸ್ತಿಯವರ ಮನೆಯಲ್ಲಿ ಇವನ್ನೆಲ್ಲ ನೋಡಿ ಮೆಚ್ಚಿಕೊಂಡರು. ಪಂಕಜಮ್ಮನವರು ತಮ್ಮ ಮೊಮ್ಮಗಳೊಬ್ಬರಿಗೆ ಈ ಸ್ನೇಹದ ಕುರುಹಾಗಿ ಗೆಳತಿಯ ಹೆಸರನ್ನಿಟ್ಟಿದ್ದಾರೆ. ಎಂದರೆ 'ಅಡಿಲಿನಾ' ಎಂಬುದನ್ನು ಚಿಕ್ಕದಾಗಿ 'ಲಿನ್ನೂ' ಎಂದು. ಮಹಾರಾಣಿ ಕಾಲೇಜಿನ ಕನ್ನಡ ಅಧ್ಯಾಪಕಿಯರಾಗಿದ್ದ ಶ್ರೀಮತಿ ಡಿ. ಚಂಪಾಬಾಯಿಯವರು ಮತ್ತೊಬ್ಬ ಗೆಳತಿ. ಪಂಕಜಮ್ಮ ಮತ್ತು ಮಾಸ್ತಿಯವರಿಗೆ ಇವರು ಸೋದರಿಯಂತೆ.

ಒಮ್ಮೆ ಶ್ರೀ ಸಿ. ರಾಜಗೋಪಾಲಾಚಾರ್ಯರು ತಮ್ಮ ಮನೆಗೆ ಬಂದಾಗ, ಆ ಸಂದರ್ಭದ ಸವಿನೆನಪಿನ ಕುರುಹು ಎಂದು ಶ್ರೀಮತಿ ಮಾಸ್ತಿಯವರು ಖಾದಿ ಬಟ್ಟೆಯಲ್ಲಿ ತಾವೇ ಎಳೆತೆಗೆದು Drawn thread work ಮಾಡಿದ 'ಓಂ' ಎಂದು ಕಸೂತಿ ಮಾಡಿದ ಪರದೆಯನ್ನೂ, 'UNIE and WIN' ಎಂದು ಕ್ರೋಷದಿಂದ ಮಾಡಿದ ಒಂದು ಮೇಜಿನ ಬಟ್ಟೆಯನ್ನೂ ಅರ್ಪಿಸಿದರು. ರಾಜಾಜಿ ತಮ್ಮನ್ನು ಬೀಳ್ಕೊಡಲು ಬಂದ ಮಾಸ್ತಿ ದಂಪತಿಗಳನ್ನೂ ಮಕ್ಕಳು, ಮೊಮ್ಮಕ್ಕಳನ್ನೂ ನೋಡಿ, ಮಾಸ್ತಿಯವರನ್ನು ಕುರಿತು- "ಏನು, ಒಂದು ಸಣ್ಣ ವಿಶ್ವವಿದ್ಯಾಲಯವೇ ಇದೆಯಲ್ಲ ನಿಮ್ಮ ಮನೆಯಲ್ಲಿ" ಎಂದರಂತೆ ನಗುತ್ತಾ, ಓದುವುದಕ್ಕೆ ಎಂದು ಮನೆಯಲ್ಲಿದ್ದ ಹುಡುಗರು, ಮಕ್ಕಳು, ಮೊಮ್ಮಕ್ಕಳು ಎಲ್ಲ ಒಟ್ಟು ಸೇರಿ ತಮ್ಮ ಮನೆ ಹಾಗೇ ಇತ್ತು ಎಂದು ಹೇಳುತ್ತಾರೆ ಪಂಕಜಮ್ಮನವರು ಹೆಮ್ಮೆಯಿಂದ.

ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳೆಯರ ಶಾಖೆಯಲ್ಲೂ ಅಧ್ಯಕ್ಷೆಯಾಗಿದ್ದು ಕೆಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಇದು ಮಾಸ್ತಿಯವರು ಉಪಾಧ್ಯಕ್ಷರಾಗಿ ಚುನಾಯಿತರಾಗುವ ಮೊದಲೆ.

ತಮ್ಮ ಪತಿ ಉಪಾಧ್ಯಕ್ಷ ಸ್ಥಾನಕ್ಕೆ ಬಂದ ಮೇಲೆ ತಾವೂ ಅಲ್ಲಿದ್ದರೆ ಚೆನ್ನಲ್ಲ ಎಂದು ಮಹಿಳಾ ಶಾಖೆಯ ಅಧ್ಯಕ್ಷ ಸ್ಥಾನವನ್ನು ಬಿಟ್ಟುಕೊಟ್ಟರು. ಪರಿಷತ್ತಿನವರು ಎಷ್ಟೋ ಒತ್ತಾಯಪಡಿಸಿದರು. ಆದರೂ ಶ್ರೀಮತಿ ಮಾಸ್ತಿಯವರು ತಮ್ಮ ನಿಲವನ್ನು ಬಿಡಲಿಲ್ಲ. ಮಾಸ್ತಿಯವರೂ ಇವರ ನಿಲವೇ ಸರಿ ಎಂದು ಅನುಮೋದಿಸಿದರು. ತಮ್ಮ ಮಕ್ಕಳು ಮೊಮ್ಮಕ್ಕಳೆಲ್ಲ ವಿದ್ಯಾಭ್ಯಾಸ ಕಲಿತ ಶಂಕರಪುರದಲ್ಲಿರುವ 'ಮಹಿಳಾ ಸೇವಾ ಸಮಾಜ' ದಲ್ಲಿ ಆಗ ಮುಖ್ಯೋಪಾಧ್ಯಾಯಿನಿಯರಾಗಿದ್ದ ಶ್ರೀಮತಿ ಲಕ್ಷ್ಮೀ ಬಾಯಿಯವರ ಹೆಸರಿನಲ್ಲಿ, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡದಲ್ಲಿ ಉತ್ತಮ ಅಂಶಗಳನ್ನು ಪಡೆದ ಮಗುವಿಗೆ ಎಂದು ಒಂದು ಬಹುಮಾನ ಇಟ್ಟಿದ್ದಾರೆ. ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಗೆಳತಿ ಡಿ. ಚಂಪಾಬಾಯಿಯವರ ಹೆಸರಿನಲ್ಲಿ ಒಂದು ದತ್ತಿ ಇಟ್ಟಿದ್ದಾರೆ.

ಮಾಸ್ತಿಯವರಿಗೆ ಅವರ ಅನೇಕ ಬರಹಗಳನ್ನು ಸಣ್ಣ ಕತೆಗಳನ್ನೂ ಪ್ರತಿಮಾಡಿ ಕೊಡುವವರು ಇವರೇ. ತಮ್ಮ ಪತಿಯ ಬರಹವನ್ನೆಲ್ಲಾ ಅತ್ಯಂತ ಆಸಕ್ತಿಯಿಂದ ಓದುತ್ತಾರೆ. ಕವಿ ಮಾಸ್ತಿಯವರಾದರೂ ಲಿಪಿಕಾರರು ಪಂಕಜಮ್ಮ. ಜೊತೆಗೆ ಮಾಸ್ತಿಯವರಲ್ಲಿ ಮಿಂಚುತ್ತಿದ್ದ ಅನೇಕ ಭಾವನೆಗಳಿಗೆ ಶಬ್ದರೂಪವನ್ನು ಕೊಟ್ಟು ಹೇಳಲು ಪ್ರಾರಂಭಿಸಿದಾಗ ತಕ್ಷಣವೇ ಪಂಕಜಮ್ಮನವರು ಮೊದಲನೆಯ ಬಾರಿಗೆ, ಅದನ್ನು ಹಾಗೆಯೇ ಬರೆದುಕೊಂಡು ಬಂದಿದ್ದಾರೆ. ಪಂಕಜಮ್ಮನವರ ಈ ನೆರವು ಇಲ್ಲದಿದ್ದರೆ ಮಾಸ್ತಿಯವರ ಅನೇಕ ಭಾವನೆಗಳಿಗೆ ಅಸ್ತಿತ್ವ ಸಿಕ್ಕುತ್ತಿರಲಿಲ್ಲ. ಜೊತೆಯಲ್ಲಿಯೇ ಕನ್ನಡ ಸಾಹಿತ್ಯಕ್ಕೆ ಅಪಾರ ನಷ್ಟ ಉಂಟಾಗುತ್ತಿತ್ತು.

ಪಂಕಜಮ್ಮನವರು ಒಳ್ಳೆಯ ಓದುಗರು ಮಾತ್ರವಲ್ಲದೆ ಕಾವ್ಯದಲ್ಲಿನ ಒಳ್ಳೆಯ ಗುಣಗಳನ್ನು ಮೆಚ್ಚಿಕೊಂಡ ಶ್ರೇಷ್ಠ ಸಹೃದಯರೂ ಆಗಿದ್ದಾರೆ. ಸೂಕ್ಷ್ಮಬುದ್ಧಿಯಿಂದ ಕೂಡಿದ ಪಂಕಜಮ್ಮನವರು ಉತ್ತಮ ವಿಮರ್ಶಕರೂ ಹೌದು. ಮಾಸ್ತಿಯವರೇ ಹೇಳುವಂತೆ "ನನಗೆ, ನನ್ನ ಸಾಹಿತ್ಯಕ್ಕೆ ಮೊಟ್ಟಮೊದಲು ಓದುಗರು, ವಿಮರ್ಶಕರು ನಮ್ಮ ಮನೆಯವರೇ". ಇದರಿಂದ ಮಾಸ್ತಿಯವರ ಸಾಹಿತ್ಯ ಸೇವೆಯಲ್ಲಿ ಶ್ರೀಮತಿಯವರ ಪಾತ್ರವನ್ನು ಅರಿವು ಮಾಡಿಕೊಳ್ಳಬಹುದು.

ಅಷ್ಟೇ ಅಲ್ಲದೆ ಮಾಸ್ತಿಯವರು "ನಾಲ್ವತ್ತರ ನಲುಗು" ಎನ್ನುವ ತಮ್ಮ ಕವಿತೆಯಲ್ಲಿ ತಮ್ಮ ಮನೆ ತುಂಬಿದ ಮಡದಿಯನ್ನು ಮನ ತುಂಬಿ ಹಾಡಿದ್ದಾರೆ. ಅತ್ತೆಯ ಮಗಳು ತಮ್ಮ ಬಾಳನ್ನು ಬೆಳಗಲು ಬಂದಳಂತೆ, ಮಾವನ ಮಗಳನ್ನು ಲೋಕದಮಾತೆ ತಮ್ಮ ಬದುಕನ್ನು ಪಾವನಮಾಡಲು ಕಳುಹಿದಳಂತೆ ! ಮಾಸ್ತಿಯವರಿಗೆ ಪಂಕಜಮ್ಮನವರಿಲ್ಲದ ಬದುಕು ಬದುಕಲ್ಲವಂತೆ ! ಹೀಗೆ ತಮ್ಮ ಪಟ್ಟದರಾಣಿ ಪಂಕಜಮ್ಮನವರನ್ನು ತಮ್ಮ ಬದುಕಿನ ಸರ್ವಸ್ವವೆಂದೇ ಹಾಡಿದ್ದಾರೆ.

ಬಾಳಿನ ಬೆಳಕೆ, ಜೀವದ ಕಳೆಯೆ
ಒದವಿದ ಸೊಗಸೆ,
ನೀತಿಯ ನೆಲೆಯೆ
ಹೇಳದೆ ಧರ್ಮದ
ಕಲಿಸುವ ಗುರುವೆ
ಬದುಕಿದು ಬದುಕೆ
ನೀನಿದನುಳಿಯೆ ?


ಪಂಕಜಮನವರು ಮಾಸ್ತಿಯವರ ಹೃದಯದಲ್ಲಿ ಹಾಗೂ ಜೀವನದಲ್ಲಿ ಎಂತಹ ಹಿರಿಯಸ್ಥಾನ ಪಡೆದಿದ್ದಾರೆ ಎನ್ನುವುದಕ್ಕೆ ಈ ಒಂದು ಪುಟ್ಟ ಕವಿತೆಯನ್ನು ಕನ್ನಡಿ ಹಿಡಿದಂತಿದೆ.

"ತಾಯ್ನುಡಿಯ ತಮ್ಮಡಿ" ಎಂದು ಕರೆದುಕೊಂಡು ಈ ನಾಡ ನೆಲ, ನುಡಿಗಳನ್ನು ಹಸನು ಮಾಡಿದವರು ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರರು. ಪತಿಯ ಕಾರ್ಯದಲ್ಲಿ ಇಂಬಾಗಿ ನಿಂತವರು ಶ್ರೀಮತಿ ಪಂಕಜಮ್ಮನವರು. ಬಾಳಿನ ಬೆಳಕಾಗಿ, ಜೀವನದ ಕಳೆಯಾಗಿ, ನೀತಿಯ ಸೆಲೆಯಾಗಿ ಹೇಳದೆ ಧರ್ಮವನ್ನು ಕಲಿಸುವ ಗುರುವಾಗಿ, ಇವರಿಲ್ಲದ ಬದುಕು ಬದುಕೇ ಅಲ್ಲ ಎನಿಸುವಂತೆ ಪತಿಯ ಸರ್ವಸ್ವವನ್ನೂ- ಆವರಿಸಿದರು ಪತ್ನಿ ಪಂಕಜಮ್ಮ.

ಕೃಪೆ : ಆಮುಖ

# ಅಯನಾವಲೋಕನ

ಕನ್ನಡ ಅಭಿನಂದನ ಗ್ರಂಥಗಳನ್ನು ಒಂದು ಪ್ರತ್ಯೇಕ ಪ್ರಕಾರವಾಗಿಯೇ ಅಭ್ಯಾಸ ಮಾಡುವ ಕಾಲ ಈಗ ಸನ್ನಿಹಿತವಾಗಿದೆಯೆಂದರೆ ಅದರಲ್ಲಿ ಉತ್ಪ್ರೇಕ್ಷೆಯಿಲ್ಲ. ಸ್ವಾತಂತ್ರ್ಯಪೂರ್ವದಲ್ಲಿಯೇ ಪ್ರಾರಂಭವಾದ ಅಭಿನಂದನ ಗ್ರಂಥಗಳ ಪ್ರಕಟಣೆ ಈ ಶತಮಾನದ ಪ್ರಾರಂಭದ ಹಂತದ ವರೆಗೂ ನಿರಂತರವಾಗಿ ನಡೆದು ಬಂದು ಹೆಚ್ಚು ಕಡಿಮೆ ನೂರು ವರ್ಷಗಳ ಇತಿಹಾಸವೇ ಇದಕ್ಕಿದೆ ಎನ್ನಬಹುದು. ಮುಖ್ಯವಾಗಿ ಅಭಿನಂದನ ಗ್ರಂಥಗಳಲ್ಲಿ ಎರಡು ಬಗೆ. ಮೊದಲನೆಯದು ವ್ಯಕ್ತಿಯ ಸಿದ್ಧಿ ಸಾಧನೆಗಳನ್ನು ಗುರುತಿಸಿ ಗೌರವಿಸುವ ಕೆಲಸಕ್ಕೆ ಇದು ಮೀಸಲು. ಎರಡನೆಯದು ಆ ವ್ಯಕ್ತಿಗೆ ಇಷ್ಟವಾದ ಪ್ರಕಾರಗಳನ್ನು ಕುರಿತ ಲೇಖನಗಳನ್ನು ಆ ಕ್ಷೇತ್ರದಲ್ಲಿನ ಪರಿಣತರಿಂದ ಆಹ್ವಾನಿಸಿ, ಸಂಪುಟ ರೂಪದಲ್ಲಿ ಪ್ರಕಟಿಸುವುದು. ನಮ್ಮಲ್ಲಿ ಮೊದಲ ಘಟ್ಟದಲ್ಲಿ ಬಂದಂತಹ ಕೃತಿಗಳೆಲ್ಲಾ ಮೊದಲಿನದಕ್ಕೆ ಮೀಸಲಾದರೆ, ಈಚೆಗೆ ಬರುತ್ತಿರುವ ಅಭಿನಂದನ ಗ್ರಂಥಗಳು ಎರಡನೆಯ ಬಗೆಯವು. ತಾಳ್ತಜೆಯವರನ್ನು ಕುರಿತ ಅಯನ ಈ ಸಾಲಿಗೆ ಸೇರುತ್ತದೆ.




**ಕೃತಿ : ಅಯನ**
**ಸಂಪಾದಕರು: ಡಾ. ಕೆ. ಚಿನ್ನಪ್ಪ ಗೌಡ**
**ಪ್ರಕಾಶಕರು: ತಾಳ್ತಜೆ ವಸಂತ ಕುಮಾರ್ ಅಭಿನಂದನಾ ಸಮಿತಿ, ಪುತ್ತೂರು**
**ಪುಟಗಳು : ೫೭೦**
**ಬೆಲೆ : ರೂ. ೪೦೦**

ಇದರಲ್ಲಿ ಸಂಪಾದಕರು ತಾಳ್ತಜೆಯವರೊಂದಿಗೆ ಮಾಡಿದ ಧೀರ್ಘವಾದ ಸಂವಾದ ಮೊದಲನೆಯ ಭಾಗ. ಎರಡನೆಯದರಲ್ಲಿ, ತಾಳ್ತಜೆ ತಮ್ಮ ಬದುಕಿನ ಸಿಂಹಾವಲೋಕನ ಮಾಡಿದ್ದಾರೆ. ಇದರಲ್ಲಿ ನನ್ನಂತಹ ಸಾಮಾನ್ಯ ವಿದ್ಯಾರ್ಥಿಯನ್ನೂ ನೆನೆಪಿಸಿಕೊಂಡಿರುವುದು ಅವರ ಔದಾರ್ಯಕ್ಕೆ ನಿದರ್ಶನವಾಗಿದೆ. ಮೂರನೆಯ ಭಾಗದಲ್ಲಿ ಹಿರಿಯರಿಂದ, ಗೆಳೆಯರಿಂದ ಸೇಸೆಯ ರೂಪದಲ್ಲಿ ನೆನಪಿನಂಗಳದ ಲೇಖನಗಳು ಸೇರ್ಪಡೆಗೊಂಡಿವೆ. ನಾಲ್ಕನೆಯ ಭಾಗದಲ್ಲಿ ತಂಗಿಯರು, ತಮ್ಮಂದಿರು ಇತರ ಬಂಧುಗಳು ತಮ್ಮ ಬದುಕಿನಲ್ಲಿ ತಾಳ್ತಜೆ ವಹಿಸಿದ ಪಾತ್ರವನ್ನು ಮನೋಜ್ಞವಾಗಿ ನೆನೆದಿರುವ ಚಿತ್ರಮಾಲೆಯಾಗಿದ್ದು ಹೆಚ್ಚು ಹೃದಯಸ್ಪರ್ಶಿಯಾಗಿವೆ. ಉದಾಹರಣೆಗೆ, ಒಬ್ಬ ತಂಗಿ ಏನನ್ನು ತಂದರೂ ಎಲ್ಲರೂ ಸಮನಾಗಿ ಹಂಚಿಕೊಂಡು ತಿನ್ನುವುದನ್ನು ಕಲಿತಿದ್ದನ್ನು ನೆನಪಿಸಿಕೊಳ್ಳುತ್ತಾರೆ. ಜಾನಪದ ಗೀತೆಯ ಅನುರಣನೆಯಂತೆ ಬೆನ್ನುತಟ್ಟಲು ಇರಬೇಕು ಅಣ್ಣ ತಮ್ಮಂದಿರು –ಅಕ್ಷರಶಃ ನಿಜಮಾಡಿದ ಶ್ರೇಯಸ್ಸು ತಾಳ್ತಜೆಯವರದು.

ಅದನ್ನು ಅವರು ತಮ್ಮ ತಂಗಿಯರಿಗೆ ಮಾತ್ರವಲ್ಲದೇ ತಮ್ಮ ಶ್ರೀಮತಿ ಮಣಿಮಾಲಿನಿಯವರ ಮನೆಯ ಮಕ್ಕಳ ಯೋಗ ಕ್ಷೇಮದ ಜವಾಬ್ದಾರಿಯನ್ನೂ ವಹಿಸಿಕೊಂಡದ್ದು ಅವರ ಕುಟುಂಬ ವಿಸ್ತರಣೆಗೆ, ವಾತ್ಸಲ್ಯ ಭಾವಕ್ಕೆ ನಿದರ್ಶನವಾಗಿದೆ. ಬಹುಶಃ ಬೇರೇ ಅಭಿನಂದನ ಗ್ರಂಥಗಳಲ್ಲಿ ಕಾಣದ ವೈಶಿಷ್ಟ್ಯ ಇಲ್ಲಿ ಪ್ರಕಟವಾಗಿದೆ.

ಐದನೆಯ ಭಾಗದಲ್ಲಿ ತಾಳ್ತಜೆ ಮತ್ತು ಮಣಿಮಾಲಿನಿಯವರ ಸಂಶೋಧನೆ ಮತ್ತು ಇತರ ಕೃತಿಗಳನ್ನು ಕುರಿತ ಲೇಖನಗಳಿವೆ. 'ಮುತ್ತಿನಸತ್ತಿಗೆ'ಯನ್ನು ಕುರಿತ ಡಾ.ಸುಬ್ಬಣ್ಣ ರೈ ಅವರ ಲೇಖನ ತಾಳ್ತಜೆಯವರ ಬರವಣಿಗೆಯ ವೈಶಿಷ್ಟ್ಯವನ್ನು ಎತ್ತಿಹಿಡಿಯುವಲ್ಲಿ ಸಫಲವಾಗಿದೆ. ಪ್ರಮಿಳಾ ಅವರ 'ದ್ರೌಪದಿ ಸಮೀಕ್ಷೆ' ಕುರಿತ ಲೇಖನ ಅದರ ಮಹತ್ವವನ್ನು ಸರಿಯಾಗಿ ಬಿಂಬಿಸುತ್ತದೆ. ತಾಳ್ತಜೆಯವರ ಸಂಶೋಧನೆಯನ್ನು ಕುರಿತ ಡಾ.ಜಿ.ಎನ್. ಉಪಾಧ್ಯರ ಲೇಖನ ಸಂಶೋಧನಾ ರಂಗಕ್ಕೆ ಅವರ ಕೊಡುಗೆಯನ್ನು ತಿಳಿಸಿಕೊಡುತ್ತದೆ. ಇನ್ನಷ್ಟು ವಿಸ್ತಾರವಾಗಿ ಈ ಭಾಗವನ್ನು ಬೆಳೆಸಬಹುದಾಗಿತ್ತು.

ಆರನೆಯ ಭಾಗದಲ್ಲಿ ತಾಳ್ತಜೆಯವರಿಗೆ ಪ್ರಿಯವಾದ ಕಾವ್ಯಮೀಮಾಂಸೆಯನ್ನು ಕುರಿತು ಪ್ರಕಟವಾದ ಇತರ ವಿದ್ವಾಂಸರ ಲೇಖನಗಳನ್ನು ಸೇರ್ಪಡೆಗೊಳಿಸಲಾಗಿದೆ. ಈ ಲೇಖನಗಳಲ್ಲಿ ಮೂರು ಬಗೆಯನ್ನು ಕಾಣಬಹುದು. ಒಂದು, ಭಾರತೀಯ ಕಾವ್ಯ ಮೀಮಾಂಸೆಯ ಪರಿಕಲ್ಪನೆಗಳು ಇಡೀ ವಿಶ್ವಕ್ಕೆ ಅನ್ವಯಿಸುತ್ತವೆ ಎನ್ನುವ ಅತಿರೇಕದ ನಿಲುವಿನ ಕೆ. ಆರ್. ಗಣೇಶ್ ಅವರ ಲೇಖನ. ಸಿ.ಎನ್. ಆರ್ ಅವರ ತೌಲನಿಕ ಅಧ್ಯಯನಕ್ಕೆ ಉತ್ತಮ ಮಾದರಿಯಾದ ಲೇಖನ. ಇದರಲ್ಲಿ ಎರಡೂ ಪರಿಕಲ್ಪನೆಗಳ (ಪಾಶ್ಚಾತ್ಯ ಮತ್ತು ಭಾರತೀಯ) ಸಾಧ್ಯತೆ ಮತ್ತು ಮಿತಿಗಳನ್ನು ಗುರುತಿಸಲಾಗಿದೆ. ಭಾರತೀಯ ಕಾವ್ಯ ಮೀಮಾಂಸೆಯೇ ಅಪ್ರಸ್ತುತ ಎನ್ನುವ ನಿಲುವನ್ನು ಒಳಗೊಂಡ ಹಿರೇಮಠರ ಲೇಖನ. ಇವುಗಳ ನಡುವೆ ಭಾರತೀಯ ಕಾವ್ಯ ಮೀಮಾಂಸೆಯ ಪರಿಕಲ್ಪನೆಗಳ ಆನ್ವಯಿಕ ಸಾಧ್ಯತೆ ಮತ್ತು ಮಿತಿಗಳನ್ನು ಕುರಿತ ಕೆ.ವಿ. ನಾರಾಯಣ್ ಅವರ ಲೇಖನ. ಉದಾಹರಣೆಗೆ ಧ್ವನಿ ಮತ್ತು ಸಾದಾರಣೀಕರಣ ಪರಿಕಲ್ಪನೆಗಳ ಕುರಿತ ಚರ್ಚೆಯನ್ನು ಒಳಗೊಂಡಿದೆ.

**✍ ಕೆ. ರಘುನಾಥ್**

ಇದರೊಂದಿಗೆ ಅವರ ಬದುಕಿನ ವಿಭಿನ್ನ ನೆಲೆಗಳನ್ನು ಸೆರೆಹಿಡಿಯುವ ಭಾವಚಿತ್ರಗಳನ್ನು ಔಚಿತ್ಯಪೂರ್ಣವಾಗಿ ಅಳವಡಿಸಲಾಗಿದೆ. ಹೀಗೆ 'ಅಯನ'ವು ತಾಳ್ತಜೆಯವರ ಬದುಕಿನ ಜಾತ್ರೆಯನ್ನು ಸಮರ್ಥವಾಗಿ ಸೆರೆಹಿಡಿಯುವಲ್ಲಿ ಸಫಲವಾಗಿದೆ. ಕೃತಿಯ ಕೊನೆಯಲ್ಲಿ ಅವರ ಜೀವನ ಮತ್ತು ಕೃತಿಗಳನ್ನು ಕುರಿತ ಪಟ್ಟಿಯನ್ನು ಕೊಡಲಾಗಿದೆ. ಅಲ್ಲದೇ ಕೃತಿಗೆ ಲೇಖಗಳನ್ನು ಲೇಖಕರ ವಿಳಾಸಗಳನ್ನೂ ತಪ್ಪಿಲ್ಲದೇ ಮುದ್ರಿಸಿರುವುದು ಇದನ್ನೊಂದು ಮಾದರಿ ಅಭಿನಂದನ ಗ್ರಂಥವನ್ನಾಗಿ ಮಾಡಿದೆ. ಇದಕ್ಕಾಗಿ ಪರಿಶ್ರಮವಹಿಸಿದ ಸಂಪಾದಕ ಮಂಡಳಿಯ ಡಾ. ಚಿನ್ನಪ್ಪ ಗೌಡ, ಡಾ. ವರದರಾಜ ಚಂದ್ರಗಿರಿಯವರ ಬಳಗಕ್ಕೆ ಅಭಿನಂದನೆಗಳು.


## MATRIMONIAL

Wanted suitable alliance for a graduate South Kannada Brahmin girl persuing her MBA, age 26 yrs, height 5'4'', Agastya Gotra, Shravana Nakshatra, working for CITI Bank, Bangalore based. Prospective parties may contact the father on his cell no. (0) 9986314974

Alliance Invited for a Madhwa working girl – DOB: 20-07-1987 koundanya Gotra Qualification: M. Pharm Age preference 29 to 31 years. Kannada Speaking Madwa / Smartha Byoys from Banglore/Mysore / Mumbai settled preferred. Good Job with Salary more than Rs. 50000/- p.m. preferred.
Contact :
**Mr. Prasad R. Rao – 9833075899 / 9939038734 / 21630716**

# ಡಾ. ತಾಳ್ತಜೆ ವಸಂತಕುಮಾರರಿಗೆ ಪುತ್ತೂರಿನಲ್ಲಿ ಅಭಿನಂದನೆ ಮತ್ತು 'ಅಯನ' ಅಭಿನಂದನಗ್ರಂಥ ಸಮರ್ಪಣೆ





ಬಳಿಕ ನಡೆದ ಗೋಷ್ಠಿಯಲ್ಲಿ ಡಾ. ಪಾದೇಕಲ್ಲು ವಿಷ್ಣು ಭಟ್ಟ ಅವರು 'ಕನ್ನಡ ಸಾಹಿತ್ಯ ಸಂಶೋಧನೆಗಳಿಗೆ ತಾಳ್ತಜೆ ವಸಂತ ಕುಮಾರ ಅವರ ಕೊಡುಗೆ' ಎಂಬ ವಿಚಾರವಾಗಿ ವಿಶೇಷ ಉಪನ್ಯಾಸ ನೀಡಿದರು. ಬಳಿಕ ವಸಂತ ಕುಮಾರರ ವ್ಯಕ್ತಿತ್ವವನ್ನು ರೂಪಿಸಿ ರೂಪಿಸಿದ ಎಂಟು ಮಂದಿ ಅವರ ಗುರುಗಳನ್ನು ಗೌರವಿಸುವ ಗುರುವಂದನ ಕಾರ್ಯಕ್ರಮವು ನಡೆಯಿತು.

ಅಪರಾಹ್ನ ಹಿರಿಯ ಯಕ್ಷಗಾನ ಅರ್ಥಧಾರಿಗಳಾದ ಶ್ರೀ ಕುಂಬಳೆ ಸುಂದರರಾವ್ ಮತ್ತು ಶ್ರೀ ಮೂಡಂಬೈಲು ಗೋಪಾಲ ಕೃಷ್ಣ ಶಾಸ್ತ್ರಿ ಮತ್ತು ಬಳಗದವರಿಂದ 'ಭರತಾಗಮನ' ಯಕ್ಷಗಾನ ತಾಳಮದ್ದಳೆ ನಡೆಯಿತು.

ಕನ್ನಡದ ಹಿರಿಯ ಪ್ರಾಧ್ಯಾಪಕರೂ, ಸಂಶೋಧಕರೂ ಆಗಿರುವ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮಾಜಿ ಮುಖ್ಯಸ್ಥರೂ ಆದ ಡಾ. ತಾಳ್ತಜೆ ವಸಂತ್ ಕುಮಾರ್ ಅವರನ್ನು ಅವರ ಕಾರ್ಯಕ್ಷೇತ್ರವಾದ ಪುತ್ತೂರಿನಲ್ಲಿ ಮಾರ್ಚ್ 17 ರಂದು ನಡೆದ ಹೃದಯಸ್ಪರ್ಶಿ ಸಮಾರಂಭದಲ್ಲಿ ಅಭಿನಂದಿಸಲಾಯಿತು ಮತ್ತು 'ಅಯನ' ಎಂಬ ಅಭಿನಂದನಾ ಗ್ರಂಥವನ್ನು ಸಮರ್ಪಿಸಲಾಯಿತು. ಡಾ. ತಾಳ್ತಜೆಯವರು ಸುಮಾರು 15 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದ ಪುತ್ತೂರಿನ ವಿವೇಕಾನಂದ ಕಾಲೇಜಿನಲ್ಲಿ ತಾಳ್ತಜೆಯವರ ಶಿಷ್ಯರೂ, ಸ್ನೇಹಿತರೂ, ಬಂಧುಗಳೂ, ಅಭಿಮಾನಿಗಳೂ ಸೇರಿ ರೂಪಿಸಿದ ತಾಳ್ತಜೆ ವಸಂತ ಕುಮಾರ ಅಭಿನಂದನ ಸಮಿತಿಯ ವತಿಯಿಂದ ದಿನಪೂರ್ತಿ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಸಮಾರಂಭವು ಜರಗಿತು. ಪೂರ್ವಾಹ್ನ ಜಿಲ್ಲೆಯ ಹಿರಿಯ ಸಾಂಸ್ಕೃತಿಕ ಮುಂದಾಳು ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ ಅವರ ಅಧ್ಯಕ್ಷತೆಯಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ಕನ್ನಡದ ಖ್ಯಾತ ಸಂಶೋಧನಾ ಕ್ಷೇತ್ರದಲ್ಲಿ ಡಾ. ತಾಳ್ತಜೆಯವರು ಮಾಡಿದ ಸಾಧನೆಗಳನ್ನು ಶ್ಲಾಘಿಸಿದ ಅವರು ಕನ್ನಡ ಸಂಶೋಧನಾ ಕ್ಷೇತ್ರದ ವ್ಯಾಪ್ತಿ, ಆಗಬೇಕಾದ ಕೆಲಸಗಳ ಬಗ್ಗೆ ವಿವರಿಸಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಶ್ರೀ ಪ್ರದೀಪ ಕುಮಾರ ಕಲ್ಕೂರ ಶುಭ ಹಾರೈಸಿದರು. ಬಳಿಕ ಶ್ರೀ ಗಣಪತಿ ಪದ್ಯಾಣ ಅವರಿಂದ ಕಾವ್ಯ ವಾಚನ ಕಾರ್ಯಕ್ರಮವು ನಡೆಯಿತು.

ಸಂಜೆ ನಡೆದ ಅಭಿನಂದನಾ ಸಮಾರಂಭದ ಅಧ್ಯಕ್ಷತೆಯನ್ನು ಹಿರಿಯ ಸಾಹಿತಿಗಳಾದ ನಾಡೋಜ ಡಾ. ಹಂ.ಪ. ನಾಗರಾಜಯ್ಯನವರು ವಹಿಸಿದ್ದರು. ಡಾ.ಬಿ.ಎ. ವಿವೇಕ ರೈ ಅವರು ಅಭಿನಂದನ ಗ್ರಂಥ 'ಅಯನ' ವನ್ನು ಅನಾವರಣಗೊಳಿಸಿ ಸಮರ್ಪಿಸಿದರು. ಬದುಕಿನುದ್ದಕ್ಕೂ ನೈತಿಕತೆಯನ್ನು ಕಾಪಾಡಿಕೊಂಡು ಬಂದ ಕನ್ನಡದ ಅಪೂರ್ವ ಪ್ರಾಧ್ಯಾಪಕ ಮತ್ತು ಸಂಸ್ಕೃತಿ ಸಂಶೋಧಕ ತಾಳ್ತಜೆ ಎಂಬುದಾಗಿ ವಿವೇಕ ರೈಯವರು ವಿಶ್ಲೇಷಿಸಿದರು. ಕಾರ್ಕಳದ ಪ್ರೊ. ಎಂ. ರಾಮಚಂದ್ರ ಅವರು ಅಭಿನಂದನಾ ಭಾಷಣ ಮಾಡಿದರು. ಮುಂಬಯಿ ಪ್ರತಿನಿಧಿಯಾಗಿರುವ ಡಾ. ಗಿರಿಜಾ ಶಾಸ್ತ್ರಿ ಅವರು ಶುಭ ಹಾರೈಸಿದರು. 'ಅಯನ'ದ ಪ್ರಧಾನ ಸಂಪಾದಕರಾದ ಚಿನ್ನಪ್ಪಗೌಡ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಇದೇ ಸಂದರ್ಭದಲ್ಲಿ ಡಾ. ಹಂ.ಪ. ನಾ ಮತ್ತು ಸಮಿತಿಯ ಗೌರವಾಧ್ಯಕ್ಷರಾದ ಶ್ರೀ ರಾಮ ಭಟ್ ಅವರು ಸಮಿತಿಯ ಪರವಾಗಿ ಡಾ. ತಾಳ್ತಜೆ ಅವರನ್ನು ಹಾರ, ತಾಂಬೂಲ, ಫಲ, ಸ್ಮರಣಿಕೆಗಳನ್ನಿತ್ತು ಅಭಿನಂದಿಸಿದರು. ಸಮಿತಿಯ ಕಾರ್ಯಾಧ್ಯಕ್ಷರಾದ ಪ್ರೊ. ಎ.ವಿ. ನಾರಾಯಣ ಅವರು ಸ್ವಾಗತಿಸಿದರು. ಕಾರ್ಯದರ್ಶಿ ಡಾ. ಗೋವಿಂದ ಪ್ರಸಾದ್ ಕಜೆಯವರು ವಂದಿಸಿದರು. ಶ್ರೀ ಮಹೇಶ ಕಜೆ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.

## ಕೇಂದ್ರ ಸಾಹಿತ್ಯ ಆಕಾಡೆಮಿ ಸಮಿತಿ ಡಾ. ಜಿ. ಎನ್. ಉಪಾಧ್ಯ ನೇಮಕ



ಕೇಂದ್ರ ಸಾಹಿತ್ಯ ಅಕಾಡೆಮಿ (ನವದಹಲಿ)ಯ ವಿವಿಧ ಸಮಿತಿಗಳನ್ನು ಪುನರಚಿಸ ಲಾಗಿದ್ದು 2013-2017ರ ಅವಧಿಗೆ ಕನ್ನಡ ಭಾಷಾ ಸಲಹಾ ಸಮಿತಿಗೆ ಹತ್ತು ಮಂದಿಯನ್ನು ಆಯ್ಕೆ ಮಾಡಲಾಗಿದ್ದು, ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ. ಎನ್. ಉಪಾಧ್ಯ ಅವರು ಸಲಹಾ ಮಂಡಳಿಯ ಸದಸ್ಯರಾಗಿ ನೇಮಕಗೊಂಡಿದ್ದಾರೆ.

ಖ್ಯಾತ ಸಂಶೋಧಕ ಡಾ. ಎಂ.ಎಂ. ಕಲ್ಬುರ್ಗಿ, ಡಾ. ಅರವಿಂದ ಮಾಲಗತ್ತಿ, ಡಾ. ನಾ. ದಾಮೋದರ ಶೆಟ್ಟಿ, ಡಾ. ಜಿ.ಎನ್. ಉಪಾಧ್ಯ, ಡಾ. ಲೋಹಿತ್ ನಾಯ್ಕರ್, ಡಾ. ಪಿ. ಚಂದ್ರಿಕಾ, ಡಾ. ಅರ್ಜುನ ಗೊಳಸಂಗಿ. ಪ್ರೊ. ಸಿ. ನಾಗಣ್ಣ, ಡಾ. ವಿಕ್ರಮ ವಿಸಾಜಿ ಅವರು ಸಲಹಾ ಸಮಿತಿಯ ಸದಸ್ಯರಾಗಿ ನೇಮಕಗೊಂಡಿದ್ದು, ಖ್ಯಾತ ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಈ ಸಮಿತಿಯ ಸಂಚಾಲಕರಾಗಿದ್ದಾರೆ.

2013-2017ನೇ ಸಾಲಿನ ಕಾರ್ಯಕಾರಿ ಸಮಿತಿ ಸಹ ಅಸ್ತಿತ್ವಕ್ಕೆ ಬಂದಿದ್ದು, ಅಧ್ಯಕ್ಷರಾಗಿ ಡಾ. ವಿಶ್ವನಾಥ ಪ್ರಸಾದ ತಿವಾರಿ, ಉಪಾಧ್ಯಕ್ಷರಾಗಿ ಡಾ. ಚಂದ್ರಶೇಖರ ಕಂಬಾರ, ಕನ್ನಡದ ಪ್ರತಿನಿಧಿಯಾಗಿ ಡಾ. ಬಾಲಚಂದ್ರ ನೆಮಾಡೆ ಅವರು ಸೇರಿದಂತೆ 28 ಮಂದಿ ನೇಮಕಗೊಂಡಿದ್ದಾರೆ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ ಡಾ. ಕೆ. ಶ್ರೀನಿವಾಸರಾವ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿಯ ಸಲಹಾ ಮಂಡಳಿಗೆ ನೇಮಕಗೊಂಡಿರುವ ಡಾ. ಜಿ. ಎನ್. ಉಪಾಧ್ಯ ಅವರು ಎರಡು ದಶಕಗಳಿಂದ ಮುಂಬಯಿಯಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಬಲವರ್ಧನೆಗೆ ಶ್ರಮಿಸುತ್ತಾ ಬಂದಿದ್ದಾರೆ. ಸಂಶೋಧಕರಾಗಿ ವಿಮರ್ಶಕರಾಗಿ ಹೆಸರು ಮಾಡಿರುವ ಡಾ. ಉಪಾಧ್ಯರ ಮೂವತ್ತಾರು ಕೃತಿಗಳು ಬೆಳಕು ಕಂಡಿವೆ. ಮುಂಬಯಿಯಲ್ಲಿ ಅಭಿಜಿತ್ ಪ್ರಕಾಶನದ ಮೂಲಕ ವಿವಿಧ ಲೇಖಕರ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ಹೊರತಂದಿದ್ದಾರೆ. ಉಪಾಧ್ಯ ಅವರ ಕೃತಿಗಳಿಗೆ ವಿವಿಧ ಪ್ರಶಸ್ತಿ ಪುರಸ್ಕಾರಗಳೂ ಲಭಿಸಿವೆ. ಡಾ. ಉಪಾಧ್ಯ ಅವರಿಗೆ 'ನೇಸರುವಿನ' ಅಭಿನಂದನೆಗಳು.

# ತ್ರಿವೇಣಿ ಅವರ "ಎರಡು ಜೀವ"

'ತ್ರಿವೇಣಿ'ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಅನಸೂಯಾ ಶಂಕರ್ (1928–1963) ಆಧುನಿಕ ಕನ್ನಡ ಕಥಾಸಾಹಿತ್ಯದಲ್ಲಿ ಒಂದು ಮುಖ್ಯ ಹೆಸರು. ಕೇವಲ ಮೂವತ್ತೈದು ವರ್ಷಗಳ ಕಾಲ ಬದುಕಿದ್ದ ಈ ಪ್ರತಿಭಾವಂತ ಲೇಖಕಿ ತಮ್ಮ ಬರವಣಿಗೆಯ ಜೀವನದ ಕೇವಲ ಹದಿಮೂರು ವರ್ಷಗಳಲ್ಲಿ ರಚಿಸಿದ ಕೃತಿಗಳ ಸಂಖ್ಯೆ ವಿಸ್ಮಯ ಹುಟ್ಟಿಸುವಂತಿದೆ. ಇಪ್ಪತ್ತೊಂದು ಕಾದಂಬರಿಗಳನ್ನೂ, ಮೂರು ಸಂಕಲನಗಳಲ್ಲಿ ಸಂಕಲಿತಗೊಂಡಿರುವ ನಲವತ್ತೊಂದು ಸಣ್ಣಕತೆಗಳನ್ನೂ ರಚಿಸಿದ ಈ ಲೇಖಕಿಯ ಅಕಾಲ ಮೃತ್ಯು ಕನ್ನಡ ಸಾಹಿತ್ಯಕ್ಕೆ ಒಂದು ದೊಡ್ಡ ನಷ್ಟವೇ. ದಿನನಿತ್ಯಾ ಕೌಟುಂಬಿಕ ಬದುಕಿನ ಸುಖದುಃಖಗಳನ್ನು ಲವಲವಿಕೆಯಿಂದ ನಿರೂಪಿಸಿದ ತ್ರಿವೇಣಿ ಮನೋವಿಜ್ಞಾನದ ಓದಿನಿಂದ ಪಡೆದ ತಿಳುವಳಿಕೆಯನ್ನು ತಮ್ಮ ಕಥನದಲ್ಲಿ ಅರ್ಥಪೂರ್ಣವಾಗಿ ಹೂಡಿ ಆ ಕಾಲದಲ್ಲಿ ಹೊಸತನ ತೋರಿದ್ದರು. ಅವರು ಕನ್ನಡದ ಅತ್ಯಂತ ಜನಪ್ರಿಯ ಲೇಖಕಿಯರಲ್ಲಿ ಒಬ್ಬರಾಗಿದ್ದು ಅವರ ಪುಸ್ತಕಗಳು ಹತ್ತಾರು ಮುದ್ರಣಗಳನ್ನು ಕಂಡು ಈಗಲೂ ಓದುಗರನ್ನು ಪಡೆದಿದೆ. ಅವರ "ಬೆಳ್ಳಿಮೋಡ", "ಶರಪಂಜರ" ಮತ್ತು "ಹಣ್ಣೆಲೆ ಚಿಗುರಿದಾಗ" ಕಾದಂಬರಿಗಳು ಚಲನಚಿತ್ರಗಳಾಗಿಯೂ ಪ್ರಸಿದ್ಧವಾಗಿವೆ. ಸ್ತ್ರೀ ಕೇಂದ್ರಿತ ಇವರ ಬರಹಗಳು ಮಹಿಳೆಯರ ಅಸ್ಮಿತೆಯ ಪ್ರಶ್ನೆಗಳನ್ನೂ, ಲಿಂಗ ಅಸಮಾನತೆಯ ಪ್ರಶ್ನೆಗಳನ್ನೂ ತಮ್ಮದೇ ಆದ ರೀತಿಯಲ್ಲಿ ಮುನ್ನೆಲೆಗೆ ತಂದಿವೆ. ಈಚೆಗೆ ಪ್ರಕಟವಾಗಿರುವ "ಮರೆಯಲಾಗದ ಕತೆಗಳು" (2012, ನುಡಿ ಪುಸ್ತಕ, ಬೆಂಗಳೂರು") ಮಾಲಿಕೆಯಲ್ಲಿ ತ್ರಿವೇಣಿಯವರ ಆಯ್ದ ಕತೆಗಳ ಸಂಕಲನವೊಂದು ಪ್ರಕಟವಾಗಿದ್ದು ಅದರಲ್ಲಿ ಅವರ ಎಂಟು ಮುಖ್ಯಕತೆಗಳು ಸೇರ್ಪಡೆಯಾಗಿವೆ. ಈ ಸಂಕಲನದ ಸಂಪಾದಕಿ ಡಾ. ಬಿ.ಎನ್. ಸುಮಿತ್ರಾಬಾಯಿ ಅವರು ಹೀಗೆ ಅಭಿಪ್ರಾಯ ಪಡುತ್ತಾರೆ. "ತ್ರಿವೇಣಿಯವರ ಕಾದಂಬರಿಗಳಿಗಿಂತ ಅವರ ಸಣ್ಣಕಥೆಗಳ ಹರಹು ದೊಡ್ಡದಿದೆ. ವಸ್ತುವೈವಿಧ್ಯ ತಂತ್ರಗಾರಿಕೆಗಳ ದೃಷ್ಟಿಯಿಂದ ಮಾತ್ರವಲ್ಲ. ಜೀವನಾರ್ಶನದ ದೃಷ್ಟಿಯಿಂದಲೂ ಈ ಕಥಾಲೋಕ ಹೆಚ್ಚು ಕುತೂಹಲ ಕಾರಿಯಾದದ್ದು. . ."

✍ ಟಿ. ಪಿ. ಅಶೋಕ

ಗಂಡು ಮತ್ತು ಹೆಣ್ಣು ಎಂಬ ಎರಡು ಜೀವಗಳು ಅಗ್ನಿಸಾಕ್ಷಿಯಾಗಿ ಮದುವೆಯಾಗಿ ಪರಸ್ಪರ ನಿಷ್ಠೆಯನ್ನು ಸಾಮಾಜಿಕ ಮತ್ತು ಧಾರ್ಮಿಕ ನೆಲೆಗಟ್ಟಿನಲ್ಲಿ ಬಹಿರಂಗವಾಗಿ ಘೋಷಿಸಿಕೊಂಡಿದ್ದರೂ ಈ ದಾಂಪತ್ಯ ಎಂಬುದು ಅದೆಷ್ಟು ಅಸ್ಥಿರ ಎಂಬ ಜಿಜ್ಞಾಸೆಯೊಂದು ತ್ರಿವೇಣಿಅವರ ಒಟ್ಟೂ ಕಥಾ ಸಾಹಿತ್ಯದಲ್ಲಿ ಬೇರೆ ಬೇರೆ ಕ್ರಮ ಮತ್ತು ಪ್ರಮಾಣಗಳಲ್ಲಿ ಉದ್ದಕ್ಕೂ ಹರಿದಿದೆ. ಒಂದು ಸಣ್ಣ ಸಂದೇಹ, ಕಾಯಿಲೆ ಅಥವಾ ಸಾವು ಸಂಬಂಧದ ಸ್ಮೃತಿಗಳನ್ನೇ ಅಳಿಸಿ ಹಾಕಿಬಿಡುವಷ್ಟು ಅವು ತೆಳುವಾಗಿರುತ್ತವೆ ಮತ್ತು ಅಸ್ಥಿರವಾಗಿರುತ್ತದೆ ಎಂಬುದಕ್ಕೆ ಅವರ ಸಾಹಿತ್ಯದಲ್ಲಿ ಅನೇಕ ನಿದರ್ಶನಗಳು ಕಂಡುಬರುತ್ತವೆ. ಪ್ರೇಮ, ವಿವಾಹ, ದಾಂಪತ್ಯ ಇವುಗಳ ಸುತ್ತ ಹೆಣೆದ ಗೃಹೀತಗಳೇ ಬೇರೆ, ನಿತ್ಯ ಜೀವನದ ವಾಸ್ತವಗಳೇ ಬೇರೆ ಎಂಬ ಕಟುಸತ್ಯವನ್ನು ತ್ರಿವೇಣಿ ಕೃತಿಗಳು ಮತ್ತೆ ಮತ್ತೆ ಸಾದರ ಪಡಿಸುವಂತಿವೆ. ತ್ರಿವೇಣಿ ಸಾಹಿತ್ಯದಲ್ಲಿ ಹೀಗೆ ಸಂಬಂಧಗಳನ್ನು ತೊರೆಯುವವರು ಮತ್ತು ಮರೆಯುವವರು ಸಾಮಾನ್ಯವಾಗಿ ಪುರುಷರೇ ಆಗಿರುವುದು ಗಮನಾರ್ಹ. ಇದು ಲಿಂಗಾಧಾರಿತ ಕೌಟುಂಬಿಕ ವ್ಯವಸ್ಥೆ ಕುರಿತ ಲೇಖಕಿಯ ಟೀಕೆಯ ಒಂದು ಮಾದರಿಯನ್ನೂ ಪ್ರಕಟಿಸುವಂತಿದೆ. ಸೀಮಿತವೆನಿಸಿದರೂ ಸಾಕಷ್ಟು ಪ್ರಖರವಾಗಿರುವ ಒಂದು ದೃಷ್ಟಿಕೋನ ಇದು.

"ಎರಡು ಜೀವ" ಒಂದು ಕುತೂಹಲಕಾರೀ ರಚನೆ. ಈ ಕತೆಯ ಉತ್ತಮಪುರುಷ ನಿರೂಪಕ ಒಂದು ಕುದುರೆ. ಅದರ ನಿರೂಪಣೆಯಲ್ಲಿ ಕತೆ ಹೀಗೆ ಪ್ರಾರಂಭವಾಗುತ್ತದೆ. "ದಟ್ಟವಾದ ಹಸಿರು ಹುಲ್ಲಿನ ಮೈದಾನ. ಕಣ್ಣು ಎಲ್ಲೆಲ್ಲಿ ಹರಿದಾಡಿದರೂ ಎಳೆಯ ಗರಿಕೆಯ ಹೊರತು ಬೇರೇನೂ ಇರಲಿಲ್ಲ. ನನ್ನ ಮನಸ್ಸು ಆನಂದದಿಂದ ಚಿಮ್ಮಿ ಮುಗಿಲಿಗೇರಿತು. ನಾನು ಹಸಿರು ಮೈದಾನದಲ್ಲಿ ಮನಬಂದಂತೆ ನೆಗೆದಾಡಿದೆ. ಮೃದುವಾದ ಹುಲ್ಲಿನ ಸ್ಪರ್ಶ ನನ್ನ ಹೃದಯದ ರಾಣಿ ಹೀರಳ ನೆನಪನ್ನು ತಂದೊಡ್ಡಿತು. ಹೀರಾ ಇಲ್ಲಿದ್ದಿದ್ದರೆ? ನಾವೆಷ್ಟು ಸುಖ ಪಡಬಹುದಾಗಿತ್ತು! ಹೀರಳ ಕೋಮಲ ಕಾಯ ಗರಿಕೆಗಿಂತಲೂ ಮೃದುವಾಗಿತ್ತು. ಮೊದಲ ಬಾರಿ ನಾವು ಸಂಧಿಸಿದಾಗಲೆ ಒಬ್ಬರಿಗೊಬ್ಬರು ಆತ್ಮಾರ್ಪಣೆ ಮಾಡಿಕೊಂಡಿದ್ದೆವು. ಹೀರಳಿಗೆ ನಾನು ನನ್ನ ಹೃದಯ ಬಿಚ್ಚಿ ತೋರಿಸಿದಾಗ, ಅವಳು ನಸು ಲಜ್ಜೆಯಿಂದ ನನ್ನ ಬಳಿ ಬಂದು ನನ್ನ ಕೊರಳಿನ ಮೇಲೆ ತಲೆಯಿಟ್ಟು ತನ್ನನ್ನು ನನಗೆ ಒಪ್ಪಿಸಿಕೊಂಡಿದ್ದಳು. ಅವಳ ಸ್ಪರ್ಶದಿಂದ ನನ್ನ ಮೈ ಪುಲಕಿತವಾಗಿತ್ತು. ಅಬ್ಬ! ಅವಳ ಮಿಂಚುಕಣ್ಣು. . ."! ಆದರೆ ಕುದುರೆ ತನ್ನ ಇನಿಯಳ ನೆನಪಿನಲ್ಲಿ ಸುಖಿಸುತ್ತಾ ಕೂಡ್ರುವ ಹಾಗಿಲ್ಲ. ಅದು ತನ್ನ ಮನುಷ್ಯ ಯಜಮಾನನ ಸೇವೆಗೆ ಸಿದ್ಧವಾಗಬೇಕು. ಅವನ ಗಾಡಿಯನ್ನು ಎಳೆದು ಅವನಿಗೆ ಹಣ ಬರುವ ಹಾಗೆ ಮಾಡಬೇಕು. ಅವನ ಮತ್ತು ಅವನ ಕುಟುಂಬದ ಸುಖಕ್ಕಾಗಿ ದುಡಿಯಬೇಕು. ಇದು ಕೇವಲ ತನ್ನ ಸಮಸ್ಯೆಯಲ್ಲ. ತನ್ನದೇ ವರ್ಗಕ್ಕೆ ಸೇರಿದ ಸೋನಿಯ ರಾಜರ ಸಮಸ್ಯೆಯೂ ಹೌದು. ಈ ಮನುಷ್ಯರಿಗೆ ತಮ್ಮ ಪ್ರೇಮ ಅರ್ಥವಾಗುವುದಿಲ್ಲ. ನಾವು ಅವರಿಗಾಗಿ ದುಡಿಯಲೆಂದೇ ಹುಟ್ಟಿರುವ ಜೀವಗಳೆಂದು ಅವರು ತಿಳಿದಂತಿದೆ. "ಮನುಷ್ಯನಷ್ಟು ದಯಾರಹಿತ ಪ್ರಾಣಿ ಬೇರೆ ಯಾವುದೂ ಇಲ್ಲ ಎಲ್ಲರೂ ಅವನ ಸ್ವಾರ್ಥಕ್ಕಾಗಿ ದುಡಿದು ಹಣ್ಣಾಗಬೇಕು . . . ಹುಲಿಗಿಂತಲೂ ಈತ ಕ್ರೂರಿ. . ." ಎರಡು ಕುದುರೆ ಜೋಡಿಗಳ ಪ್ರೇಮವನ್ನೂ, ಕುದುರೆ–ಮನುಷ್ಯನ ಅಸಮಾನ ನೆಲೆಯ ಸಂಬಂಧವನ್ನೂ ಲತೀಫ ಎಂಬ ಕುದುರೆಯ ಪ್ರಜ್ಞೆಯಲ್ಲಿ ನಿರೂಪಿಸುವ ತ್ರಿವೇಣಿ ಕತೆ ಈ ತಂತ್ರನಾವೀನ್ಯದಿಂದಾಗಿ ಓದುಗರ ಗಮನವನ್ನು ಸೆಳೆದುಕೊಳ್ಳುತ್ತದೆ. ಆದರೆ ಅದರ ಉಪಯೋಗ ಅಷ್ಟಕ್ಕೇ ಸೀಮಿತವಾಗಿಲ್ಲ. ತಾವು ಮನುಷ್ಯಲೋಕದ ಬಗ್ಗೆ ಮಾಡಬಹುದಾದ ಟೀಕೆ ಟಿಪ್ಪಣಿಗಳನ್ನು ಒಂದು ಪ್ರಾಣಿಯ ಮೂಲಕ ಮಾಡಿಸಿ ಹೆಚ್ಚಿನ ವಸ್ತುನಿಷ್ಠೆಯನ್ನೂ ಸಾಧಿಸುತ್ತಾರೆ. ಆಧುನಿಕಪೂರ್ವ ಕತೆಯ ತಂತ್ರವೊಂದನ್ನು ಆಧುನಿಕ ಕಥನಕ್ಕೂ ತಂದು ತಮ್ಮ ಸೃಜನಶೀಲ ಅಗತ್ಯವನ್ನು ಪೂರೈಸಿಕೊಳ್ಳುತ್ತಾರೆ. ಹೀಗಾಗಿ "ಎರಡು ಜೀವ" ಎಂಬ ಶೀರ್ಷಿಕೆಯು ಕತೆಯ ಪ್ರಾರಂಭದಿಂದಲೇ ತನ್ನ ಸಾಧ್ಯತೆಯನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ. ಲತೀಫ –ಹೀರಾ ಎರಡು ಜೀವಗಳು; ಹಾಗೆಯೇ ಸೋನಿಯಾ–ರಾಜ ಮತ್ತೆರಡು ಜೀವಗಳು. ಇನ್ನೂ ವಿಶಾಲವಾಗಿ ನೋಡಿದರೆ ಕುದುರೆ ಮತ್ತು ಮನುಷ್ಯ ಎರಡು ಜೀವಗಳು ಮಾತ್ರವಲ್ಲ ಎರಡು ವಿಭಿನ್ನ ಪ್ರಪಂಚಗಳೇ ಸರಿ. ಹೀಗೆ ಕುದುರೆಯ ಕಣ್ಣಿನಲ್ಲಿ ಮನುಷ್ಯ ಪ್ರಪಂಚದ ಮನುಷ್ಯ ನಡಾವಳಿಯ ಓರೆಕೋರೆಗಳು ಹೆಚ್ಚು ನಿಚ್ಚಳವಾಗಿ ತೋರುವಂಥ ತಂತ್ರವೊಂದನ್ನು ಪ್ರಯೋಗಿಸಿ ಲೇಖಕಿ ತಮ್ಮ ಕಥನಕೌಶಲ್ಯವನ್ನು ಮೆರೆದಿದ್ದಾರೆ.

ಒಮ್ಮೆ ಲತೀಫನು ಎಳೆಯುತ್ತಿದ್ದ ಉಸ್ಮಾನನ ಗಾಡಿಯಲ್ಲಿ ಚಂದು ಎಂಬ ಯುವಕ ಮತ್ತು ಅವನ ತಾಯಿ ಕುಳಿತಿದ್ದಾರೆ. ಚಂದುವಿಗೆ ಹೆಣ್ಣು ನೋಡಲು ಅವರು ಹೋಗುತ್ತಿದ್ದಾರೆ. ಮಗನ ಆತಂಕ, ಸಂಭ್ರಮ, ಆತುರ ಕಂಡು ಅವನ ತಾಯಿಗೆ ನಗು, ಹುಡುಗಿ ಕೈತೊಳೆದುಕೊಂಡು ಮುಟ್ಟುವ ಹಾಗಿದ್ದಳೆಂದೂ, ಅವರ ಮನೆಯವರು ತುಂಬಾ ಚೆನ್ನಾಗಿ ಮದುವೆ ಮಾಡಿಕೊಡುವರೆಂದೂ ಮಗನಿಗೆ ಸಮಾಧಾನ ಹೇಳುತ್ತಾಳೆ. ಹುಡುಗಿಯ ಮನೆ ಬರುತ್ತದೆ. ತಾಯಿ ಮಗ ಆ ಮನೆಯೊಳಗೆ ಹೋಗುತ್ತಾರೆ. ಸ್ವಲ್ಪ ಸಮಯದ ನಂತರ ಹೊರಗೆ ಬರುತ್ತಾರೆ. ನಿರೂಪಕ ಲತೀಫ ಕುತೂಹಲದಿಂದ ಚಂದುವಿನ ಮುಖ

ನೋಡುತ್ತದೆ. "ವಸಂತ ಕಾಲದ ಹೂವಿನಂತೆ ಅವನ ಮುಖ ಅರಳಿತ್ತು. ಉಲ್ಲಾಸದಿಂದ ಅವನು ಹಗುರವಾಗಿ ನಡೆಯುತ್ತಿದ್ದ". ಗಾಡಿ ಏರಿ ಮನೆಗೆ ವಾಪಸಾಗುತ್ತಾರೆ. ನಿರೂಪಕನ "ಕಣ್ಣುಗಳು ದಾರಿಯ ಮೇಲೆ ನೆಟ್ಟಿದ್ದರೂ ಕಿವಿಗಳು ತಾಯಿ, ಮಗನ ಮಾತನ್ನು ಆಲಿಸುತ್ತಿದ್ದವು." ದಂತದ ಬೊಂಬೆಯಂತಿದ್ದ ಶೀಲಾಳ ಜೊತೆ ಚಂದುವಿನ ಮದುವೆಯಾಗುತ್ತದೆ. ಒಂದೂವರೆ ತಿಂಗಳ ನಂತರ ಸಿನೇಮಾ ಟಾಕೀಸಿನ ಬಳಿ ಕುದುರೆ ಆ ದಂಪತಿಗಳನ್ನು ನೋಡುತ್ತದೆ. ತನ್ನ ಗಾಡಿಯಲ್ಲಿ ಕುಳಿತ ನವದಂಪತಿಗಳ ಸರಸ ಸಂಭಾಷಣೆಯನ್ನು ಕೇಳಿಸಿಕೊಳ್ಳುತ್ತದೆ. "ಯಾರಾದರೂ ನಿಮ್ಮ ಮಾತು ಕೇಳಿಸಿಕೊಂಡರೇನು ಗತಿ". ಇದು ಮನೆಯಲ್ಲ, ಬೀದಿ' ಎಂಬ ನಸುಮುನಿಸಿನ ಶೀಲಳ ಮಾತಿಗೆ ಚಂದು ಹೇಳುತ್ತಾನೆ: "ಈಗ ಇಲ್ಲಿ ಯಾರಿದ್ದಾರೆ. ಇದೊಂದು ಕುದುರೆ. ಅದರೆದುರಿಗೆ ನಾವೇನೂ ಬೇಕಾದರೂ ಮಾತನಾಡಬಹುದು." ಆಗ ಶೀಲಾ ಹೇಳುತ್ತಾಳೆ: "ಕುದುರೆಗೂ ಕಿವಿ ಇರುತ್ತದೆ". ಹೀಗೆ ತಮ್ಮ ಕತೆಯ ಉತ್ತಮಪುರುಷ ನಿರೂಪಕನನ್ನು ಮನುಷ್ಯ ಪ್ರಪಂಚದ ನಡಾವಳಿಗೆ ಸಾಕ್ಷಿಯನ್ನಾಗಿಸಿ ಲೇಖಕಿ ತಮ್ಮ ಕಥನವನ್ನು ಮುನ್ನೆಡುಸುತ್ತಾರೆ. ಆರೇಳು ತಿಂಗಳ ನಂತರ ಕುದುರೆ ಮತ್ತೆ ಈ ದಂಪತಿಗಳನ್ನು ನೋಡುತ್ತದೆ. ಈಗ ಶೀಲಾ ಗರ್ಭಿಣಿ. ಗಾಡಿಯನ್ನು ಏರಲಾರದ ಹೆಂಡತಿಯನ್ನು ಚಂದು ತಾನೇ ಎತ್ತಿಕೊಂಡು ಹತ್ತಿಸುತ್ತಾನೆ. ಶೀಲಳ ನೋವು, ಚಂದುವಿನ ಆತಂಕಗಳಿಗೆ ಕುದುರೆ ಸ್ಪಂದಿಸುತ್ತದೆ: "ಶೀಲಳ ಸ್ಥಿತಿ ನೋಡಿ ನನ್ನ ಕಣ್ಣಿನಲ್ಲಿ ನೀರೂರಿತು. ಆದಷ್ಟು ಬೇಗ ಆಸ್ಪತ್ರೆ ಸೇರಬೇಕೆಂದು ನಾನು ವೇಗವಾಗಿ ಓಡತೊಡಗಿದೆ. ಒಳಗಿನಿಂದ್ ಶೀಲ ಜೋರಾಗಿ ನರಳುವುದು ಕೇಳಿಸಿತು. ನನ್ನ ಓಟವನ್ನು ಕಡಿಮೆ ಮಾಡಿದೆ." ಶೀಲಾ ಆಸ್ಪತ್ರೆಯಲ್ಲಿ ಸಾಯುತ್ತಾಳೆ. ಚಂದು ಬಿಕ್ಕಳಿಸುತಿದ್ದ ಸದ್ದು ಕುದುರೆಗೆ ಕೇಳುತ್ತದೆ. ಪ್ರೇಮಿಗಳ ಅಗಲಿಕೆ ಕುದುರೆಗೂ ದುಃಖ ತರುತ್ತದೆ. "ಆ ದಿನ ನನಗೆ ಹುಲ್ಲು, ನೀರು ಸಹ ಸೇರಲಿಲ್ಲ." ಅದಾದ ಆರು ತಿಂಗಳ ನಂತರ ಗಾಡಿ ಸ್ಟ್ಯಾಂಡಿನಲ್ಲಿ ಲತೀಫ–ಸೋನಿಯಾ ತಮ್ಮ ತಮ್ಮ ಪ್ರೇಮಿಗಳ ಬಗ್ಗೆ ಮಾತನಾಡುತ್ತ ನಿಂತಿದ್ದಾಗ, "ಬನ್ನಿ ಗಾಡೀಲೇ ಹೋಗೋಣ" ಎಂಬ ಹೆಣ್ಣು ಕಂಠವೊಂದು ಉತ್ತರಿಸುತ್ತದೆ. "ನಾನು ಕಿವಿ ನಿಮಿರಿಸಿ ಆ ಚಿರಪರಿಚಿತ ದನಿ ಕೇಳಿ ಆ ಕಡೆ ತಿರುಗಿದೆ. ಚಂದು ತನ್ನ ನವವಧುವಿನೊಡನೆ ಆರೂವರೆ ಷೋಗೆ ಹೊರಟಿದ್ದ. ಮಾನವ ತನ್ಗೆ ಬಿದ್ದ ಪೆಟ್ಟಿನಿಂದ ಎಷ್ಟು ಬೇಗ ಚೇತರಿಸಿಕೊಳ್ಳಬಲ್ಲ! ನನಗೆ ತಲೆತಿರುಗಿದ ಹಾಗಾಗಿ ಕಣ್ಣು ಕತ್ತಲಿಟ್ಟಿತು." ಗಾಡಿಯಲ್ಲಿ ಕುಳಿತ ಈ ಜೋಡಿಯ ಸರಸ ಸಲ್ಲಾಪಗಳನ್ನು ಕೇಳುತ್ತ ಕೇಳುತ್ತ ಕುದುರೆಯ ಮನಸ್ಸಿನಲ್ಲಿ ಬಿರುಗಾಳಿ ಏಳುತ್ತದೆ. "ಮಾನವ ಎಷ್ಟು ಕೃತಘ್ನ!. . . ನನ್ನ ಹೀರಾ ಈ ಮಾನವ ಪ್ರಾಣಿಗಿಂತಲೂ ಎಷ್ಟೋ ಮೇಲು. ಶಂಶೀರ್ ತನಗಾಗಿ ಹಾತೊರೆದಾಗ ಹೀರಾ ಅವನಿಗೆ ಬುದ್ಧಿ ಹೇಳಿದ್ದಳು.ಅವನು ಮೊಂಡು ಹಿಡಿದಾಗ ಒದ್ದು ಕಳಿಸಿದ್ದಳು. ನನಗೂ ಹೀರಳನ್ನು ಬಿಟ್ಟು ಈ ಜಗತ್ತಿನಲ್ಲಿ ಬೇರೆ ಯಾರನ್ನೂ ಪ್ರೀತಿಸುವುದು ಸಾಧ್ಯವಿಲ್ಲ. ಒಂದು ವೇಳೆ ಹೀರಾ ನನಗಿಂತ ಮುಂಚಿತವಾಗಿ ಮಡಿದರೂ . . .. ಓ ದೇವರೆ ಹಾಗಾಗದಿರಲಿ . . . . ನಾನು ಬೇರೆ ಯಾರನ್ನೂ ಪ್ರೀತಿಸಲಾರೆ. ಒಂದು ವೇಳೆ ನಾನು ಮಡಿದರೆ ಹೀರಾ ಹುಲ್ಲು, ನೀರು ಬಿಟ್ಟು ಸಾಯುವುದಾಗಿ ಹೇಳಿದ್ದಾಳೆ. ಅವಳೊಬ್ಬ ಹುಚ್ಚಿ, ಮಾನವರ ಪ್ರೇಮ ನಮಗಿಂತಲೂ ಕೀಳಾಯಿ . . .." ಯೋಚಿಸುತ್ತ ಯೋಚಿಸುತ್ತ ಕುದುರೆಗೆ ಮಾನವ ಕುಲವನ್ನೇ ದಹಿಸುವ ದ್ವೇಷಾಗ್ನಿಯ ಹೊಗೆಯಿಂದ ಬುದ್ಧಿಗೆ ಮಂಕು ಕವಿದಂತಾಗಿ ಹುಚ್ಚಾಪಟ್ಟೆ ಓಡಲಾರಂಭಿಸುತ್ತದೆ. ಭೂತದಂತಹ ಮರಕ್ಕೆ ಡಿಕ್ಕಿ ಹೊಡೆಯುತ್ತದೆ. ಕಾಲು ಮುರಿಯುತ್ತದೆ. 'ಸರಿ ಮುಂಡೇದು ಎಲ್ಲಿ ಉಪಯೋಗವಾಗುತ್ತದೆ. ಅದನ್ನು ಗುಂಡಿಕ್ಕಿ ಹೊಡೆದು ಸಾಯಿಸಿಬಿಡಬೇಕು. ಅಬ್ದುಲ್ಲನಿಗೆ ಹೇಳಿದೀನಿ ಕೋವಿ ತರಲು ಹೋಗಿದಾನೆ..." ಎಂಬ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಕಣ್ಣುಮುಚ್ಚುತ್ತದೆ.

ಕೃಪೆ: ಸಂಯುಕ್ತ ಕರ್ನಾಟಕ

# 'ಪಾಚಿ ಕಟ್ಟಿದ ಪಾಗಾರ'ಕ್ಕೆ ಇನ್ಫೋಸಿಸ್ ಫೌಂಡೇಶನ್ ಪ್ರಶಸ್ತಿ



ಇತ್ತೀಚೆಗೆ, ಇದೇ ಎಪ್ರಿಲ್ 13ರಂದು ಧಾರವಾಡದಲ್ಲಿ ನಡೆದ ಸಮಾರಂಭದಲ್ಲಿ ಮುಂಬಯಿಯ ಕತೆಗಾರ್ತಿ ಮಿತ್ರಾ ವೆಂಕಟ್ರಾಜರ 'ಪಾಚಿ ಕಟ್ಟಿದ ಪಾಗಾರ' ಕಾದಂಬರಿಗೆ 2011ರ ಸಾಲಿನ ಇನ್ಫೋಸಿಸ್ ಫೌಂಡೇಶನ್ ಪ್ರಶಸ್ತಿಯನ್ನು ಕೊಡಲಾಯಿತು. ಪ್ರಶಸ್ತಿಯು ರೂ. 10,000 ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡು, ಪ್ರಶಸ್ತಿ ಫಲಕದಲ್ಲಿ 'ದೇಶಕಾಲಾತೀತವಾಗಿರುವ ಮನುಷ್ಯ ಸ್ವಭಾವದ ವೈರುಧ್ಯ–ವಿಸ್ಮಯಗಳ ಆಳಗಳನ್ನು ಅನುಭವದ ಒರೆಗಲ್ಲಿನಲ್ಲಿ ಶೋಧಿಸಿ, ಕತೆ–ಕಾದಂಬರಿಯ ಅಕ್ಷರ ಪ್ರಪಂಚದಲ್ಲಿ ಅನಾವರಣಗೊಳಿಸುವ ವಿಶಿಷ್ಟ ಕಥನಕಲೆಯಿಂದ ಗಮನ ಸೆಳೆದ ಮಿತ್ರಾ ಅವರು ದಕ್ಷಿಣಕನ್ನಡ ಜಿಲ್ಲೆಯ ಪ್ರಾದೇಶಿಕ ಸಂಸ್ಕೃತಿಯ ಅನನ್ಯತೆಗಳನ್ನು ಅದರೆಲ್ಲ ಭಾಷಿಕ ಭೌತಿಕ–ಅಭೌತಿಕ ವಿವರಗಳೊಂದಿಗೆ ಜೀವ ತುಂಬಿ ಕಥನಪ್ರಪಂಚದಲ್ಲಿ ದಾಖಲಿಸಿರುವ ಕನ್ನಡದ ಪ್ರತಿಭಾವಂತ ಕಥೆಗಾರರು' ಎಂದು ನಮೂದಿಸಿದ್ದಾರೆ. ಉತ್ತರ ಕರ್ನಾಟಕ ಲೇಖಕಿಯರ ಸಂಘದ ಆಶ್ರಯದಲ್ಲಿ ನಡೆದ ಈ ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ವಿಮರ್ಶಕ ಡಾ. ಗಿರಡ್ಡಿ ಗೋವಿಂದರಾಜ ಅವರು ವಹಿಸಿದ್ದರು. ಇನ್ನೋರ್ವ ವಿಮರ್ಶಕ ಡಾ. ಜಿ. ಎಮ್. ಹೆಗಡೆಯವರು ಕೃತಿಯ ಬಗ್ಗೆ ಮಾತನಾಡಿದರು. ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.


## MATRIMONIAL

Alliance invited for a Madwa Boy – DOB: 23.06.1984 Koundanya gotra Qualification: B.E.(Elec) working for a reputed IT company in Mumbai and settled in Mumbai. Age preference 23 to 25 years. Kannada Speaking Girls from Bangalore / Mysore / Mumbai with a good Job preferred. Contact :

**Mr. Prasad R. Rao – 98330 75899 / 99390 38734 / 21630716**

# TRIP TO HEAVEN AND BACK

## FIRST EVER ROAD-TRIP ON A ROYAL ENFIELD

This is a first of a series about my little explorations, misadventures and memoirs of my travels around India and elsewhere, starting with my 45-day motorbike road-trip to Leh-Ladakh, the crowning glory of India. This write-up gives a short introduction to the route, terrain and the challenges of such a journey. In the following articles in the next few months, I will be detailing these individuals bits of the journey as I made my way around in the center and north of India - all the funny experiences, unnecessary delays, chance meetings and lasting friendships forged through shared craziness and goof-ups! I hope it makes for an entertaining read

This was my second time to the heavenly destination that is Leh-Ladakh. The first time was with a big group from college in a big Volvo bus, a very different experience from the present one. That trip has its own share of memories, experiences and misadventures. I will share that at a later date. For now, more about my first ever motorbike trip!




I made this trip with a friend on an old Royal Enfield 350cc bullet, a G2 model that he is proud owner of. We rode solo most of the way, accompanied by other bullet riders we met on the way sometimes. Mostly it was just me and my friend on his Royal Enfield, with me riding pillion all along (I can't ride a bike…yet). I will, however, be writing only for myself (in the "I" not the "we"), since this is my interpretation of everything that happened on this epic road-trip to the Mighty Himalayas!

I started from home on the 29th of June, 2011. The journey took me a month and a half, and I returned home on the 14th of August, 2011. I took a 34-hour train ride from Mumbai to Jamshedpur, where my friend lives. I started riding from Jamshedpur, and then it was the bike all along…well almost! This was my riding route:

**Jamshedpur, Jharkhand – Ranchi, Jharkhand – Sasaram, Bihar – Kanpur, Uttar Pradesh – Agra, Uttar Pradesh – Delhi**

These were the places where I stayed a night. On the way, I passed a number of other places like Barhi, Varanasi, the Ganges, Allahabad, Mathura, the Yamuna etc. I rode on the beautiful and historic Grand Trunk road. I stayed in Delhi for a few days, getting the bullet fixed for high altitude riding and meeting friends.

**Delhi – Nangal, Punjab – Manali, Himachal Pradesh – Keylong, Himachal Pradesh – Sarchu, Jammu & Kashmir – Leh, Jammu & Kashmir**

Again, these were the places where I put up for a night. On the way were Kullu, Rohtang La, Darcha, Moray plains, Tang Lang La, Patsio etc. "La" is Tibetan for "pass".

While in Leh, I visited a few places like Pangong Tso, Tso Moriri, Thiksey Gompa, Hemis Gompa, Tangtse Gompa, Shanti Stupa and Khardung La. "Tso" is Tibetan for "lake"; "gompa" is Tibetan for "monastery". On these routes, we passed a number of places like Chang La, Tangtse, Karu, Upshi, Mahe etc. There were police check posts, creaky bridges, broken roads and ice shelves all along.

The return was through a different route.

**Leh, Jammu & Kashmir – Bodh Kharbu, Jammu & Kashmir – Srinagar, Jammu & Kashmir – Udhampur, Jammu & Kashmir – Amritsar, Punjab – Delhi**

We stayed in Srinagar for an extra day to relax and give the bike some rest. On the way was Lamayuru, Kargil, Drass, Sonmarg, Pathankot, Jalandhar, among others.

**Delhi – Ajmer, Rajasthan – Ahmadabad, Gujarat – Surat, Gujarat – Mumbai, Maharashtra (back home for me)**

I took an extra halt at Surat due to heavy rains. Places on the way were Jaipur, Udaipur, Vadodara, Valsad etc.

Through these few weeks, I experienced a number of weather conditions like rains, cold winds, blazing sun, dusty tracks; I walked, rode, ran and climbed, I took lifts in trucks, buses and cabs, I rode on 8-lane highways, through knee-deep muck, through streams of melt-snow, shaky plank bridges, and in places where there were no roads.




I labored on, and proudly made it back safely home to Mumbai. A total of approximately 7,500km on the bullet plus an additional 1700km on the train, I touched a travel distance close to 10,000km on this journey!

*I am a traveller/backpacker, writer/editor, amateur photographer, yoga enthusiast, amateur theater actor, and music afficionado living and working in Mumbai, India. Read about my travels and explorations in India and elsewhere at* ***https://nomadicrhythms.wordpress.com/*** *and* ***http://www.weekendnotes.com.au/profile/303164/***

***Poornima, Mysore***

Date of Publication : 10th of every month RNI No. 040015 / 83
MH / MR / North East / 093 / 2012- 2014 Date of Posting : 10th of every month at Mumbai Patrika Channel Sorting Office G.P.O.



# ಕರ್ನಾಟಕದ ಜಾನಪದ ಕಲೆಗಳ ಭವ್ಯ ದರ್ಶನ

ಮೈಸೂರು ಅಸೋಸಿಯೇಶನ್, ಮುಂಬೈ ಮತ್ತು ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು ಇವರು ಜತೆಗೂಡಿ ಮೇ 25 ರಂದು ಮುಂಬೈಯಲ್ಲಿ ಕರ್ನಾಟಕದ ಜಾನಪದ ಕಲೆಗಳ ಸಂಭ್ರಮ ಭರಿತ ಪ್ರದರ್ಶನದ ನಡೆಸಿದರು. ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಬಾನಂದೂರು ಕೆಂಪಯ್ಯ, ರೆಜಿಸ್ಟ್ರಾರ್ ಪರಡ್ಡಿ, ಹಾಗೂ ಮೈಸೂರು ಅಸೋಸಿಯೇಶನ್‌ನ ಅಧ್ಯಕ್ಷರಾದ ವಿ. ರಾಮಭದ್ರ ಅವರ ಉಪಸ್ಥಿತಿಯಲ್ಲಿ, ಮುಖ್ಯ ಅತಿಥಿಯಾದ ಮುಂಬೈ ಆಕಾಶವಾಣಿ ಕೇಂದ್ರದ ನಿವೃತ್ತ ನಿರ್ದೇಶಕ ಸಿ. ರಾಜಗೋಪಾಲ್ ಅವರು ದೀಪ ಬೆಳಗಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜಾನಪದ ಕಲೆಯು ಪಾರಂಪಾರಿಕ ಕಲೆಯಾಗಿದ್ದು ಜನಾಶ್ರಯದಲ್ಲಿ ಬೆಳೆದು ಬಂದಿದೆ ಮತ್ತು ಇಂದಿನ ಎಲ್ಲ ಕಲೆಯ ಮೂಲ ಸೆಲೆಯಾಗಿದೆ, ಇದನ್ನು ಇವತ್ತಿನ ಯುವ ಜನತೆ ಮನಗೊಂಡು ಈ ಕಲೆಗೆ ಪ್ರೋತ್ಸಾಹ ನೀಡುವಂತಾಗಬೇಕು ಎನ್ನುವುದೇ ಈ ಕಾರ್ಯಕ್ರಮದ ಉದ್ದಿಷ್ಟವಾಗಿತ್ತು.




ಬೆಳಗಾವಿ ಜಿಲ್ಲೆಯ ರಾಧಾಬಾಯಿ ಬಳಗದವರಿಂದ ಚೌಡಿಕೆ ಪದ, ಯಲ್ಲವ್ವ ಬಿ. ಮಾದರ ಮತ್ತು ಸಂಗಡಿಗರಿಂದ ಗೀಗೀ ಪದ, ಮಂಡ್ಯ ಜಿಲ್ಲೆಯ ಕೆ.ಬಿ ಸ್ವಾಮಿ ಮತ್ತು ಸಂಗಡಿಗರಿಂದ ಪೂಜ ಕುಣಿತ, ಬೆಂಗಳೂರಿನ ಮಹಾದೇವಮೂರ್ತಿ ಮತ್ತು ಬಳಗದವರಿಂದ ಕಂಸಾಳೆ ಕುಣಿತ, ದಾವಣಗೆರೆ ಜಿಲ್ಲೆಯ ಹಾಲಪ್ಪ ವೃಂದದವರಿಂದ ಜಡೆ ಕೋಲಾಟ, ಉತ್ತರ ಕನ್ನಡ ಜಿಲ್ಲೆಯ ಗಣಪ ಬಸವಗೌಡ ತಂಡದ ಹಾಲಕ್ಕಿ ಕುಣಿತ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕುಮಾರಿ ಶ್ವೇತ ಅವರ ಮಹಿಳಾ ಬಳಗದ ವೀರಗಾಸೆ ನೃತ್ಯಗಳು ಜಾನಪದ ಕಲಾ ಸಂಭ್ರಮಕ್ಕೆ ಮೆರಗು ನೀಡಿದವು. ಈ ಎಲ್ಲ ತಂಡಗಳೂ ಅಸೋಸಿಯೇಶನ್‌ನ ಸಭಾಂಗಣದಲ್ಲಿ ಪ್ರದರ್ಶನ ನೀಡಿದ್ದಲ್ಲದೆ, ತಾಯಿ ಭುವನೇಶ್ವರಿಯೊಡನೆ ಮೆರವಣಿಗೆಯಲ್ಲಿ ಭಾಗವಹಿಸಿ ಮಾಟುಂಗಾದ ರಾಜರಸ್ತೆಯಲ್ಲೂ ಪ್ರದರ್ಶನ ನೀಡಿ ಜನ ಮನ್ನಣೆ ಗಳಿಸಿದವು.

ಇದೇ ಕಾರ್ಯಕ್ರಮವನ್ನು ಮರುದಿನ ಮೇ 26 ರಂದು ಕರ್ನಾಟಕ ಜಾನಪದ ಅಕಾಡೆಮಿಯು ವಾಶಿ ಕನ್ನಡ ಸಂಘದವರ ಸಹಯೋಗದಲ್ಲಿ ನವಿ ಮುಂಬೈಯಲ್ಲಿಯೂ ನಡೆಸಿಕೊಟ್ಟಿತು.

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 ● Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938